## ಅಧ್ಯಾಯ 9

# ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವು ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನಗಳೊಂದಿಗೆ ಸಂಧಾನಗೊಳಿಸಿತು (ಭಾಗ 1)

೨ನೇ ಅಧ್ಯಾಯದೊಂದಿಗೆ, ನಾವು ರೋಮಾಪುರದವರಿಗೆ ಪತ್ರಿಕೆಯ ಎರಡನೆಯ ಅರ್ಧಭಾಗದ ಅಧ್ಯಯನವನ್ನು ಆರಂಭಿಸುವವರಾಗಿದ್ದೇವೆ. ಪುಸ್ತಕದ ಸಂಕ್ಷೀಪ್ತ ವರ್ಣನೆಯಲ್ಲಿ, ಮೊದಲ ಎಂಟು ಅಧ್ಯಾಯಗಳನ್ನು "ಸಿದ್ಧಾಂತಿಕ" ವಿಭಾಗ ಎಂದು ಮತ್ತು ಕಡೇ ಎಂಟು ಅಧ್ಯಾಯಗಳನ್ನು "ಅಭ್ಯಾಸಕ್ಕಾಗಿ" ವಿಭಾಗ ಎಂದು ಹೆಸರಿಸಲಾಗಿದೆ. "ಅಭ್ಯಾಸಕ್ಕಾಗಿ" ವಿಭಾಗವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ: "ವಿವರಣೆ" (9:1-11:36) ಮತ್ತು "ಅನ್ವಯಿಸುವಿಕೆ" (12:1—15:13). ೨ರಿಂದ 11 ಅಧ್ಯಾಯಗಳಲ್ಲಿ, Jim McGuigganನು ಕರೆಯುವ ಪ್ರಕಾರ, "ಯೆಹೂದಿ ಸಮಸ್ಯೆ"[1] ಬಗ್ಗೆ ಪೌಲನು ವಿವರಿಸುವದನ್ನು ನಾವು ನೋಡಲಿದ್ದೇವೆ: ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವು ಸಿನಾಯ್ ಪರ್ವತದಲ್ಲಿ ದೇವರು ಯೆಹೂದ್ಯರ ಸಂಗಡ ಮಾಡಿಕೊಂಡ ಒಡಂಬಡಿಕೆಯೊಂದಿಗೆ ಹೇಗೆ ಸಂಬಂಧ ಹೊಂದಿರುತ್ತದೆ.

೨ರಿಂದ 11 ಅಧ್ಯಾಯಗಳಲ್ಲಿನ ಕೆಲವು ಭಾಗಗಳು ಅರ್ಥಮಾಡಿಕೊಳ್ಳುವದಕ್ಕೆ ಸುಲಭವಾಗಿರುವದಿಲ್ಲ. N. T. Wright ಹೀಗೆ ಹೇಳುತ್ತಾನೆ, "ಮುಳ್ಳುಹಂದಿಯು ಮುಳ್ಳುಗಳಿಂದ [ತುಂಬಿರುವಂತೆ] ಕೂಡಿರುವ ಪ್ರಕಾರವೇ ರೋಮಾ ೨ರಿಂದ 11 ಅಧ್ಯಾಯಗಳ ಭಾಗವು ಕ್ಲೀಷ್ಠವಾದ ವಿಷಯಗಳಿಂದ ತುಂಬಿದೆ."[2] ಆತನು ಮುಂದುವರೆದು, "ಅನೇಕರು ಅದನ್ನು ಒಂದು ಕಠಿಣ ಕೆಲಸವೆಂದೆಣಿಸಿ ಕೈಬಿಟ್ಟುಬಿಟ್ಟಿದ್ದಾರೆ, ರೋಮಾಪುರದವರಿಗೆ ಪತ್ರಿಕೆಯನ್ನು ಆರಂಭದಲ್ಲಿ 'ಸುವಾರ್ತೆ'ಯ ಎಂಟು ಅಧ್ಯಾಯಗಳು, ಕೊನೆಯಲ್ಲಿ 'ಅನ್ವಯಿಸುವಿಕೆ'ಯ ನಾಲ್ಕು ಅಧ್ಯಾಯಗಳು, ಮತ್ತು ಮಧ್ಯದಲ್ಲು ಮೂರು ಒಗಟಿನಿಂದ ಕೂಡಿದ ಅಧ್ಯಾಯಗಳುಳ್ಳದ್ದೆಂದು ಪರಿಗಣಿಸುವಂತೆ ಮಾಡಿದ್ದಾರೆ" ಎಂದು

ಹೇಳುತ್ತಾನೆ.[3]

ಏಕೆ ಈ ಅಧ್ಯಾಯಗಳು ಅಷ್ಟೊಂದು ಕಷ್ಟಕರವಾಗಿರುತ್ತವೆ? ಅದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ, ಅವುಗಳು ಮೊದಲ ಶತಮಾನದ ಸಮಸ್ಯೆಯೊಂದರ ಬಗ್ಗೆ ಮಾತಾಡುತ್ತವೆ, ಆ ಸಮಸ್ಯೆಯು ಇಂದು ನಾವು ಎದುರಿಸುತ್ತಿರುವಂತದ್ದಲ್ಲ. ಎರಡನೆಯದಾಗಿ, ನೀವು ಮತ್ತು ನಾವು ನಿಭಾಯಿಸಬಹುದಾದ ರೀತಿಯಲ್ಲಿ ಪೌಲನು ಆ ಸಮಸ್ಯೆಯನ್ನು ನಿಭಾಯಿಸಲಿಲ್ಲ. ಬಹಳಷ್ಟು ಸಮಯ, ಆತನು ತನ್ನ ಸಹ ಯೆಹೂದ್ಯರ ಮನಃಸ್ಥಿತಿಗೆ ತಕ್ಕಂತೆ ತನ್ನ ಅನುಸರಿಸುವ ದಾರಿಯನ್ನು ಹೊಂದಿಸಿಕೊಂಡನು.

ಇದೊಂದು ಗೊಂದಲಕರ ವಿಭಾಗವಾಗಿರುವದಕ್ಕೆ ಇನ್ನೊಂದು ಕಾರಣವೆಂದರೆ ತಪ್ಪುಬೋಧನೆಯನ್ನು ಮಾಡುವದಕ್ಕೆ ಇದನ್ನು ಉಪಯೋಗಿಸಲಾಗಿರುತ್ತದೆ. ಹಲವಾರು ವರ್ಷಗಳ ವರೆಗೆ, ಕ್ಯಾಲ್ವಿನ್‌ವಾದಿಗಳ ಪೂರ್ವಜ್ಞಾನ, ಪೂರ್ವನೇಮಕ, ಮತ್ತು ಅದುಕೊಳ್ಳುವಿಕೆ ಕುರಿತ ವಾಕ್ಯಭಾಗಗಳಿಗೆ ಇದು ಅಚ್ಚುಮೆಚ್ಚಿನ ಮೂಲವಾಗಿರುತ್ತದೆ. ನಂತರ, ಇತ್ತೀಚಿನ ಕಾಲದಲ್ಲಿ, premillennialists (ಸಹಸ್ರವರ್ಷ ಆಳ್ವಿಕೆ ಮುಂಚೆ ಕ್ರಿಸ್ತನು ಭೂಮಿಗೆ ಬರುವನು ಎಂದು ನಂಬುವವರು) ರಿಂದ ಅವರ "ಲೋಕಾಂತ್ಯದ" ದೃಶ್ಯಾವಳಿಯ ಭಾಗವಾಗಿ ಈ ಅಧ್ಯಾಯಗಳು ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ. ಅವರಿಗೆ ವಿಶೇಷ ಆಸಕ್ತಿಯನ್ನು ಹೊಂದಿರುವ ಮಾತುಗಳೆಂದರೆ ರೋಮಾ 11:26ರಲ್ಲಿರುವಂಥವುಗಳು: "ಆ ಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವದು." ಅವರು ಬೋಧಿಸುವದೇನೆಂದರೆ ಲೋಕಾಂತ್ಯದ ಹೊತ್ತಿನಲ್ಲಿ ಒಂದು ನಿರ್ದಿಷ್ಟ ಸಂದರ್ಭದಲ್ಲಿ, "ಎಲ್ಲಾ ಯೆಹೂದ್ಯರು ಯೇಸುವನ್ನು ತಮ್ಮ ಮೆಸ್ಸೀಯನೆಂದು ಅಂಗೀಕರಿಸಿಕೊಳ್ಳುವರು" ಎಂಬುದೇ.

ಅಂತಿಮವಾಗಿ, ಇದೊಂದು ಸವಾಲಿನಿಂದ ಕೂಡಿದ ವಿಭಾಗವಾಗಿದೆ, ಯಾಕೆಂದರೆ ಅಧ್ಯಾಯಗಳು ಮುಖ್ಯವಾಗಿ ಮೊದಲ ಶತಮಾನದ ಸಮಸ್ಯೆಯೊಂದಕ್ಕೆ ಸಂಬಂಧಿಸಿದ್ದಾಗಿವೆಯಾದ್ದರಿಂದ, ಅವುಗಳು ನಮಗೆ ಹೇಗೆ ಅನ್ವಯವಾಗುತ್ತವೆಂಬದನ್ನು ಅರ್ಥಮಾಡಿಕೊಳ್ಳುವದು ಎಲ್ಲಾ ಸಂದರ್ಭಗಳಲ್ಲೂ ಸುಲಭವಾಗಿರುವದಿಲ್ಲ. (ಪೌಲನು ರೋಮಾ 8ನೇ ಅಧ್ಯಾಯದ ನಂತರ 12ನೇ ಅಧ್ಯಾಯವನ್ನು ಬರೆದಿರಬಹುದಿತ್ತು, ಆಗ ನಾವು 9ರಿಂದ 11 ಅಧ್ಯಾಯಗಳನ್ನು ಎಂದಿಗೂ ತಪ್ಪಿಸಿಕೊಳ್ಳುತ್ತಿರಲಿಲ್ಲ ಎಂದು ಹೇಳುತ್ತಾರೆ.) ಹೇಗಿದ್ದರೂ, ಕರ್ತನು ರೋಮಾ 9-11 ಅಧ್ಯಾಯಗಳನ್ನು ಸಂರಕ್ಷಿಸಿಟ್ಟಿದ್ದಾನಾದ್ದರಿಂದ, ಸಂದೇಶವು ಇಡೀ ಕ್ರೈಸ್ತ ಯುಗಕ್ಕಾಗಿ ಇರತಕ್ಕದ್ದು. ನಾವು ಅಧ್ಯಾಯಗಳನ್ನು ಅಧ್ಯಯನ ಮಾಡುತ್ತಿರುವ ವೇಳೆಯಲ್ಲಿ, ನಾವು *ಏನು* ಕಲಿತುಕೊಳ್ಳಬೇಕೆಂದು ದೇವರು ಇಚ್ಛಿಸುತ್ತಾನೆ ಎಂಬುದನ್ನು ಕಂಡುಹಿಡಿಯುವದೇ ನಮಗಿರುವ ಸವಾಲುಗಳಲ್ಲೊಂದಾಗಿದೆ.

## ನಂಬಿಕೆಯಿಲ್ಲದ ಯೆಹೂದ್ಯರಿಗೋಸ್ಕರ ಪೌಲನಿಗಿರುವ ದುಃಖ (9:1-5)

**1ನನಗೆ ಮಹಾದುಃಖವೂ ನನ್ನ ಹೃದಯದಲ್ಲಿ ಎಡೆಬಿಡದೆ ವೇದನೆಯೂ ಉಂಟು. 2ಈ ಮಾತನ್ನು ಸುಳ್ಳಾಡದೆ ಕ್ರಿಸ್ತನ ಮುಂದೆ ಸತ್ಯವಾಗಿ ಹೇಳುತ್ತೇನೆ;**

**ಪವಿತ್ರಾತ್ಮಾಧೀನವಾಗಿರುವ ನನ್ನ ಮನಸ್ಸೇ ಸಾಕ್ಷಿ. [3]ಶರೀರಸಂಬಂಧವಾಗಿ ಸ್ವಜನರಾಗಿರುವ ನನ್ನ ಸಹೋದರರಿಗೋಸ್ಕರ ನಾನೇ ಸಾಧ್ಯವಾದರೆ ಕ್ರಿಸ್ತನನ್ನು ಅಗಲಿ ಶಾಪಗ್ರಸ್ತನಾಗುವದಕ್ಕೆ ಒಪ್ಪಿಸಿಕೊಂಡೇನು. [4]ಅವರು ಇಸ್ರಾಯೇಲನ ವಂಶದವರೂ ದೇವರು ಪುತ್ರರಾಗಿ ಸ್ವೀಕರಿಸಿದವರೂ ಆಗಿದ್ದಾರೆ. ಅವರಲ್ಲಿ ದೇವರ ತೇಜಸ್ಸಾನ್ನಿಧ್ಯವು ಇದೆ; ಅವರ ಸಂಗಡ ದೇವರು ಒಡಂಬಡಿಕೆಗಳನ್ನು ಮಾಡಿಕೊಂಡನು; ಅವರಿಗೆ ಧರ್ಮಶಾಸ್ತ್ರವೂ ದೇವಾಲಯದಲ್ಲಿ ನಡೆಯುವ ಆರಾಧನೆಯೂ ವಾಗ್ದಾನಗಳೂ ಕೊಡೋಣವಾದವು. [5]ಅಬ್ರಹಾಮ ಇಸಾಕ ಯಾಕೋಬರು ಅವರ ಪಿತೃಗಳೇ. ಕ್ರಿಸ್ತನು ಶರೀರಸಂಬಂಧವಾಗಿ ಅವರ ವಂಶದಲ್ಲಿಯೇ ಹುಟ್ಟಿದವನು, ಆತನು ಎಲ್ಲಾದರ ಮೇಲೆ ಒಡೆಯನೂ ನಿರಂತರ ಸ್ತುತಿ ಹೊಂದತಕ್ಕ ದೇವರೂ ಆಗಿದ್ದಾನೆ. ಆಮೆನ್.**

ಪವಿತ್ರಾತ್ಮನ ಮಾರ್ಗದರ್ಶನದ ಅಡಿಯಲ್ಲಿ, ಪೌಲನು ಯೆಹೂದ್ಯರಿಗೆ ಒಪ್ಪುವ ರೀತಿಯಲ್ಲಿ 9ನೇ ಅಧ್ಯಾಯವನ್ನು ಜಾಗರೂಕತೆಯಿಂದ ರಚಿಸುತ್ತಾನೆ. ಆತನು ಅವರಿಗೋಸ್ಕರ ಪ್ರೀತಿ ಹಾಗೂ ಕಾಳಜಿಯನ್ನು ವ್ಯಕ್ತಪಡಿಸುವ ಮೂಲಕ ಆರಂಭಿಸುತ್ತಾನೆ. ಎಂಟು ಅಧ್ಯಾಯಗಳ ವರೆಗೂ, ಜನರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಅಥವಾ ಸುನ್ನತಿಯನ್ನು ಮಾಡಿಸಿಕೊಳ್ಳುವ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವದಿಲ್ಲ ಎಂದು ಪೌಲನು ಹೇಳುತ್ತಲೇ ಬಂದನು. ಬಹುಶಃ ತನ್ನನ್ನು ಸ್ವಜನರಿಗೆ ದ್ರೋಹ ಬಗೆದವನೆಂದು ಆರೋಪಕ್ಕೆ ಗುರಿಯಾಗುವೆನೆಂದು ಆತನು ಗ್ರಹಿಸಿಕೊಂಡನು, ಆದರೆ ಅಂಥ ಆರೋಪವು ಸುಳ್ಳಾಗಿತ್ತಷ್ಟೆ. ಪೌಲನಿಗೆ ದೇವರಿಂದ ಕೊಡಲ್ಪಟ್ಟ ಸೇವೆಯು ಅನ್ಯಜನರಿಗೋಸ್ಕರವಾಗಿತ್ತಾದರೂ (ನೋಡಿರಿ 11:13; ಅಪೊಸ್ತಲರ ಕೃತ್ಯಗಳು 9:15; ಗಲಾತ್ಯ 2:8, 9), ಆತನು ತನ್ನ ಸಹ ದೇಶದವರ ವಿಷಯದಲ್ಲಿ ಅತ್ಯಂಥ ಮುಖ್ಯವಾದ ಚಿಂತೆಯುಳ್ಳವನಾಗಿದ್ದನು. ಆತನು ಒಂದು ಹೊಸದಾದ ಸ್ಥಳಕ್ಕೆ ಹೋದಾಗ, ಅನ್ಯಜನರ ಕಡೆಗೆ ಹೋಗುವ ಮೊದಲು ಯೆಹೂದ್ಯರಿಗೆ ಸುವಾರ್ತೆಯನ್ನು ಹಂಚಿಕೊಳ್ಳುತ್ತಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 13:14, 46). ರೋಮಾಪುರದವರಿಗೆ ಪತ್ರಿಕೆಯ ಪ್ರಬಂಧ ಹೇಳಿಕೆಯಲ್ಲಿ, ಆತನು ಸುವಾರ್ತೆಯು "ಮೊದಲು ಯೆಹೂದ್ಯರಿಗೆ" ಎಂದು ಹೇಳಿದನು (1:16). ಪೌಲನು 9:1-5ರಲ್ಲಿ, ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಂಡಿರದ ತನ್ನ ಜೊತೆ ಯೆಹೂದ್ಯರ ವಿಷಯದಲ್ಲಿ ತನಗಿರುವ ಆಳವಾದ ಹಿತಾಸಕ್ತಿಯನ್ನು ಕುರಿತು ಮಾತಾಡುತ್ತಾನೆ.

**ವಚನ 1.** ಈ ಪರಿಚ್ಛೇಧವು ಪೌಲನು ಈಗ ಹೇಳಲು ಹೊರಟಿರುವದೆಲ್ಲವೂ ಸತ್ಯ ಎಂಬ ಬಲವಾದ ದೃಢೀಕರಣದೊಂದಿಗೆ ಆರಂಭಗೊಳ್ಳುತ್ತದೆ: **ಈ ಮಾತನ್ನು ಸುಳ್ಳಾಡದೆ ಕ್ರಿಸ್ತನ ಮುಂದೆ ಸತ್ಯವಾಗಿ ಹೇಳುತ್ತೇನೆ; ಪವಿತ್ರಾತ್ಮಾಧೀನವಾಗಿರುವ ನನ್ನ ಮನಸ್ಸೇ ಸಾಕ್ಷಿ.**[4] "ಕ್ರಿಸ್ತನ ಮುಂದೆ" ಮತ್ತು "ಪವಿತ್ರಾತ್ಮಾಧೀನವಾಗಿರುವ" ಎಂಬ ಪದಗಳು ತೋರಿಸುವದೇನೆಂದರೆ ತಾನು ದೈವತ್ವದ ಈ ಇಬ್ಬರು ವ್ಯಕ್ತಿಗಳ ಸಮ್ಮುಖದಲ್ಲಿ ನಿಂತಿದ್ದೇನೆಂಬುದನ್ನು ಮತ್ತು ತಾನು ಸತ್ಯವನ್ನು ಮಾತಾಡಲು ವಿಫಲನಾದರೆ ಅವರಿಗೆ ಉತ್ತರ ಕೊಡಬೇಕಾಗುತ್ತದೆಂಬ ವಿಷಯವನ್ನು ಗ್ರಹಿಸಿಕೊಂಡನೆಂಬುದೇ.[5]

**ವಚನ 2.** ಪೌಲನು ತಿಳಿಸಲಿಚ್ಛಿಸಿದ ಸತ್ಯವು ಇಲ್ಲಿದೆ: **ನನಗೆ ಮಹಾದುಃಖವೂ ನನ್ನ ಹೃದಯದಲ್ಲಿ ಎಡೆಬಿಡದೆ ವೇದನೆಯೂ ಉಂಟು.** ಆತನನ್ನು ಇಂತಹ ಭಯಂಕರವಾದ

ದುಃಖದಿಂದ ತುಂಬಿಸಿದ ಸಂಗತಿ ಯಾವುದು? ನಂತರದ ಚರ್ಚೆಯಲ್ಲಿ ತೋರಿಬರುವ ಸಂಗತಿಯೆಂದರೆ ಆತನ ಬಹುತೇಕ ಸಹ ಯೆಹೂದ್ಯರು ಯೇಸುವನ್ನು ಮೆಸ್ಸೀಯನೆಂದು ತಿರಸ್ಕರಿಸಿದ್ದರು ಮತ್ತು ಅವರು ಆ ಕಾರಣದಿಂದ ಕಳೆದುಹೋಗಿದ್ದರು ಎಂಬದು. 10:1ರಲ್ಲಿ, "ಇಸ್ರಾಯೇಲ್ಯರು ರಕ್ಷಣೆ ಹೊಂದಬೇಕೆಂಬುದೇ ನನ್ನ ಮನೋಭಿಲಾಷೆಯೂ ದೇವರಿಗೆ ನಾನು ಮಾಡುವ ವಿಜ್ಞಾಪನೆಯೂ ಆಗಿದೆ" ಎಂದು ಆತನು ಹೇಳುತ್ತಾನೆ.

**ವಚನ 3.** ಪೌಲನಿಗೆ ಇಸ್ರಾಯೇಲ್ಯರ ಮೇಲಿದ್ದ ಹಿತಾಸಕ್ತಿಯು ಈ ಆಘಾತಕಾರಿ ಹೇಳಿಕೆಯಲ್ಲಿ ವ್ಯಕ್ತಗೊಳಿಸಲ್ಪಟ್ಟಿದೆ: **ಶರೀರಸಂಬಂಧವಾಗಿ ಸ್ವಜನರಾಗಿರುವ ಸಹೋದರರಿಗೋಸ್ಕರ ನಾನೇ ಸಾಧ್ಯವಾದರೆ ಕ್ರಿಸ್ತನನ್ನು ಅಗಲಿ ಶಾಪಗ್ರಸ್ತನಾಗುವದಕ್ಕೆ ಒಪ್ಪಿಸಿಕೊಂಡೇನು.** "ಶಾಪಗ್ರಸ್ತನಾಗುವದಕ್ಕೆ" ಎಂಬುದು ἀνάθεμα (*anathema*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ. "ಪೌಲನು ಒಂದು ಶಾಪಕ್ಕೆ ಗುರಿಯಾದ ವ್ಯಕ್ತಿಯ ಪದವನ್ನು ಉಪಯೋಗಿಸುತ್ತಾನೆ. . . . ದೇವರ ನ್ಯಾಯಬದ್ಧ ಕೋಪಾಗ್ನಿಗೆ ಒಪ್ಪಿಸಲ್ಪಡುವದು."[6] *Anathema* ಎಂಬ ಪದದ ವಿಷಯವಾಗಿ, Douglas J. Moo ಹೀಗೆ ಹೇಳುತ್ತಾನೆ, "ಹೊಸ ಒಡಂಬಡಿಕೆಯಲ್ಲಿ, ಅದು ದೇವರ ಜನಾಂಗದೊಳಗಿಂದ ಹೊರಗಿಡಲ್ಪಟ್ಟಿರುವ ಮತ್ತು ಖಂಡನೆಯ ತೀರ್ಪಿಗೊಳಪಟ್ಟಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ (ನೋಡಿರಿ 1 ಕೊರಿಂಥ 12:3; 16:22; ಗಲಾತ್ಯ 1:8-9)."[7]

ಖಂಡಿತವಾಗಿಯೂ, ತನ್ನ ಸಹ ಯೆಹೂದ್ಯರ ಸ್ಥಾನದಲ್ಲಿ ತನ್ನನ್ನು ಶಾಪಗ್ರಸ್ತಗೊಳಿಸಿಕೊಳ್ಳುವದು ಪೌಲನಿಗೆ ಸಾಧ್ಯವಿ*ರಲಿಲ್ಲ*. 14:12ರಲ್ಲಿ, ಆತನು ಹೀಗೆ ಹೇಳುತ್ತಾನೆ, "ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು." ಇಲ್ಲಿ ಪೌಲನು ಹೇಳುತ್ತಿರುವದೇನೆಂದರೆ ಸಾಧ್ಯ*ವಾದರೆ* ಮತ್ತು ಅದು ದೇವರ ಚಿತ್ತಕ್ಕನುಸಾರವಾಗಿರು*ವದಾದರೆ*, ಆತನು ತನ್ನ ಯೆಹೂದಿ ಸಹೋದರರನ್ನು ರಕ್ಷಿಸುವದಕ್ಕಾಗಿ ಅಷ್ಟೊಂದು ದೂರಕ್ಕೆ ಹೋಗಲು ಸಿದ್ಧನಿದ್ದಾನೆ ಎಂಬುದೆ. ಆತನು ಹಿತಾಸಕ್ತಿಯ ಮಾತುಗಳು ನಮಗೆ ಬಂಗಾರದ ಬಸವನನ್ನು ನಿರ್ಮಿಸುವ ಮೂಲಕ ದೇವರಿಗೆ ಕೋಪವನ್ನೆಬ್ಬಿಸಿದಾಗ ಮೋಶೆಯು ಮಾಡಿದ ಮನಸಿಯನ್ನು ನಮಗೆ ಜ್ಞಾಪಿಸುತ್ತದೆ: "ಅಯ್ಯೋ ಅಯ್ಯೋ, ಈ ಜನರು ಮಹಾ ಪಾಪವನ್ನು ಮಾಡಿದ್ದಾರೆ; ಚಿನ್ನದ ದೇವರನ್ನು ಮಾಡಿಕೊಂಡಿದ್ದಾರೆ. ಆದರೂ ನೀನು ಕರುಣವಿಟ್ಟು ಅವರ ಪಾಪವನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ" (ವಿಮೋಚನಕಾಂಡ 32:31, 32).[8] ತತ್ಫಲಿತವಾಗಿ, ಮೋಶೆಯು "ನೀನು ನನ್ನ ಸಹ ಇಸ್ರಾಯೇಲ್ಯರನ್ನು ಖಂಡನೆಗೆ ಗುರಿ ಮಾಡುವದಾದರೆ, ನನ್ನನ್ನು *ಸಹ* ಖಂಡನೆಗೆ ಗುರಿಪಡಿಸು" ಎಂದು ಪ್ರಾರ್ಥಿಸಿದರೆ, ಪೌಲನು ತನ್ನ ಸಹ ಯೆಹೂದ್ಯರ *ಬದಲಿಗೆ* ತಾನೇ ಖಂಡಿಸಲ್ಪಟ್ಟವನಾಗುವಂತೆ ಬೇಡಿಕೊಂಡನು. ಎರಡೂ ವಿಷಯದಲ್ಲಿ, ಅಳವಾದ ಹಿತಾಸಕ್ತಿ ಮತ್ತು ಜ್ವಲಂತ ಪ್ರೀತಿಯ ವ್ಯಕ್ತಪಡಿಸುವಿಕೆಗಳನ್ನು ಕಾಣುತ್ತೇವೆ.

3ನೇ ವಚನದಲ್ಲಿನ ಈ ಮಾತುಗಳನ್ನು ಗಮನಿಸಿರಿ: "ಶರೀರಸಂಬಂಧವಾಗಿ ಸ್ವಜನರಾಗಿರುವ ನನ್ನ ಸಹೋದರರಿಗೋಸ್ಕರ." ನಿಯಮ ಪ್ರಕಾರ, ಪೌಲನು ಸಹ ಕ್ರೈಸ್ತರನ್ನು ಸೂಚಿಸುವದಕ್ಕಾಗಿ "ಸಹೋದರರೇ" ಎಂಬ ಪದವನ್ನು

ಉಪಯೋಗಿಸುವವನಾಗಿದ್ದನು (ನೋಡಿರಿ 1:13; 12:1; 15:30); ಆದರೆ ಇಲ್ಲಿ ಆ ಪದವನ್ನು ಯೆಹೂದಿ ಜನರಿಗೆ ಅನ್ವಯಿಸುತ್ತಾನೆ. ಆತನು ಯೆಹೂದ್ಯರೊಂದಿಗಿನ ತನ್ನ ಬಾಂದವ್ಯವನ್ನು ಎತ್ತಿತೋರಿಸುವದಕ್ಕೆ ಬಯಸಿದ್ದನು, ಅವರು ಸ್ವತಃ ಆತನ "ಸ್ವಂತ ರಕ್ತ ಮತ್ತು ಮಾಂಸವಾಗಿದ್ದರು" (TEV). ಆತ್ಮೀಕವಾಗಿ, ಆತನೊಬ್ಬ ಕ್ರೈಸ್ತನಾಗಿದ್ದನು; ಆದರೆ ರಾಷ್ಟ್ರೀಯವಾಗಿ (ಜನಾಂಗವಾಗಿ), ಆತನೊಬ್ಬ ಯೆಹೂದಿಯಾಗಿದ್ದನು.[9]

**ವಚನಗಳು 4, 5.** ಪೌಲನು "ಶರೀರಸಂಬಂಧವಾಗಿ ಸ್ವಜನರಾಗಿರುವ ನನ್ನ ಸಹೋದರರಿಗೋಸ್ಕರ" ಎಂದು ಹೇಳಿದ ಬಳಿಕ ಯೆಹೂದಿ ಜನಾಂಗದ ಮೇಲೆ ದೇವರು ಸುರಿಸಿರುವಂಥಹ ಆಶೀರ್ವಾದಗಳನ್ನು ಸಾರಾಂಶಗೊಳಿಸುತ್ತಾನೆ. ಈ ಮುಂಚೆ, ಆತನು "ಹಾಗಾದರೆ ಯೆಹೂದ್ಯರ ಶ್ರೇಷ್ಟತ್ವವೇನು?" ಎಂದು ಕೇಳಿದ್ದನು (3:1). ಆತನು ತನ್ನ ಸ್ವಂತ ಪ್ರಶ್ನೆಗೆ ಹೀಗೆ ಹೇಳುವ ಮೂಲಕ ಉತ್ತರಿಸಿದ್ದನು, "ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು"; ಆದರೆ ಆ ಸಮಯದಲ್ಲಿ ಪಟ್ಟಿ ಮಾಡಲ್ಪಟ್ಟ ಏಕೈಕ ಸವಲತ್ತು ಎಂದರೆ "ದೇವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು" ಎಂಬುದೆ (3:2). ಈಗ ಆತನು ಆ ಪಟ್ಟಿಯನ್ನು ವಿಸ್ತರಿಸುತ್ತಾನೆ. ಆತನ ಪೂರ್ಣಪಟ್ಟಿಯಲ್ಲಿ ದೇವರು ಯೆಹೂದ್ಯರಿಗೆ ದಯಪಾಲಿಸಿರುವ ಒಂಬತ್ತು ಆಶೀರ್ವಾದಗಳಿರುತ್ತವೆ.

ಪೌಲನು ಮೊದಲನೆಯದಾಗಿ ತನ್ನ ಜನರು **ಇಸ್ರಾಯೇಲನ ವಂಶದವರೂ** ಎಂದು ಹೇಳುತ್ತಾನೆ. ಯಾಕೋಬನು ದೇವದೂತನೊಬ್ಬನ ಸಂಗಡ ಹೋರಾಡಿದ್ದ ಬಳಿಕ, ಆತನ ಹೆಸರು "ಇಸ್ರಾಯೇಲ" ಎಂದು ಬದಲಾಯಿಸಲ್ಪಟ್ಟಿತು (ಆದಿಕಾಂಡ 32:28), ಅದರರ್ಥವು "ದೇವರು ಸೆಣಸುವವನು" ಅಥವಾ "ದೇವರ ಸಂಗಡ ಸೆಣಸುವವನು" ಎಂದಾಗಿರುತ್ತದೆ. "ಇಸ್ರಾಯೇಲ್ಯನು" ಎಂಬುದು ಇಸ್ರಾಯೇಲ/ಯಾಕೋಬನ ಸಂತಾನದಲ್ಲಿ ಹುಟ್ಟಿದವನನ್ನು ಸೂಚಿಸುವದಾಗಿತ್ತು ಮತ್ತು ಅದು ಯೆಹೂದ್ಯರಿಗೆ ವಿಶೇಷ ಮಹತ್ವವನ್ನು ಹೊಂದಿತ್ತು. "ಅಂತರ್ ಒಡಂಬಡಿಕೆಗಳ ಕಾಲದಲ್ಲಿ ಮತ್ತು ಅನಂತರದ [ಹೊಸ ಒಡಂಬಡಿಕೆ] ಕಾಲಗಳಲ್ಲಿ, ಪಿಲಿಷ್ಟಿಯದ (ಪ್ಯಾಲೇಸ್ಟೈನ್‌ನ) ಯೆಹೂದ್ಯರು ತಮ್ಮನ್ನು ದೇವರಿಂದ ಆದುಕೊಳ್ಳಲ್ಪಟ್ಟ ಜನರೆಂಬುದನ್ನು ಸೂಚಿಸಿಕೊಳ್ಳುವದಕ್ಕಾಗಿ ಆ ಬಿರುದನ್ನು ಉಪಯೋಗಿಸಿದರು."[10] (ರೋಮಾಪುರದವರಿಗೆ ಪತ್ರಿಕೆಯ ಮೊದಲ ಎಂಟು ಅಧ್ಯಾಯಗಳಲ್ಲಿ, ಪೌಲನು ಸಾಮಾನ್ಯವಾಗಿ "ಯೆಹೂದ್ಯ" ಮತ್ತು "ಯೆಹೂದ್ಯರು" ಎಂಬ ಪದಗಳನ್ನು ಉಪಯೋಗಿಸಿದನು; ಆದರೆ 9ರಿಂದ 11 ಅಧ್ಯಾಯಗಳಲ್ಲಿ, ಆತನು ಮುಖ್ಯವಾಗಿ "ಇಸ್ರಾಯೇಲ" ಮತ್ತು "ಇಸ್ರಾಯೇಲ್ಯರು" ಎಂಬ ಪದವನ್ನು ಉಪಯೋಗಿಸುತ್ತಾನೆ.)

ನಂತರ ಪೌಲನು ತನ್ನ ಜನರು **ದೇವರು ಪುತ್ರರಾಗಿ ಸ್ವೀಕರಿಸಿದವರೂ ಆಗಿದ್ದಾರೆ** ಎಂದು ಹೇಳುತ್ತಾನೆ. "ಪುತ್ರರಾಗಿ ಸ್ವೀಕರಿಸಿದವರೂ" ಎಂಬುದು ಇಸ್ರಾಯೇಲ್ಯ ಜನಾಂಗದಲ್ಲಿರುವವರನ್ನು ದೇವರು ತನ್ನ ಪುತ್ರರನ್ನಾಗಿ ಮತ್ತು ಪುತ್ರಿಯರನ್ನಾಗಿ *ಆದುಕೊಂಡಿದ್ದನು* ಎಂಬುದನ್ನು ಒತ್ತಿ ಹೇಳುತ್ತದೆ (ವಿಮೋಚನಕಾಂಡ 4:22; ಹೋಶೇಯ 11:1).[11] ಆತನು ಐಗುಪ್ತ್ಯ ಅಥವಾ ಬಾಬಿಲೋನ ಅಥವಾ ಅಶ್ಶೂರ್ಯರಗಳಂತಹ ಬಲಿಷ್ಠ ಜನಾಂಗಗಳನ್ನು ಆರಿಸಿಕೊಂಡಿರಲಿಲ್ಲ, ಆದರೆ ಅತಿ ಚಿಕ್ಕ ಇಸ್ರಾಯೇಲ್‌ನ್ನು ಆರಿಸಿಕೊಂಡಿದ್ದನು. ಆತನು ಇಸ್ರಾಯೇಲ್ಯರಿಗೆ, "ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ" ಎಂದು ಹೇಳಿದನು (ಆಮೋಸ 3:2).

ಪೌಲನು ನಂತರ ಪಟ್ಟಿಗೆ **ಅವರಲ್ಲಿ ದೇವರ ತೇಜಸ್ಸಾನ್ನಿಧ್ಯವು ಇದೆ** ಎಂದು ಸೇರಿಸುತ್ತಾನೆ. ಅಂದರೆ ದೇವರು ಇಸ್ರಾಯೇಲ್ಯರನ್ನು ತನ್ನ ವಿಶೇಷ ಜನಾಂಗವಾಗಿ ಆರಿಸಿಕೊಂಡ ವೇಳಯಲ್ಲಿ ಅವರೊಳಗೆ ತೇಜಸ್ಸಾನ್ನಿಧ್ಯವನ್ನು (ಮಹಿಮೆಯನ್ನು) ದಯಪಾಲಿಸಿದ್ದನೆಂದು ಅರ್ಥವಾಗಬಹುದು. ಹೆಚ್ಚು ಸಂಭಾವ್ಯವೆಂದರೆ, ಅದು ಆತನ ಜನರ ಮಧ್ಯದಲ್ಲಿರುವ ದೇವರ ತೇಜಸ್ಸಾನ್ನಿಧ್ಯವನ್ನು ಸೂಚಿಸುತ್ತದೆ. ಇದನ್ನು ಸೂಚಿಸುವದಕ್ಕಾಗಿ ರಬ್ಬಿಗಳಿಂದ ಉಪಯೋಗಿಸಲ್ಪಟ್ಟಿರುವ ಇಬ್ರಿಯ ಪದವು שְׁכִינָה (*Sh$^{e}$kinah*) ಎಂಬುದು. ಇಸ್ರಾಯೇಲ್ಯರನ್ನು ಅರಣ್ಯದಲ್ಲಿ ದಾರಿನಡಿಸಿದದಂತಹ ಮೇಘಸ್ತಂಬ ಮತ್ತು ಅಗ್ನಿ ಸ್ತಂಬದಲ್ಲಿ ದೇವರ ಮಹಿಮೆಯು ತೋರ್ಪಡಿಸಲ್ಪಟ್ಟಿತು (ವಿಮೋಚನಕಾಂಡ 13:21). ದೇವದರ್ಶನ ಗುಡಾರವು ನಿರ್ಮಿಸಲ್ಪಟ್ಟಾಗ, ಕರ್ತನ ಮಹಿಮೆಯು (ತೇಜಸ್ಸು) ಆ ಗುಡಾರವನ್ನು ತುಂಬಿಕೊಂಡಿತು (ವಿಮೋಚನಕಾಂಡ 40:34), ಮತ್ತು ದೇವಾಲಯವು ಪೂರ್ಣಗೊಂಡಾಗ ಅದರಲ್ಲಿಯೂ ಸಹ ಅದೇ ರೀತಿ ಸಂಭವಿಸಿತು (1 ಅರಸು 8:10, 11). ಇಸ್ರಾಯೇಲವು ಮಾತ್ರವೇ ಈ ವಿಧದಲ್ಲಿ ಗೌರವಕ್ಕೆ ಪಾತ್ರವಾಗಿತ್ತು.

ನಾಲ್ಕನೆಯ ಸಂಗತಿಯು **ಅವರ ಸಂಗಡ ದೇವರು ಒಡಂಬಡಿಕೆಯನ್ನು ಮಾಡಿಕೊಂಡಿದ್ದನು.**[12] ದೇವರು ಅವರ ಮೂಲಪಿತೃವಾದ ಅಬ್ರಹಾಮನ ಸಂಗಡ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು (ಆದಿಕಾಂಡ 17:1-8; ನೋಡಿರಿ 12:1-3; 22:18) ಮತ್ತು ಒಂದು ಜನಾಂಗವಾಗಿ ಯೆಹೂದ್ಯರ ಸಂಗಡ ಮತ್ತೊಂದು ಒಡಂಬಡಿಕೆಯನ್ನು ಸಿನಾಯಿ ಪರ್ವತದ ಮೇಲೆ ಮಾಡಿಕೊಂಡನು (ವಿಮೋಚನಕಾಂಡ 24:8; ನೋಡಿರಿ 20:1-17). ಇತರೆ ಒಡಂಬಡಿಕೆಗಳು ಸಹ ಮಾಡಲ್ಪಟ್ಟಿದ್ದವು, ಅದರಲ್ಲಿ ಅರಸನಾದ ದಾವೀದನ ಸಂಗಡ ಮಾಡಿಕೊಂಡ ಒಡಂಬಡಿಕೆಯು ಸಹ ಸೇರಿರುತ್ತದೆ (2 ಸಮುವೇಲ 23:5; ನೋಡಿರಿ 7:12). ಈ ಎಲ್ಲಾ ಒಡಂಬಡಿಕೆಗಳು ಸಹ ಕೇವಲ ಇಸ್ರಾಯೇಲ್ಯ ಜನಾಂಗವನ್ನು ಮಾತ್ರವೇ ಒಳಗೊಂಡಿದ್ದವು.

ಬಳಿಕ ಪೌಲನು **ಧರ್ಮಶಾಸ್ತ್ರವೂ . . . ಕೊಡೋಣವಾದವು** ಎಂದು ಹೇಳುತ್ತಾನೆ. ಈ ಮುಂಚೆಯೇ ಗಮನಿಸಿರುವ ಪ್ರಕಾರ, ದೇವರ ಉಕ್ತಿಗಳನ್ನು (ಪ್ರಕಟನೆಗಳನ್ನು) ತಮ್ಮ ವಶದಲ್ಲಿ ಹೊಂದಿರುವದು ಯೆಹೂದ್ಯರಿಗಿರುವ ಎಲ್ಲಕ್ಕಿಂತಲೂ ಶ್ರೇಷ್ಠವಾದ ಸವಲತ್ತು ಆಗಿತ್ತೆಂದು ಪೌಲನು ಪರಿಗಣಿಸಿದ್ದನು (3:1, 2). ಯೆಹೂದ್ಯರನ್ನು ಹೊರತುಪಡಿಸಿ ಬೇರೆ ಯಾರೊಬ್ಬರೂ ದೇವರ ಧರ್ಮಶಾಸ್ತ್ರವನ್ನು *ಲಿಖಿತರೂಪದಲ್ಲಿ* ಹೊಂದಿರಲಿಲ್ಲ. ಹೇಗೂ, 9ನೇ ಅಧ್ಯಾಯದಲ್ಲಿ ಪೌಲನು ನೀಡುವ ಪಟ್ಟಿಯಲ್ಲಿ, "ಧರ್ಮಶಾಸ್ತ್ರವು . . . ಕೊಡೋಣವಾದವು" ಎಂಬುದನ್ನು ಸಹ ಸೇರ್ಪಡೆಗೊಳಿಸಿರುತ್ತಾನೆ. ಆ ಸಂದರ್ಭದಲ್ಲಿ, "ಬೆಟ್ಟದ ಮೇಲೆ ಗುಡುಗೂ ಮಿಂಚೂ ಕಾರ್ಮುಗಿಲೂ ತುತೂರಿಯ ಮಹಾ ಧ್ವನಿಯೂ" ಉಂಟಾಗುವದನ್ನು ಜನರು ಕಂಡಿದ್ದರು. ಅಷ್ಟುಮಾತ್ರವಲ್ಲದೆ, "ಯೆಹೋವನು ಬೆಂಕಿಯೊಳಗೆ ಸಿನಾಯಿ ಬೆಟ್ಟದ ಮೇಲಕ್ಕೆ ಇಳಿದು ಬಂದದರಿಂದ ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿಕೊಂಡಿತು. ಆ ಹೊಗೆ ಆವಿಗೆಯ ಹೊಗೆಯಂತೆ ಏರಿತು; ಅದಲ್ಲದೆ ಬೆಟ್ಟವೆಲ್ಲಾ ಬಹಳವಾಗಿ ಕಂಪಿಸಿತು" (ವಿಮೋಚನಕಾಂಡ 19:16, 18). ಅದಕ್ಕಿಂತ ನಯನಮನೋಹರವಾದ ಮತ್ತು ಹೃದಯಂಗಮವಾದ ದೃಶ್ಯವು ಬೇರೊಂದಿರಲಿಕ್ಕಿಲ್ಲ—ಮತ್ತು ಅದು ಪ್ರತ್ಯೇಕವಾಗಿ ಇಸ್ರಾಯೇಲ್ಯರಿಗೆ ಸೇರಿದ್ದಾಗಿತ್ತು.

ಯೆಹೂದ್ಯರ ಆರನೆಯ ಆಶೀರ್ವಾದವಾಗಿ ಪೌಲನು ತನ್ನ ಪಟ್ಟಿಯಲ್ಲಿ **ದೇವಾಲಯದಲ್ಲಿ ನಡೆಯುವ ಆರಾಧನೆಯೂ** ಎಂದು ಸೇರಿಸುತ್ತಾನೆ. "ದೇವಾಲಯದಲ್ಲಿ" ಎಂಬ ಪದವು ಸ್ಪಷ್ಟತೆಗೋಸ್ಕರವಾಗಿ ಅನುವಾದಕರಿಂದ ಸೇರ್ಪಡೆಗೊಳಿಸಿರುವಂಥ ದಾಗಿದೆ. ಗ್ರೀಕ್ ವಾಕ್ಯದಲ್ಲಿ ಕೇವಲ "ಆರಾಧನೆಯೂ" (λατρεία, *latreia*) ಎಂದಷ್ಟೇ ಇರುತ್ತದೆ, ಅದು ದೇವರಿಗೆ ಸ್ತುತಿಯೂ ಸೇರಿದಂತೆ ಆತನಿಗೆ ಮಾಡುವ ಆರಾಧನೆಯನ್ನು (ಸೇವೆಯನ್ನು) ಸೂಚಿಸುತ್ತದೆ.[13] ಇಲ್ಲಿ ದೇವರು ತನ್ನ ಕಡೆಗೆ ಬರುವ ದಾರಿಯನ್ನು ಸಾಧ್ಯವಾಗಿಸಿದ್ದರ ಮೇಲೆ ಒತ್ತು ಇರುತ್ತದೆ. ಕರ್ತನು ಇಸ್ರಾಯೇಲ್ಯರಿಗೆ ಅವರು ದೇವರದರ್ಶನ ಗುಡಾರದಲ್ಲಿ ಮತ್ತು ಅನಂತರ ದೇವಾಲಯದಲ್ಲಿ ಹೇಗೆ ತನ್ನ ಬಳಿಗೆ ಬರತಕ್ಕದ್ದೆಂಬ ಬಗ್ಗೆ ನಿರ್ದಿಷ್ಟವಾದ ವಿವರಗಳನ್ನು ನೀಡಿದ್ದನು. ದೇವರನ್ನು ಹೇಗೆ ಸಂಪರ್ಕಿಸಬೇಕೆಂಬ—ಆತನ ಆಶೀರ್ವಾದಗಳನ್ನು ಬೇಡಬೇಕು ಮತ್ತು ಆತನ ಕರುಣೆಗಳನ್ನು ಹೇಗೆ ಪಡೆದುಕೊಳ್ಳಬೇಕು ಎಂಬ—ಕುರಿತಾಗಿ ಇಸ್ರಾಯೇಲ್ಯರಿಗೆ ಮಾತ್ರವೇ ನಿಖರವಾಗಿ ತಿಳಿಸಲಾಗಿತ್ತು.

ಯೆಹೂದ್ಯರ ಆಶೀರ್ವಾದಗಳಲ್ಲಿ **ವಾಗ್ದಾನಗಳೂ** ಸೇರಿದ್ದವು. ಹಳೆಯ ಒಡಂಬಡಿಕೆಯು ದೇವಜನರಿಗೆ ಕೊಡಲ್ಪಟ್ಟಿರುವ ವಾಗ್ದಾನಗಳಿಂದ ತುಂಬಿದೆ, ಆದರೆ ಮೆಸ್ಸೀಯನ ಬರೋಣದ ಕುರಿತಾಗಿರುವ ವಾಗ್ದಾನಗಳೇ ಅತ್ಯಂಥ ಅಧಿಕ ಪ್ರಾಮುಖ್ಯತೆಯುಳ್ಳವುಗಳಾಗಿವೆ. ಇಸ್ರಾಯೇಲ್ಯರಿಗೆ ಮಾತ್ರವೇ ಈ ವಾಗ್ದಾನಗಳು ಕೊಡಲ್ಪಟ್ಟಿದ್ದವು.

ಅವರು ಅನಂದಿಸುತ್ತಿದ್ದ ಎಂಟನೆಯ ಆಶೀರ್ವಾದವೆಂದರೆ **ಅಬ್ರಹಾಮ ಇಸಾಕ ಯಾಕೋಬರು ಅವರ ಪಿತೃಗಳೇ** (πατήρ, *patēr ಎಂಬುದರಿಂದ*). NIVಯಲ್ಲಿ "ಮೂಲಪಿತೃಗಳು" ಎಂದಿರುತ್ತದೆ. ಮೂಲ ತಂದೆಗಳು/ಮೂಲಪಿತೃಗಳಲ್ಲಿ ಅಬ್ರಹಾಮ, ಇಸಾಕ, ಮತ್ತು ಯಾಕೋಬ ಸೇರಿದ್ದರು; ಆದರೆ ಯೆಹೂದ್ಯರು ಆ ವರ್ಗಕ್ಕೆ ಹಳೇ ಒಡಂಬಡಿಕೆಯ ಮೋಶೆ ಮತ್ತು ದಾವೀದರಂತಹ ಖ್ಯಾತ ವ್ಯಕ್ತಿಗಳನ್ನು ಸೇರ್ಪಡೆಗೊಳಿಸಿಕೊಂಡಿದ್ದರು. ಯೆಹೂದ್ಯರು ತಮ್ಮ ವಂಶಪರಂಪರೆಯ ಬಗ್ಗೆ ಹೆಮ್ಮೆಯಿಂದಿದ್ದದ್ದು ನ್ಯಾಯವೇ ಆಗಿತ್ತು.

ಯೆಹೂದ್ಯರಿಗಿದ್ದ ಕಡೇ (ಮತ್ತು ಅತ್ಯಂಥ ಪ್ರಾಮುಖ್ಯವಾದ) ಸವಲತ್ತು ಎಂದರೆ ಅವರ ವಂಶಪರಂಪರೆಯಲ್ಲಿಯೇ **ಕ್ರಿಸ್ತನು** (ಮೆಸ್ಸೀಯನು) ಹುಟ್ಟಿದನು. ದೇವರು ಒಂದು ಜನಾಂಗವನ್ನು ಪ್ರತ್ಯೇಕಿಸಿ ಏರ್ಪಡಿಸಿಕೊಳ್ಳುವದರ ಪ್ರಾಥಮಿಕ ಉದ್ದೇಶವು ಅವರ ಮೂಲಕ ಮೆಸ್ಸೀಯನು ಬರುವಂತೆ ಒಂದು ಜನಾಂಗವನ್ನು ಸಿದ್ಧಪಡಿಸುವದೇ ಆಗಿತ್ತು. ಇದು ಇಸ್ರಾಯೇಲ್ಯರ ವಿಭಿನ್ನತೆಯ ಅತಿ ದೊಡ್ಡ ಗುರುತಾಗಿತ್ತು; ಬೇರೆ ಇನ್ಯಾವ ಜನಾಂಗವು ಸಹ ಈ ವಿಧದಲ್ಲಿ ಘನಪಡಿಸಲ್ಪಟ್ಟಿಲ್ಲ.

ಪೌಲನು **ಶರೀರಸಂಬಂಧವಾಗಿ** ಎಂಬ ಮಾತನ್ನು ಬಳಸಿದನು, ಏಕೆಂದರೆ, ಯೇಸು ಶಾರೀರಿಕವಾಗಿ ಯೆಹೂದಿ ವಂಶಪರಂಪರೆಯಿಂದ ಬಂದನು (ನೋಡಿರಿ 1:2-4; ಮತ್ತಾಯ 1:1-25). ಯೇಸು ಆತ್ಮದ (ದೈವಿಕ) ಕಡೆಯಿಂದ ಪರಲೋಕದವರು (ನೋಡಿರಿ ಲೂಕ 1:26-35).

ಪೌಲನು ಇಲ್ಲಿ "ಕ್ರಿಸ್ತನು . . . ಅವರ ವಂಶದಲ್ಲಿಯೇ ಹುಟ್ಟು*ವನು*" ಎಂದು ಹೇಳಲಿಲ್ಲ ಆದರೆ "ಕ್ರಿಸ್ತನು" **ಅವರ ವಂಶದಲ್ಲಿಯೇ ಹುಟ್ಟಿ*ದವನು*** ಎಂದು ಹೇಳಿದನು (ಒತ್ತಿ ಹೇಳಿದ್ದು

ನನ್ನದು). ಆತನ ಮಾತುಗಳು ಕ್ರಿಸ್ತನು (ಯೇಸು) ಈಗಾಗಲೇ ಬಂದವನಾಗಿದ್ದನೆಂಬುದನ್ನು ಪ್ರತಿಫಲಿಸುತ್ತವೆ. ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಳ್ಳದಿರುವ ಅನೇಕ ಯೆಹೂದ್ಯರು ಈಗಲೂ ಮೆಸ್ಸೀಯನು ಬರಬೇಕೆಂದು ಪ್ರಾರ್ಥಿಸುತ್ತಲೇ ಇದ್ದಾರೆ. Gerald R. Cragg ಹೀಗೆ ಬರೆಯುತ್ತಾನೆ, "ಕುರುಡರಾಗಿರುವದು ವಿನಾಶಕಾರಿಯೇ ಸರಿ, ಆದರೆ ಒಬ್ಬನು ತನ್ನ ಸ್ವಂತ ಪರಂಪರೆಯ ಮುಕುಟಪ್ರಾಯವಾದ ಮಹಿಮೆಯ ಬಗ್ಗೆಯೇ ಕುರುಡನಾಗಿರುವದೆಂದರೆ ಅದು ನಿಜಕ್ಕೂ ಮಾತುಗಳಲ್ಲಷ್ಟೇ ವ್ಯಕ್ತಪಡಿಸಲಾಗದಂತಹ ಒಂದು ದುರಂತವೇ."[14]

ಪೌಲನು ಇಸ್ರಾಯೇಲ್ಯರ ಮೇಲಿರುವ ದೇವರ ಆಶೀರ್ವಾದಗಳನ್ನು ಮತ್ತು ವಿಶೇಷವಾಗಿ ಯೇಸುವಿನ ಆಶೀರ್ವಾದದ ಬಗ್ಗೆ ಅವಲೋಕಿಸಿದಾಗ, ಆತನು ಭಾವುಕಗೊಂಡನು ಮತ್ತು ಅಷ್ಟಕ್ಕೇ ನಿಲ್ಲಿಸಿ ಕ್ರಿಸ್ತನನ್ನು ಸ್ತುತಿಸಲೇಬೇಕಾಯಿತು: **ಆತನು ಎಲ್ಲಾದರ ಮೇಲೆ ಒಡೆಯನೂ ನಿರಂತರ ಸ್ತುತಿ ಹೊಂದತಕ್ಕ ದೇವರೂ ಆಗಿದ್ದಾನೆ. ಆಮೆನ್.** ಈ ಸ್ತೋತ್ರಾರ್ಪಣೆಯು (ಸ್ತುತಿಯ ಮಾತು) ಮೊದಲು ಕ್ರಿಸ್ತನನ್ನು "ಎಲ್ಲಾದರ ಒಡೆಯನೂ" ಎಂದು ಒಪ್ಪಿಕೊಂಡಿತು. ಯೇಸು ಈ ಭೂಮಿಯನ್ನು ಬಿಟ್ಟು ಹೋಗುವದಕ್ಕೆ ಸ್ವಲ್ಪ ಕಾಲದ ಮುನ್ನ, ಆತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟದೆ" (ಮತ್ತಾಯ 28:18). ಆತನು ಪರಲೋಕಾರೋಹಣಗೊಂಡ ಬಳಿಕ, ಆತನು ತಂದೆಯ ಬಲಪಾರ್ಶ್ವದಲ್ಲಿ ಕುಳಿತುಕೊಂಡನು (ಮಾರ್ಕ 16:19), ಅಲ್ಲಿ ಆತನು ಈಗಿನ ಕಾಲದಲ್ಲಿ ಆಳ್ವಿಕೆ ಮಾಡುತ್ತಿದ್ದಾನೆ (ನೋಡಿರಿ 1 ಕೊರಿಂಥ 15:25).

ಸ್ತೋತ್ರಾರ್ಪಣೆಯಲ್ಲಿ ನಂತರ "ನಿರಂತರ ಸ್ತುತಿ ಹೊಂದತಕ್ಕ ದೇವರೂ" ಎಂದಿರುತ್ತದೆ. ಇದರ ಪ್ರಾಥಮಿಕ ಅರ್ಥವು "ನಿತ್ಯವಾಗಿ ಸ್ತುತಿಹೊಂದತಕ್ಕ ದೇವರು" ಎಂದಾಗಿದೆ (NKJV). ಪ್ರಾಚೀನ ಹಸ್ತಪ್ರತಿಗಳನ್ನು ವಿರಾಮಚಿಹ್ನೆಗಳು ಒತ್ತಾಗಿಲ್ಲದ್ದು ಆಗಿತ್ತಾದ್ದರಿಂದ, "ಎಲ್ಲಾದರ ಮೇಲೆ" ಎಂಬುದರ ಬಳಿಕ ಅಲ್ಪವಿರಾಮ ಚಿಹ್ನೆ ಹಾಕಬೇಕೋ ಅಥವಾ ಪೂರ್ಣವಿರಾಮ ಚಿಹ್ನೆ ಹಾಳಬೇಕೋ ಎಂಬದನ್ನು ನಮಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಪದಗುಚ್ಛದ ಬಳಿಕ ಅಲ್ಪವಿರಾಮ ಚಿಹ್ನೆಯಿದ್ದಲ್ಲಿ (NASB, KJV, NIV ಮತ್ತು ಇತರ ತರ್ಜುಮೆಗಳಲ್ಲಿ ಇರುವ ಪ್ರಕಾರ), "ನಿರಂತರ ಸ್ತುತಿ ಹೊಂದತಕ್ಕ ದೇವರೂ" ಎಂಬುದು ಯೇಸುವನ್ನು ಸೂಚಿಸುವದಾಗಿದೆ. ಒಂದು ಅದರ ಬಳಿಕ ಪೂರ್ಣವಿರಾಮ ಚಿಹ್ನೆಯಿದ್ದಲ್ಲಿ (CJB; ನೋಡಿರಿ TEV; NEB), 5ನೇ ವಚನದ ಮುಕ್ತಾಯದ ಮಾತುಗಳು ತಂದೆಯಾದ ದೇವರಿಗೆ ಅನ್ವಯವಾಗುತ್ತವೆ.

ಕನಿಷ್ಠ ಎರಡು ಕಾರಣಗಳಿಗಾಗಿ, "ನಿರಂತರ ಸ್ತುತಿ ಹೊಂದತಕ್ಕ ದೇವರೂ" ಎಂಬುದು ಯೇಸುವಿನ ದೇವತ್ವವನ್ನು ಸೂಚಿಸುವಂಥದ್ದಾಗಿದೆ ಎಂದು ನಾನು ನಂಬುತ್ತೇನೆ. ಮೊದಲನೆಯದಾಗಿ, ಪ್ರಾಚೀನ ಕ್ರೈಸ್ತ ಬರಹಗಾರರು ಈ ಮಾತುಗಳನ್ನು ಕ್ರಿಸ್ತನಿಗೆ ಅನ್ವಯಿಸಿದರು. ಎರಡನೆಯದಾಗಿ, "ಶರೀರಸಂಬಂಧವಾಗಿ" ಎಂಬುದನ್ನು ಸಮತೋಲನಗೊಳಿಸುವದಕ್ಕೆ ಆ ವಾಕ್ಯದಲ್ಲಿ ಏನಾದರೂ ಅಗತ್ಯವಿರುತ್ತದೆ: "ಶರೀರಸಂಬಂಧವಾಗಿ," ಯೇಸು ಒಬ್ಬ ಇಸ್ರಾಯೇಲ್ಯನಾಗಿದ್ದನು; ಆದರೆ "ಆತ್ಮನ ಸಂಬಂಧವಾಗಿ," ಆತನು "ನಿರಂತರ ಸ್ತುತಿಹೊಂದತಕ್ಕ [ಹೊಂದಿದವನಾದ] ದೇವರೂ"

ಆಗಿದ್ದಾನೆ. "ಎಲ್ಲಾದರ ಮೇಲೆ" ಎಂಬುದರ ನಂತರ ಪೂರ್ಣವಿರಾಮ ಚಿಹ್ನೆಯನ್ನು ಇಟ್ಟರೂ, ಪೌಲನ ಮನಸ್ಸಿನಲ್ಲಿ ಆಗಲೂ ದೇವರಾದ ಕುಮಾರನಿದ್ದಿರಬಹುದಾಗಿದೆ.

Walter W. Wessel ರೋಮಾ 9:5ನ್ನು "[NIV] ಅನುವಾದವು ನಿಖರವಾದದ್ದೆಂದು ಭಾವಿಸಿಕೊಳ್ಳುವದಾದರೆ, ಇಡೀ ಹೊಸ ಒಡಂಬಡಿಕೆಯಲ್ಲಿಯೇ ಸಿಕ್ಕುವ ಯೇಸುವಿನ ದೇವತ್ವದ ಕುರಿತಾದ ಅತ್ಯಂಥ ಸ್ಪಷ್ಟವಾದ ಹೇಳಿಕೆಗಳಲ್ಲೊಂದಾಗಿದೆ" ಎಂದು ಕರೆಯುತ್ತಾನೆ.[15] ಇದಕ್ಕೆ Moo ಒಮ್ಮತ ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾನೆ: "ವಿಷಯವು ಕ್ಲೇಷ್ಟಕರವಾದದ್ದು, ಆದರೆ ವಾಕ್ಯರಚನೆ ಹಾಗೂ ಸನ್ನಿವೇಶಗಳೆರಡೂ ಅಲ್ಪವಿರಾಮ ಚಿಹ್ನೆಗೆ ಒಲವು ತೋರಿಸುತ್ತವೆ. ಆದುದರಿಂದ, ಈ ವಚನವು, ಹೊಸ ಒಡಂಬಡಿಕೆಯಲ್ಲಿ ಯೇಸುವನ್ನು 'ದೇವರು' ಎಂದು ಕರೆಯುವ . . . ಆ ವಚನಗಳೊಂದಿಗೆ ಎಣಿಕೆಮಾಡಲ್ಪಡುವದಕ್ಕೆ ಅರ್ಹವಾಗಿರುತ್ತದೆ."[16]

## ದೇವರ ಸಾರ್ವಭೌಮತ್ವ (9:6-13)

**6ದೇವರು ಹೇಳಿದ ಮಾತು ತಪ್ಪಿತೆಂದು ನಾವು ಭಾವಿಸಕೂಡದು. ಯಾಕೆಂದರೆ ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ; 7ಹಾಗೆಯೇ ಅಬ್ರಹಾಮನ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಅವರೆಲ್ಲರು ಮಕ್ಕಳೆಂದು ಎಣಿಸಲ್ಪಡುವದಿಲ್ಲ. ಆದರೆ– ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು ಎಂದು ದೇವರು ಹೇಳಿದನು. 8ಆ ಮಾತಿನ ಅರ್ಥವೇನಂದರೆ ಶರೀರಸಂಬಂಧವಾಗಿ ಹುಟ್ಟಿದವರೆಲ್ಲರೂ ದೇವರ ಮಕ್ಕಳಲ್ಲ, ವಾಗ್ದಾನಸಂಬಂಧವಾಗಿ ಹುಟ್ಟಿದವರೇ ಅಬ್ರಹಾಮನ ಸಂತತಿಯವರೆಂದು ಎಣಿಸಲ್ಪಡುವರು ಎಂಬದು. 9ಮುಂದಿನ ವರುಷದ ಇದೇ ಕಾಲದಲ್ಲಿ ನಾನು ಬರುವೆನು, ಆಗ ಸಾರಳಿಗೆ ಮಗನು ಇರುವನು ಎಂಬುವ ಮಾತು ವಾಗ್ದಾನವಾಗಿದೆಯಷ್ಟೆ. 10ಇದು ಮಾತ್ರವಲ್ಲದೆ ರೆಬೆಕ್ಕಳು ಸಹ ನಮ್ಮ ಪಿತೃವಾದ ಇಸಾಕನಿಂದ ಅವಳಿ ಜವಳಿ ಮಕ್ಕಳಿಗೆ ಬಸುರಾದಾಗ ಅದರಂತೆಯೇ ಆಯಿತು. 11-12ಆ ಮಕ್ಕಳು ಒಬ್ಬ ತಂದೆಯ ಮಕ್ಕಳಾಗಿದ್ದರೂ ಅವರು ಇನ್ನೂ ಹುಟ್ಟದೆಯೂ ಒಳ್ಳೇದನ್ನಾಗಲಿ ಕೆಟ್ಟದ್ದನ್ನಾಗಲಿ ಮಾಡದೆಯೂ ಇದ್ದಾಗ-ಹಿರಿಯನು ಕಿರಿಯವನಿಗೆ ಸೇವೆ ಮಾಡುವನೆಂಬದಾಗಿ ಆಕೆಗೆ ಹೇಳಲ್ಪಟ್ಟಿತು. ಇದರಿಂದ ದೇವರು ತನಗೆ ಮನಸ್ಸಿದ್ದವರನ್ನು ಆರಿಸಿಕೊಳ್ಳುತ್ತಾನೆಂಬ ಸಂಕಲ್ಪವು ಸ್ಥಿರವಾಗಿರಬೇಕೆಂದು ತೋರಿಸಿದನು. ಆ ಸಂಕಲ್ಪವು ಪುಣ್ಯಕ್ರಿಯೆಗಳ ಮೇಲೆ ಆಧಾರಗೊಳ್ಳದೆ ಕರೆಯುವಾತನ ಚಿತ್ತದ ಮೇಲೆಯೇ ಆಧಾರಗೊಂಡಿದೆ. 13ಇದಕ್ಕನುಸಾರವಾಗಿ-ಯಾಕೋಬನನ್ನು ಪ್ರೀತಿಸಿದೆನು, ಏಸಾವನನ್ನು ದ್ವೇಷಿಸಿದೆನು ಎಂದು ಬರೆದದೆ.**

**ವಚನ 6.** ತಾನು ಯೆಹೂದ್ಯರಿಗೆ ಮಿತ್ರನಾಗಿದ್ದೇನೆ ಮತ್ತು ಅವರಿಗೆ ಶತ್ರುವಲ್ಲ ಎಂಬುದನ್ನು ಕಂಠೋಕ್ತವಾಗಿ ಹೇಲಿದ ಬಳಿಕ, ಪೌಲನು "ಯೆಹೂದಿ ಸಮಸ್ಯೆ" ಕುರಿತ ತನ್ನ ಚರ್ಚೆಯನ್ನು ಮುಂದುವರೆಸುತ್ತಾನೆ. ವಚನ 6a ಮಾತುಗಳು ರೋಮಾ 9ರಿಂದ 11 ಅಧ್ಯಾಯಗಳ ಪ್ರಬಂಧ ಹೇಳಿಕೆ ಎಂದು ಕರೆಯಲ್ಪಟ್ಟಿದೆ: **ದೇವರು ಹೇಳಿದ ಮಾತು ತಪ್ಪಿತೆಂದು ನಾವು ಭಾವಿಸಿಕೂಡದು.** ಪೌಲನು ಈ ವಿಧವಾದ ಆಕ್ಷೇಪಣೆಯನ್ನು ಯೆಹೂದ್ಯರಿಂದ ಎದುರುನೋಡಿದ್ದನು: "ನೀನು ಈಗಷ್ಟೆ ನಮ್ಮ ಜನರಿಗೆ ದೇವರು ಮಾಡಿದ

ಒಡಂಬಡಿಕೆಗಳು ಹಾಗೂ ಶಾಸ್ತ್ರೋಕ್ತವಾದ ವಾಗ್ದಾನಗಳ ಕುರಿತು ಮಾತಾಡುತ್ತಿರುವಿ, ಹಾಗಿದ್ದರೂ ಒಬ್ಬನು ನೀತಿವಂತನೆಂದು ನಿರ್ಣಯಿಸಲ್ಪಡಬೇಕೆಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂದು ನಿನ್ನ ಪತ್ರಿಕೆಯುದ್ದಕ್ಕೂ ಪ್ರತಿಪಾದಿಸುತ್ತಲೇ ಬಂದಿರುವಿ. ಯೇಸುವೇ ಮೆಸ್ಸೀಯನೆಂಬದಾಗಿ ಬಹುತೇಕ ಯೆಹೂದ್ಯರು ನಂಬುವದಿಲ್ಲವಾದ್ದರಿಂದ, ದೇವರು ನಮ್ಮೊಂದಿಗೆ ಮಾಡಿಕೊಂಡ ತನ್ನ ಒಡಂಬಡಿಕೆಗಳಲ್ಲಿ ಮತ್ತು ನಮಗೆ ನೀಡಿದ ವಾಗ್ದಾನಗಳಲ್ಲಿ ತಪ್ಪಿದನೆಂಬದಾಗಿ ನಿನ್ನ ತಾತ್ಪರ್ಯವಾಗಿರಬೇಕಷ್ಟೆ."

ಪೌಲನು ಶೀಘ್ರವೇ ದೇವರ ವಾಕ್ಯವು ವಿಫಲಗೊಂಡಿದೆ ಎಂಬುದನ್ನು ನಿರಾಕರಿಸುತ್ತಾನೆ. ಅದು ತಪ್ಪಿರುವದಿಲ್ಲ, ಆತನು ಹೀಗೆ ಹೇಳುತ್ತಾನೆ, **ಯಾಕೆಂದರೆ ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ.** "ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರು" ಎಂಬುದು ಸ್ಪಷ್ಟತೆಗೋಸ್ಕರ NASB ಯ ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತದೆ. ಆ ಹೇಳಿಕೆಯನ್ನು ಹೆಚ್ಚು ಅಕ್ಷರಶಃವಾಗಿ "ಯಾಕೆಂದರೆ ಇಸ್ರಾಯೇಲ್‌ನಿಂದ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ" ಎಂದು ಅನುವಾದಿಸಲ್ಪಡಬಹುದು. ಈ ಸಾಮಾನ್ಯ ಸೂತ್ರವನ್ನು ಎರಡು ವೃತ್ತಗಳಿಂದ ದೃಷ್ಟಾಂತಪಡಿಸಬಹುದು: ಒಂದು ದೊಡ್ಡದಾದ ವೃತ್ತದೊಳಗಿರುವ ಇನ್ನೊಂದು ವೃತ್ತ.[17] ಇವೆರಡೂ "ಇಸ್ರಾಯೇಲ್ಯ"; ಆದರೆ ದೊಡ್ಡದಾದ ವೃತ್ತವು *ಶಾರೀರಸಂಬಂಧವಾಗಿ* ಇಸ್ರಾಯೇಲನ (ಯಾಕೋಬ) ಸಂತತಿಯಾಗಿರುವವರೆಲ್ಲರನ್ನೂ ಪ್ರತಿನಿಧಿಸಿದರೆ, ಚಿಕ್ಕದಾದ ವೃತ್ತವು ನಾವು "*ಆತ್ಮೀಕ* ಇಸ್ರಾಯೇಲ್ಯರು" ಅಥವಾ "*ನಿಜ* ಇಸ್ರಾಯೇಲ್ಯರು" ಎಂದು ಕರೆಯಬಹುದಾದ ಎಲ್ಲರನ್ನೂ ಒಳಗೊಂಡಿರುತ್ತದೆ. (ಈ ಚರ್ಚೆಯ ನಂತರ ಭಾಗದಲ್ಲಿ, ಪೌಲನು ಅವರನ್ನು "ಅವರಲ್ಲಿ ಒಂದು ಅಂಶ" [ಶೇಷ ಜನ] ಎಂದು ಕರೆದನು [9:27; 11:5].) ಚಿಕ್ಕ ವೃತ್ತದಲ್ಲಿರುವವರು ಇಸ್ರಾಯೇಲನಿಂದ (ಯಾಕೋಬ) ಶರೀರಸಂಬಂಧವಾಗಿ ಹುಟ್ಟಿದವರು, *ಆದರೆ ಅವರು ಯೇಸುವಿನಲ್ಲಿ ನಂಬಿಕೆ ಸಹ ಇಟ್ಟವರಾಗಿದ್ದಾರೆ.* 2:28, 29 ರಲ್ಲಿ, ಪೌಲನು "ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ . . . ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು" ಎಂದು ಹೇಳಿದ್ದನು. 2ನೇ ಅಧ್ಯಾಯದ "ನಿಜ ಯೆಹೂದ್ಯನು" ಹಾಗೂ 9ನೇ ಅಧ್ಯಾಯದ "ನಿಜ ಇಸ್ರಾಯೇಲ್ಯರು" ಎಂಬುವುಗಳು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಳ್ಳುವ ಮೂಲಕ ಯೆಹೂದ್ಯ ಜನಾಂಗಕ್ಕಾಗಿ ದೇವರು ಹೊಂದಿದ್ದ ಸಂಕಲ್ಪವನ್ನು ನೆರವೇರಿಸಿದ ಚಿಕ್ಕ ಸಂಖ್ಯೆಯ ಯೆಹೂದ್ಯರನ್ನು ಸೂಚಿಸುವವುಗಳಾಗಿವೆ.

2:28, 29 ಮತ್ತು 9:6b ರಲ್ಲಿನ ಹೇಳಿಕೆಗಳು ಬಹುಪಾಲು ಯೆಹೂದ್ಯರಿಗೆ ಆಘಾತಕರವಾಗಿದ್ದಿರಬಹುದು. ಕೇವಲ ಅಬ್ರಹಾಮ, ಇಸಾಕ, ಮತ್ತು ಯಾಕೋಬರನ್ನು ತಮ್ಮ ಮೂಲಪಿತೃಗಳಾಗಿ ಹೊಂದಿರುವದಾದರೆ ತಮ್ಮ ನಿತ್ಯ ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳುವದಕ್ಕೆ ಸಾಕಾಗುತ್ತದೆ ಎಂದು ನಂಬಿದ್ದರು. ವಿಷಯವು ಹೀಗಿರುವದಿಲ್ಲ ಎಂಬದನ್ನು ತೋರಿಸುವದಕ್ಕಾಗಿ, ಗತಕಾಲದಲ್ಲಿ ದೇವರು ಮಾಡಿದ್ದ ಎರಡು ಆಯ್ಕೆಗಳ ಕುರಿತಾಗಿ ತನ್ನ ವಾಚಕರಿಗೆ ಜ್ಞಾಪಕಗೊಳಿಸುತ್ತಾನೆ.

**ವಚನ 7.** *ಮೊದಲನೆಯದಾಗಿ, ದೇವರು ಇಸಾಕನನ್ನು ಆರಿಸಿಕೊಂಡನು* (9:7-9). ಶರೀರಸಂಬಂಧವಾಗಿ ವಂಶದಲ್ಲಿ ಹುಟ್ಟಿದರೆ ಸಾಕಾಗುವದಿಲ್ಲ ಎಂಬುದನ್ನು ಪೌಲನು ಸಾಭಿತುಪಡಿಸುತ್ತಾನೆ: **ಹಾಗೆಯೇ ಅಬ್ರಹಾಮನ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಅವರೆಲ್ಲರು**

**ಮಕ್ಕಳೆಂದು ಎಣಿಸಲ್ಪಡುವದಿಲ್ಲ. ಆದರೆ—ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು.** ಅಬ್ರಹಾಮನಿಗೆ ಅನೇಕ ಮಂದಿ ಮಕ್ಕಳಿದ್ದರು (ನೋಡಿರಿ ಆದಿಕಾಂಡ 25:1, 2), ಅವರಲ್ಲಿ ಹಾಗರಳ ಮಗನಾದ ಇಸ್ಮಾಯೇಲನು ಸೇರಿದ್ದನು (ಆದಿಕಾಂಡ 16:15). ಹೇಗಿದ್ದರೂ, ಮೂಲತಃ ಅಬ್ರಹಾಮನಿಗೆ ಕೊಡಲ್ಪಟ್ಟಿದ್ದ ವಾಗ್ದಾನಗಳನ್ನು ಪಡೆದುಕೊಳ್ಳುವಂತೆ ಆತನ ಮಕ್ಕಳಲ್ಲಿ ಒಬ್ಬನು ಮಾತ್ರವೇ ಆರಿಸಿಕೊಳ್ಳಲ್ಪಟ್ಟನು. 7ನೇ ವಚನದಲ್ಲಿರುವ ಉಲ್ಲೇಖನವು (ಯಥೋಕ್ತವು) ಆದಿಕಾಂಡ 21:12ರಿಂದ ತೆಗೆದುಕೊಳ್ಳಲ್ಪಟ್ಟಿದೆ, ಅಲ್ಲಿ ದೇವರು ಅಬ್ರಹಾಮನಿಗೆ, "ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು" ಎಂದು ಹೇಳುತ್ತಾನೆ.

**ವಚನ 8.** ಪೌಲನು ಮುಂದುವರೆದು ಹೀಗೆ ಹೇಳುತ್ತಾನೆ, **ಆ ಮಾತಿನ ಅರ್ಥವೇನಂದರೆ ಶರೀರಸಂಬಂಧವಾಗಿ ಹುಟ್ಟಿದವರೆಲ್ಲರೂ ದೇವರ ಮಕ್ಕಳಲ್ಲ, ವಾಗ್ದಾನಸಂಬಂಧವಾಗಿ ಹುಟ್ಟಿದವರೇ ಅಬ್ರಹಾಮನ ಸಂತತಿಯವರೆಂದು ಎಣಿಸಲ್ಪಡುವರು ಎಂಬದು.** "ಶರೀರಸಂಬಂಧವಾಗಿ ಹುಟ್ಟಿದವರೆಲ್ಲರೂ" ಎಂಬುದು ಅಬ್ರಹಾಮನಿಗೆ ಶಾರೀರಿಕವಾಗಿ ಹುಟ್ಟಿದ ಅಸಂಖ್ಯಾತಗೊಂಡ ಸಂತತಿಯನ್ನು ಸೂಚಿಸುತ್ತದೆ—ಇಸ್ಮಾಯೇಲನ ಮೂಲಕ (ಅರಬ್ಬರು), ಏಸಾವನ ಮೂಲಕ (ಎದೋಮ್ಯರು), ಕೆಟೂರಳ ಮಕ್ಕಳ ಮೂಲಕ (ಮಿದ್ಯಾನ್ಯರು ಮತ್ತು ಇತರರು). ಹೇಗೂ, ದೇವರಿಗೆ "ವಾಗ್ದಾನ ಸಂಬಂಧವಾಗಿ ಹುಟ್ಟಿದವರೇ" (ಇಸಾಕನ ಮೂಲಕ ಹುಟ್ಟಿದ ಇಸ್ರಾಯೇಲ್ಯರು) ಆತನ ಮಕ್ಕಳಾಗಿ, ಅಬ್ರಹಾಮನಿಂದ ಹುಟ್ಟಿದ ನಿಜ ಸಂತತಿಯಾಗಿ ಅಂಗೀಕಾರವಾಗಿದ್ದರು.

**ವಚನ 9.** "ವಾಗ್ದಾನ ಸಂಬಂಧವಾಗಿ ಹುಟ್ಟಿದವರೇ" ಎಂಬುದು ವಾಗ್ದಾನದ ಫಲಿತವಾಗಿ ಜನಿಸಿದ ಮಕ್ಕಳನ್ನು ಸೂಚಿಸುತ್ತದೆ. ಆ ವಾಗ್ದಾನವು ಏನಾಗಿತ್ತು? ಪೌಲನು ಹೀಗೆ ಹೇಳುತ್ತಾನೆ, **ಮುಂದಿನ ವರುಷ ಇದೇ ಕಾಲದಲ್ಲಿ ನಾನು ಬರುವೆನು, ಆಗ ಸಾರಳಿಗೆ ಮಗನು ಇರುವನು ಎಂಬುವ ಮಾತು ವಾಗ್ದಾನವಾಗಿದೆಯಷ್ಟೆ.** ಅಬ್ರಹಾಮನು ಸುಮಾರು ತೊಂಬತ್ತೊಂಬತ್ತು ವಯಸ್ಸಿನವನು ಹಾಗೂ ಸಾರಳು ಎಂಬತ್ತೊಂಬತ್ತು ವಯಸ್ಸಿನವಳಾಗಿದ್ದ ವೇಳೆಯಲ್ಲಿ ದೇವರು ಅವರಿಗೆ ನೀಡಿದ ವಾಗ್ದಾನವು ಇದೇ ಆಗಿತ್ತು: "ಬರುವ ವರುಷ ಇದೇ ಕಾಲದಲ್ಲಿ ನಾನು ತಪ್ಪದೆ ತಿರಿಗಿ ನಿನ್ನ ಬಳಿಗೆ ಬರುತ್ತೇನೆ; ಬಂದಾಗ ನಿನ್ನ ಪತ್ನಿಯಾದ ಸಾರಳಿಗೆ ಮಗನಿರುವನು" (ಆದಿಕಾಂಡ 18:10; ನೋಡಿರಿ 17:17). ಒಂದು ವರ್ಷದ ಬಳಿಕ, ದೇವರು ತನ್ನ ವಾಗ್ದಾನವನ್ನು ನೆರವೇರಿಸಿದನು, ಮತ್ತು ಇಸಾಕನು ಹುಟ್ಟಿದನು (ಆದಿಕಾಂಡ 21:1-3).

ಈ ವಿಚಾರಧಾರೆಯಲ್ಲಿ ಪೌಲನು ಯಾವ ಕಡೆಗೆ ಸಾಗಿದ್ದನು? ದೇವರು ಇಸ್ಮಾಯೇಲನ ಹಾಗೂ ಇಸಾಕನ ನಡುವೆ ಆಯ್ಕೆಯನ್ನು ಮಾಡಿಕೊಂಡಿದ್ದಾನೆ ಎಂಬುದನ್ನು ಆತನು ಎತ್ತಿತೋರಿಸಿದ ಬಳಿಕ, ದೇವರಿಗೆ ಹಾಗೆ ಮಾಡಲು ಅಧಿಕಾರವಿತ್ತು ಮತ್ತು ಆತನು ಸರಿಯಾದ ಆಯ್ಕೆಯನ್ನೇ ಮಾಡಿದ್ದಾನೆಂಬದಾಗಿ ಯೆಹೂದ್ಯರು ಒಮ್ಮತ ತೋರಿದರೆಂಬುದರಲ್ಲಿ ಯಾವ ಸಂಶಯವಿಲ್ಲ. ಪೌಲನು ಈ ಮುಕ್ತಾಯಕ್ಕೆ ನಡಿಸುವವನಾಗಿದ್ದನು: ದೇವರಿಗೆ ಅಂತಹ ಆಯ್ಕೆಗಳನ್ನು ಮಾಡುವ ಅಧಿಕಾರ ಹೊಂದಿದ್ದಾನೆ ಯಾಕೆಂದರೆ ಆತನು ದೇವರು, ಮತ್ತು ಆತನು ಮಾಡುವ ಆಯ್ಕೆಗಳು ಯಾವಾಗಲೂ ಸರಿಯಾಗಿಯೇ ಇರುತ್ತವೆ. ಆದುದರಿಂದ, ಶಾರೀರಿಕ ಇಸ್ರಾಯೇಲ್ಯರೊಳಗೆ

ಯಾರು “ನಿಜ ಇಸ್ರಾಯೇಲ್ಯರು” ಎಂಬುದನ್ನು ನಿರ್ಧರಿಸುವ ಅಧಿಕಾರವು ಆತನಿಗಿರುತ್ತದೆ.

**ವಚನಗಳು 10-12.** *ಎರಡನೆಯದಾಗಿ, ದೇವರು ಯಾಕೋಬನನ್ನು ಆರಿಸಿಕೊಂಡನು* (9:10-13). ಮೂಲಪಿತೃಗಳ ಶರೀರಸಂಬಂಧವಾಗಿ ವಂಶಸ್ಥರಾಗಿದ್ದರೆ ಸಾಕಾಗದು ಎಂಬುದಕ್ಕೆ ಇನ್ನಷ್ಟು ಹೆಚ್ಚಿನ ರುಜುವಾತಾಗಿ, ಪೌಲನು ಇನ್ನೊಂದು ಪೀಳಿಗೆ ಮುಂದಕ್ಕೆ ಸಾಗಿ **ಇಸಾಕ** ಮತ್ತು **ರೆಬೆಕ್ಕಳ** ಮಕ್ಕಳ ಬಗ್ಗೆ ಮಾತಾಡುತ್ತಾನೆ. ಏಸಾವನ ಬದಲಿಗೆ ಯಾಕೋಬನನ್ನು ಆರಿಸಿಕೊಂಡದ್ದು **ದೇವರು ತನಗೆ ಮನಸ್ಸಿದ್ದವರನ್ನು ಆರಿಸಿಕೊಳ್ಳುತ್ತಾನೆಂಬ ಸಂಕಲ್ಪಕ್ಕೆ** (ἐκλεκτός, *eklektos*)[18] ಅನುಗುಣವಾಗಿತ್ತೆಂಬುದನ್ನು ಪೌಲನು ಒತ್ತಿ ಹೇಳುತ್ತಾನೆ. ದೇವರಿಗೆ ತಾನು ಯಾರನ್ನು ಇಷ್ಟಪಡುತ್ತಾನೋ ಅವರನ್ನು ಆರಿಸಿಕೊಳ್ಳುವ ಸಾರ್ವಭೌಮವಾದ ಅಧಿಕಾರ ಹೊಂದಿದ್ದಾನೆ ಎಂಬುದನ್ನು ಪೌಲನು ಸಾಭಿತುಪಡಿಸಲಿಚ್ಛಿಸಿದನು. “ಸಾರ್ವಭೌಮ” ಎಂಬುದು, ದೇವರಿಗೆ ಅನ್ವಯಿಸಲ್ಪಡುವಾಗ, ಯಾರೊಬ್ಬರೂ ಪ್ರಶ್ನಿಸಲಾಗದಂತಹ ಸಂಪೂರ್ಣ ಅಧಿಕಾರ ಆತನಿಗಿರುವದನ್ನು ಸೂಚಿಸುತ್ತದೆ.

ಈ ಮುಂಚಿನ ದೃಷ್ಟಾಂತದ (ಇಸ್ಮಾಯೇಲನನ್ನು ಬಿಟ್ಟು ಇಸಾಕನನ್ನು ಆರಿಸಿಕೊಂಡದ್ದು) ವಿಷಯದಲ್ಲಿ ನೋಡುವದಾದರೆ, ಇಸಾಕನು ಇಸ್ಮಾಯೇಲನಿಗಿಂತಲೂ ಹೆಚ್ಚು ಭಕ್ತಿವಂತನಾಗಿದ್ದ ಕಾರಣದಿಂದ ದೇವರು ಇಸಾಕನನ್ನು ಆರಿಸಿಕೊಂಡನೆಂದು ವಾದಿಸಬಹುದಾಗಿದೆ. ಈ ದೃಷ್ಟಾಂತದಲ್ಲಿ (ಏಸಾವನನ್ನು ಬಿಟ್ಟು ಯಾಕೋಬನನ್ನು ಆರಿಸಿಕೊಂಡದ್ದು), **ಅವಳಿ ಜವಳಿ . . . ಹುಟ್ಟದೆಯೂ . . . ಇದ್ದಾಗ**—ಅವರು **ಒಳ್ಳೇದನ್ನಾಗಲಿ ಕೆಟ್ಟದ್ದನ್ನಾಗಲಿ ಮಾಡದೆಯೂ ಇದ್ದಾಗ**—ದೇವರು ಆಯ್ಕೆಯನ್ನು ಮಾಡಿಬಿಟ್ಟಿದ್ದನು ಎಂಬುದನ್ನು ವಾಕ್ಯಭಾಗವು ಸ್ಪಷ್ಟವಾಗಿ ತಿಳಿಸುತ್ತದೆ. ಆದುದರಿಂದ, ಸಾಧನೆಗಳಾಗಲಿ, ಒಳ್ಳೇತನವಾಗಲಿ, ಮತ್ತು ಸಾಮರ್ಥ್ಯಗಳಾಗಲಿ ಸಹ ಅಲ್ಲಿ ಕಾರಣಾಂಶಗಳಾಗಿರಲಿಲ್ಲ. ಯಾಕೋಬನ ಆರಿಸಿಕೊಳ್ಳುವಿಕೆಯು **ಪುಣ್ಯಕ್ರಿಯೆಗಳ ಮೇಲೆ ಆಧಾರಗೊಳ್ಳದೆ ಕರೆಯುವಾತನ ಚಿತ್ತದ ಮೇಲೆಯೇ ಆಧಾರಗೊಂಡಿದೆ.** ರೆಬೆಕ್ಕಳು ಅವಳಿ ಜವಳಿ ಮಕ್ಕಳಿಗೆ ಗರ್ಭವತಿಯಾಗಿದ್ದಾಗ, ದೇವರು ಆಕೆಗೆ ಹೀಗೆ ಹೇಳಿದನು, “ನಿನ್ನ ಗರ್ಭದಲ್ಲಿ ಎರಡು ಜನಾಂಗಗಳು ಅವೆ; ಆ ಎರಡು ಜನಾಂಗಗಳು ಜನ್ಮಾರಭ್ಯ ವಿರೋಧದಿಂದ ಭೇದವಾಗುವವು; ಅವುಗಳಲ್ಲಿ ಒಂದು ಮತ್ತೊಂದಕ್ಕಿಂತ ‘ಬಲಿಷ್ಠವಾಗುವದು’ ಹಿರಿಯದು ಕಿರಿಯದಕ್ಕೆ ಸೇವೆಮಾಡುವದು” (ಆದಿಕಾಂಡ 25:23). ಅನಂತರ, ಅವಳಿ ಜವಳಿ ಮಕ್ಕಳು ಹುಟ್ಟಿದರು: ಮೊದಲು ಏಸಾವ ಮತ್ತು ಬಳಿಕ ಯಾಕೋಬನು (ಆದಿಕಾಂಡ 25:24-26).

ಕೆಲವರು **ಹಿರಿಯದು ಕಿರಿಯದಕ್ಕೆ ಸೇವೆಮಾಡುವದು** ಎಂಬ ಹೇಳಿಕೆಯ ಕುರಿತು ಚಕಿತಗೊಂಡಿರುತ್ತಾರೆ, ಯಾಕೆಂದರೆ ಏಸಾವನು ಯಾಕೋಬನ ಸೇವೆ ಮಾಡಿದನೆಂಬುದಕ್ಕೆ ಯಾವುದೇ ಪುರಾವೆಯಿರುವದಿಲ್ಲ. ವಾಸ್ತವಾಂಶವೇನೆಂದರೆ, ಆದಿಕಾಂಡ 33:8ರ ಪ್ರಕಾರ, ಏಸಾವನಿಗೆ “ಸ್ವಾಮಿ” ಎಂದು ಕರೆಯುವ ಮೂಲಕ ಯಾಕೋಬನೇ ಆತನಿಗೆ ಮರ್ಯಾದೆಯನ್ನು ಸಲ್ಲಿಸಿದನು. ಆದಿಕಾಂಡ 25:23ರಲ್ಲಿನ ಹೇಳಿಕೆಯ ವಿಷಯವಾಗಿ, “ಹಿರಿಯದು” ಹೇಗೆ “ಕಿರಿಯದಕ್ಕೆ” ಸೇವೆ ಮಾಡುವದೆಂಬದನ್ನು ನಾವು ನೋಡೋಣ:

> ನಿನ್ನ ಗರ್ಭದಲ್ಲಿ ಎರಡು *ಜನಾಂಗಗಳು* ಅವೆ; ಆ ಎರಡು ಜನಾಂಗಗಳು ಜನ್ಮಾರಭ್ಯ ವಿರೋಧದಿಂದ ಭೇದವಾಗುವವು; ಅವುಗಳಲ್ಲಿ ಒಂದು ಮತ್ತೊಂದಕ್ಕಿಂತ

'ಬಲಿಷ್ಠವಾಗುವದು' ಹಿರಿಯದು [ಅಂದರೆ, ಹಿರಿಯ ಮಗುವಿನ ಸಂತತಿಯವರು] ಕಿರಿಯದಕ್ಕೆ [ಕಿರಿಯ ಮಗುವಿನ ಸಂತತಿಯವರಿಗೆ] ಸೇವೆಮಾಡುವದು (ಒತ್ತಿ ಹೇಳಿದ್ದು ನನ್ನದು).

ಏಸಾವನ ಸಂತತಿಯವರು (ಎದೋಮ್ಯರು) ಯಾಕೋಬನ ಸಂತತಿಯವರಿಗೆ (ಅರಸನಾದ ದಾವೀದನ ಆಳ್ವಿಕೆಯಲ್ಲಿ ಇಸ್ರಾಯೇಲ್ಯರ) ಸೇವೆ ಮಾಡಿದರೆಂಬುದು ಇತಿಹಾಸದ ಸಂಗತಿಯಾಗಿರುತ್ತದೆ (2 ಸಮುವೇಲ 8:14).

**ವಚನ 13.** ಆದಿಕಾಂಡ 25:23 ಒಂದು ವೈಯಕ್ತಿಕ ಮುಂತಿಳಿಸುವಿಕೆಗಿಂತಲೂ ಅಧಿಕವಾಗಿ ಒಂದು ರಾಷ್ಟ್ರೀಯ ಮುಂತಿಳಿಸುವಿಕೆ ಆಗಿತ್ತು. ಈ ಮುಕ್ತಾಯಕ್ಕೆ 13ನೇ ವಚನದ ಉಲ್ಲೇಖನವು ಮತ್ತಷ್ಟು ಪುಷ್ಟಿಕೊಡುತ್ತದೆ: **ಯಾಕೋಬನನ್ನು ಪ್ರೀತಿಸಿದೆನು, ಏಸಾವನನ್ನು ದ್ವೇಷಿಸಿದೆನು ಎಂದು ಬರೆದದೆ.** ಈ ಉಲ್ಲೇಖನವು ಮಲಾಕಿ 1:2, 3 ರಿಂದ ತೆಗೆದುಕೊಳ್ಳಲ್ಪಟ್ಟದ್ದು, ಅದು ಹೀಗೆ ಇರುತ್ತದೆ:

> ಯೆಹೋವನು ಇಂತೆನ್ನುತ್ತಾನೆ—ನಾನು ನಿಮ್ಮನ್ನು ಪ್ರೀತಿಸಿದ್ದೇನೆ; ನೀವೋ—ಯಾವ ವಿಷಯದಲ್ಲಿ ನಮ್ಮನ್ನು ಪ್ರೀತಿಸಿದ್ದೀ ಅಂದುಕೊಳ್ಳುತ್ತೀರಲ್ಲಾ. ಏಸಾವನು ಯಾಕೋಬನ ಅಣ್ಣನಲ್ಲವೆ, ಆದರೆ ನಾನು ಯಾಕೋಬನನ್ನು ಪ್ರೀತಿಸಿ ಏಸಾವನನ್ನು ದ್ವೇಷಿಸಿ ಅವನ ಬೆಟ್ಟಗಳನ್ನು ಹಾಳುಮಾಡಿ ಅವನ ಸ್ವಾಸ್ತ್ಯವನ್ನು ಕಾಡುನರಿಗಳ ಪಾಲುಮಾಡಿದೆನಷ್ಟೆ; ಇದು ಯೆಹೋವನ ನುಡಿ.

ಯೆಹೋವನು ಇಸ್ರಾಯೇಲ್ಯರೊಂದಿಗೆ ಒಂದು ಜನಾಂಗವಾಗಿ ಮಾತಾಡುತ್ತಿದ್ದಾನೆ (9:4, 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ಏಸಾವನ ಹೆಸರನ್ನು ಒಂದು ಜನಾಂಗವಾಗಿ ಎದೋಮ್ಯರನ್ನು ಸೂಚಿಸುವದಾಗಿದೆ ಎಂಬುದನ್ನು ಸನ್ನಿವೇಶವು ಸ್ಪಷ್ಟಗೊಳಿಸುತ್ತದೆ.

ಆದರೆ ಕೆಲವರು ". . . ಆದರೆ ಏಸಾವನನ್ನು ದ್ವೇಷಿಸಿ" ಎಂಬ ಹೇಳಿಕೆಯಿಂದ ಚಕಿತಗೊಳ್ಳುತ್ತಾರೆ. ಕೆಲವು ಸಾರಿ ಶಾಸ್ತ್ರಗಳಲ್ಲಿ, "ದ್ವೇಷ" ಎಂಬುದನ್ನು "ಪ್ರೀತಿಯು ಕಡಿಮೆಯಾಗುವಿಕೆ" ಎಂಬ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆ (ನೋಡಿರಿ ಲೂಕ 14:26). AB ತರ್ಜುಮೆಯು 9:13ರಲ್ಲಿ "ದ್ವೇಷಿಸಿ" ಎಂಬ ಪದದ ಬಳಿಕ ಈ ವಿವರಣಾತ್ಮಕ ಪದಗುಚ್ಛವನ್ನು ಹೊಂದಿರುತ್ತದೆ: "ಯಾಕೋಬನೆಡೆಗೆ ನನಗಿರುವ ಭಾವಕ್ಕೆ ಹೋಲಿಸಿದರೆ ಕಡೆಗಣಿಸಿರುತ್ತೇನೆ." ರೋಮಾ 9ರಲ್ಲಿ ಪೌಲನ ಉದ್ದೇಶದ ವಿಷಯದಲ್ಲಿ ನೋಡುವದಾದರೆ, 13ನೇ ವಚನದಲ್ಲಿನ ಉಲ್ಲೇಖನವನ್ನು ಈ ವಿಧದಲ್ಲಿ ಸರಳಾನುವಾದ ಮಾಡಬಹುದು: "ನಾನು ಯಾಕೋಬನನ್ನು ಆರಿಸಿಕೊಂಡೆನು, ಆದರೆ ಏಸಾವನನ್ನು ತಿರಸ್ಕರಿಸಿದೆನು."

9:1-13 ರಲ್ಲಿನ ಎರಡು ಆರಿಸಿಕೊಳ್ಳುವಿಕೆಗಳು *ಸೇವೆ*ಗೆ ಸಂಬಂಧಿಸಿವೆಯೇ ಹೊರತು, *ರಕ್ಷಣೆ*ಗೆ ಸಂಬಂಧಿಸಿದವುಗಳಲ್ಲ. Leon Morris ಇದನ್ನು ಈ ವಿಧದಲ್ಲಿ ಹೇಳುತ್ತಾನೆ: "ಪೌಲನು ತನ್ನ ಪತ್ರಿಕೆಯ ಈ ವಿಭಾಗದುದ್ದಕ್ಕೂ ಪ್ರಾಥಮಿಕವಾಗಿ ತನ್ನ ಮನಸ್ಸಿನಲ್ಲಿ ಇಡೀ ಇಸ್ರಾಯೇಲ್ಯವನ್ನು ಹೊಂದಿದ್ದನು ಹೊರತು, ವ್ಯಕ್ತಿಪರರನ್ನಲ್ಲ ಎಂದು ತೋರುತ್ತದೆ, ಮತ್ತು ನಿತ್ಯವಾದ ರಕ್ಷಣೆಗಿಂತಲೂ ಸೇವೆಗಾಗಿ ಆದುಕೊಳ್ಳಲ್ಪಡುವಿಕೆ ಕುರಿತಾಗಿ ಮಾತಾಡುತ್ತಿದ್ದಾನೆಂದು ಕಂಡುಬರುತ್ತದೆ."[19] ಪುನಃ, Morris ಹೀಗೆ ಹೇಳುತ್ತಾನೆ, "ಸವಲತ್ತಿಗೋಸ್ಕರ ಆದುಕೊಳ್ಳುವಿಕೆಯ ಮನಸ್ಸಿನಲ್ಲಿರುತ್ತದೆ, ಹೊರತು ನಿತ್ಯ

ರಕ್ಷಣೆಯಲ್ಲ."[20] ದೇವರು ತನ್ನ ದೈವಿಕ ಸಂಕಲ್ಪಗಳನ್ನು ಕಾರ್ಯರೂಪಕ್ಕೆ ತರಲು ಯಾರನ್ನು ಉಪಯೋಗಿಸಲಿದ್ದಾನೆಂಬ ಬಗ್ಗೆ ಆಯ್ಕೆಗಳನ್ನು ಮಾಡಿದನು, ಆದರೆ ಇದು ಆರಿಸಿಕೊಳ್ಳಲ್ಪಡದವರ ನಿತ್ಯವಾದ ಅಂತ್ಯಸ್ಥಿತಿಯ ಮೇಲೆ ಯಾವದೇ ಪರಿಣಾಮವನ್ನು ಬೀರಲಿಲ್ಲ. ಇಲ್ಲಿ ಕಂಡುಬರುವದು ತಾತ್ಕಾಲಿಕವಾದ ಆದುಕೊಳ್ಳುವಿಕೆಯೇ ಹೊರತು ನಿತ್ಯವಾದ ಆದುಕೊಳ್ಳುವಿಕೆಯಲ್ಲ. ಕ್ಯಾಲ್ವಿನ್‌ವಾದಿಗಳು ದೀರ್ಘಕಾಲದಿಂದ ಈ ವಾಕ್ಯಭಾಗವನ್ನು ಆಧಾರವಾಕ್ಯವಾಗಿ ಉಪಯೋಗಿಸಿರುತ್ತಾರೆ—ಆದರೆ ಅವರು ಬಯಸುವಂತಹ ಉಪದೇಶವನ್ನು ಇದು ಉಪದೇಶಿಸುವದಿಲ್ಲ.

ಮೆಸ್ಸೀಯನು ಬರಲಿದ್ದ ವಂಶಾವಳಿಯನ್ನು ಸ್ಥಾಪಿಸುತ್ತಿರುವ ವೇಳೆ ದೇವರು ಮಾಡಿದ ಎರಡು ಆಯ್ಕೆಗಳ ಬಗ್ಗೆ ಈ ವಾಕ್ಯಭಾಗವು ತಿಳಿಯಪಡಿಸುತ್ತದೆ. ದೇವರು ಇಸ್ಮಾಯೇಲನನ್ನು ಬಿಟ್ಟು ಇಸಾಕನನ್ನು ಆರಿಸಿಕೊಂಡನು. ನಂತರ, ಏಸಾವ ಮತ್ತು ಯಾಕೋಬರ ವಿಷಯದಲ್ಲಿ, ದೇವರು ಹಿರಿಯ ಮಗನನ್ನು ಬಿಟ್ಟು ಕಿರಿಯವನನ್ನು ಆರಿಸಿಕೊಂಡನು. ದೇವರು ಈ ಆಯ್ಕೆಗಳನ್ನು ಮಾಡುವ ಅಧಿಕಾರ ಹೊಂದಿದ್ದನು ಯಾಕೆಂದರೆ ಆತನು ದೇವರಾಗಿದ್ದಾನೆಂಬುದನ್ನು ಪೌಲನು ತೋರ್ಪಡಿಸಿದನು. ಆತನು ಸಾರ್ವಭೌಮನು ಮತ್ತು ಸರ್ವೋಚ್ಛ ಅಧಿಕಾರ ಹೊಂದಿದ್ದಾನೆ. ಈ ವಿಷಯದಲ್ಲಿ ಯಾವ ಯೆಹೂದ್ಯನೂ ವಾಗ್ವಾದ ಮಾಡನು. ಅವರಿಗೆ ಆಘಾತವುಂಟು ಮಾಡಿದ್ದೇನೆಂದರೆ ಪೌಲನು ಮಾಡಿದ—ಅವರಿಗೆ—ಅನ್ವಯಿಸುವಿಕೆಯೇ! ದೇವರಿಗೆ ಇಸಾಕನನ್ನು ಆರಿಸಿಕೊಂಡು ಇಸ್ಮಾಯೇಲನನ್ನು ತಿರಸ್ಕರಿಸುವ ಅಧಿಕಾರವಿತ್ತೆಂದರೆ, ಆತನಿಗೆ ಏಸಾವನನ್ನು ತಿರಸ್ಕರಿಸಿ ಯಾಕೋಬನನ್ನು ಆರಿಸಿಕೊಳ್ಳುವ ಅಧಿಕಾರವಿತ್ತೆಂದಾದರೆ, ಆತನಿಗೆ ಕೆಲವು ಇಸ್ರಾಯೇಲ್ಯರನ್ನು ಆರಿಸಿಕೊಂಡು ಇತರರನ್ನು ತಿರಸ್ಕರಿಸುವ ಅಧಿಕಾರ ಸಹ ಇರುತ್ತದೆ. ದೇವರ ಸಾರ್ವಭೌಮತೆಯ ಸಿದ್ಧಾಂತವು ಎರಡೂ ಕಡೆಗಳಲ್ಲಿ ಕತ್ತಿರುವಂತಹ ಇಬ್ಬಾಯಿ ಕತ್ತಿಯಾಗಿರುತ್ತದೆ.

## ದೇವರನ್ನು ದೂರುವದರ ನಿರರ್ಥಕತೆ (9:14-29)

ಪೌಲನು 9:6-13ರಲ್ಲಿ, ದೇವರು ಮಾಡಿದ ಎರಡು ಆಯ್ಕೆಗಳ ಬಗ್ಗೆ ಮಾತಾಡಿದನು. ಕರ್ತನು ಇಸಾಕನನ್ನು ಆರಿಸಿಕೊಂಡು ಇಸ್ಮಾಯೇಲನನ್ನು ತಿರಸ್ಕರಿಸಿದನು (9:7-9); ಆತನು ಯಾಕೋಬನನ್ನು ಆರಿಸಿಕೊಂಡು ಏಸಾವನನ್ನು ತಿರಸ್ಕರಿಸಿದನು (9:10-13). 9:14-29ರಲ್ಲಿ, ದೇವರು ಮಾಡಿದ್ದು ನ್ಯಾಯವೇ ಯಾಕೆಂದರೆ ಆತನ ಆಯ್ಕೆಗಳು ಸಮಂಜಸವಾದವುಗಳು ಎಂದು ಪೌಲನು ಹೇಳುತ್ತಾನೆ. ಅವುಗಳು ಆತನ ಆಚರಣೆ, ವ್ಯಕ್ತಿ, ಮತ್ತು ಸಂಕಲ್ಪದೊಂದಿಗೆ *ಸಮಂಜಸವಾಗಿ*ರುತ್ತವೆ.

### ಆತನ ಆಚರಣೆಯೊಂದಿಗೆ ಸಮಂಜಸವಾಗಿರುತ್ತದೆ (9:14-18)

**14ಹಾಗಾದರೆ ಏನು ಹೇಳೋಣ? ದೇವರಲ್ಲಿ ಅನ್ಯಾಯ ಉಂಟೋ? ಎಂದಿಗೂ ಇಲ್ಲ.**
**15ಯಾವನ ಮೇಲೆ ಕರುಣೆ ನನ್ನ ಕರುಣೆ ಉಂಟೋ ಅವನನ್ನು ಕರುಣಿಸುವೆನು, ಯಾವನ ಮೇಲೆ ನನ್ನ ಕನಿಕರವದೆಯೋ ಅವನಿಗೆ ಕನಿಕರತೋರಿಸುವೆನು ಎಂದು ದೇವರು ಮೋಶೆಗೆ ಹೇಳಿರುತ್ತಾನಷ್ಟೆ.**
**16ಆದದರಿಂದ ದೇವರ ದಯವು ಮನುಷ್ಯರಿಗೆ ಇಚ್ಛೈಸುವದರಿಂದಾಗಲಿ**

**ಪ್ರಯತ್ನಿಸುವದರಿಂದಾಗಲಿ ದೊರೆಯದೆ ದೇವರು ಕರುಣಿಸುವದರಿಂದಲೇ ದೊರೆಯುತ್ತದೆ. [17]ದೇವರು ಫರೋಹನನ್ನು ಕುರಿತು–ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಖ್ಯಾತ ಪಡಿಸಬೇಕೆಂಬ ಉದ್ದೇಶದಿಂದಲೇ ನಿನ್ನನ್ನು ಉನ್ನತಸ್ಥಾನಕ್ಕೆ ತಂದಿದ್ದೇನೆಂದು ಹೇಳಿದನೆಂಬದಾಗಿ ಶಾಸ್ತ್ರೋಕ್ತಿ ಉಂಟು. [18]ದೇವರು ಯಾರನ್ನು ಕರುಣಿಸಿದರೂ ಯಾರನ್ನು ಕಠಿಣಪಡಿಸಿದರೂ ಅದೆಲ್ಲವು ಆತನ ಇಷ್ಟಾನುಸಾರವಾಗಿಯೇ ಇದೆ ಎಂಬುದು ಇದರಿಂದ ತೋರಿಬರುತ್ತದೆ.**

**ವಚನ 14.** ಪೌಲನು ಹೀಗೆ ಕೇಳುತ್ತಾನೆ, **ಹಾಗಾದರೆ ಏನು ಹೇಳೋಣ?** ಅಂದರೆ, "ದೇವರು ಗತಕಾಲದಲ್ಲಿ ಮಾಡಿದ ಆಯ್ಕೆಗಳ ವಿಷಯದಲ್ಲಿ ನಾವು ಏನು ಹೇಳೋಣ?" ಚರ್ಚೆಯ ಆ ಒಂದು ಹಂತದಲ್ಲಿ, ಪೌಲನು ಈ ವಾಕ್ಯಭಾಗವು ಕೇಂದ್ರಿಕೃತವಾಗಿರುವಂತಹ ಪ್ರಶ್ನೆಯನ್ನು ಕೇಳುತ್ತಾನೆ: **ದೇವರಲ್ಲಿ ಅನ್ಯಾಯ ಉಂಟೋ? ಎಂದಿಗೂ ಇಲ್ಲ.** NIVಯಲ್ಲಿ "ದೇವರು ಅನ್ಯಾಯಸ್ಥನೋ?" ಎಂದಿರುತ್ತದೆ. NCV ಈ ಪ್ರಶ್ನೆಯನ್ನು ಈ ವಿಧದಲ್ಲಿ ಕೇಳುತ್ತದೆ, "ದೇವರು ನ್ಯಾಯವಿಲ್ಲದವನೋ?" ಈ ಪ್ರಶ್ನೆ ಕೇಳುವದರ ಹಿನ್ನಲೆಯು ಏನೆಂದರೆ ದೇವರು ಇಸ್ರಾಯೇಲ್ಯರಲ್ಲಿ ಕೆಲವರನ್ನು ಆರಿಸಿಕೊಂಡು (ಯೇಸುವಿನಲ್ಲಿ ನಂಬಿಕೆಯಿಟ್ಟವರು) ಇತರರನ್ನು (ನಂಬಿಕೆಯಿಡದವರನ್ನು) ತಿರಸ್ಕರಿಸಿದ್ದರಲ್ಲಿ ನ್ಯಾಯವಾಗಿಯೇ ನಡೆದುಕೊಂಡಿದ್ದಾನೋ ಅಥವಾ ಇಲ್ಲವೋ ಎಂಬುದೇ. ಇದನ್ನು ಇನ್ನೊಂದು ವಿಧದಲ್ಲಿ ಕೇಳುವದಾದರೆ, ಇಸ್ರಾಯೇಲರನ್ನು (ನಂಬಿಕೆಯಿಡದವರನ್ನು) ತಿರಸ್ಕರಿಸಿ ಅನ್ಯಜನರನ್ನು (ನಂಬಿಕೆಯಿಟ್ಟವರು) ಅಂಗೀಕರಿಸಿಕೊಳ್ಳುವದರಲ್ಲಿ ದೇವರು ನ್ಯಾಯವಾಗಿದ್ದಾನೋ? ಪೌಲನು 14ನೇ ವಚನದ ಮಾತುಗಳನ್ನು ಬರೆದಾಗ, ಆತನು ನಿರ್ದಿಷ್ಟವಾದ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು; ಆದರೆ ಪ್ರಶ್ನೆಗೆ ವಿಶಾಲವಾದ ಅನ್ವಯಿಸುವಿಕೆ ಇರುತ್ತದೆ. ದೇವರು ತನ್ನ ಎಲ್ಲಾ ವ್ಯವಹಾರಗಳಲ್ಲಿ ನ್ಯಾಯವಾಗಿದ್ದನೋ? ಆತನು ಯಾವಾಗಲೂ ನಮ್ಮನ್ನು ನ್ಯಾಯವಾಗಿ ನಡಿಸಿಕೊಳ್ಳುವನೋ?

ದೇವರು ಅನ್ಯಾಯಗಾರನಾಗಿರಬಲ್ಲನು ಎಂಬ ಸಲಹೆಯೇ ಪೌಲನ ಮನಸ್ಸಿಗೆ ಅಶಾಂತಿಯನ್ನುಂಟು ಮಾಡಿತ್ತು. ಆತನು ಶೀಘ್ರವೇ ಬಲವಾದ ಸ್ವರದಲ್ಲಿ **ಎಂದಿಗೂ ಇಲ್ಲ** ಎಂದು ಹೇಳುತ್ತಾನೆ! ಖಂಡಿತವಾಗಿಯೂ ಯಾವ ಯೆಹೂದ್ಯನು ಸಹ ದೇವರು ಇಸ್ಮಾಯೇಲನನ್ನು ಬಿಟ್ಟು ಇಸಾಕನನ್ನು ಅಥವಾ ಏಸಾವನ ಬದಲಿಗೆ ಯಾಕೋಬನನ್ನು ಆರಿಸಿಕೊಂಡಿದ್ದರಲ್ಲಿ ಅನ್ಯಾಯ ಮಾಡಿದ್ದಾನೆಂದು ಯೋಚಿಸಲಾರನು. ಪೌಲನು ಈ ಮುಕ್ತಾಯವನ್ನು ಮುಂದಿಡುವದಕ್ಕಾಗಿ ಒಂದು ಹಿನ್ನಲೆಯನ್ನು ಸೃಷ್ಟಿಸುತ್ತಿದ್ದನು: ದೇವರು ಆ ಆಯ್ಕೆಗಳನ್ನು ಮಾಡಿದಾಗ ನ್ಯಾಯವಂತನೇ ಆಗಿದ್ದಾದರೆ, ಆತನು ನಂಬಿಕೆಯಿಡದ ಯೆಹೂದ್ಯರನ್ನು ತಿರಸ್ಕರಿಸಿ ನಂಬಿಕೆಯಿಟ್ಟ ಯೆಹೂದ್ಯರನ್ನು ಆರಿಸಿಕೊಂಡದ್ದರಲ್ಲಿ ಸಹ ನ್ಯಾಯವಂತನೇ ಆಗಿದ್ದಾನೆ. ಅಷ್ಟುಮಾತ್ರವಲ್ಲದೆ, ನಂಬಿಕೆಯಿಡದ ಯೆಹೂದ್ಯರನ್ನು ತಿರಸ್ಕರಿಸಿ ನಂಬಿಕೆಯಿಟ್ಟ ಅನ್ಯಜನರನ್ನು ಆರಿಸಿಕೊಂಡಿದ್ದರಲ್ಲಿ ಆತನು ನ್ಯಾಯವಾಗಿಯೇ ಇದ್ದಾನೆ.

**ವಚನ 15.** ದೇವರು ಇಸಾಕನನ್ನು ಮತ್ತು ಯಾಕೋಬನನ್ನು ಆರಿಸಿಕೊಂಡ ವಿಷಯದದಿಂದ ಪೌಲನು ಈಗ ಪ್ರತಿಯೊಬ್ಬ ಯೆಹೂದ್ಯ ವಾಚಕನಿಗೂ ಪರಿಚಿತವಿದ್ದ ಇತರ ಎರಡು ಬೈಬಲ್ ಘಟನೆಗಳ ಕಡೆಗೆ ಸಾಗುತ್ತಾನೆ. ಅವೆರಡೂ ಐಗುಪ್ತ್ಯದಿಂದ

ಹೊರಡುವಿಕೆಯೊಂದಿಗೆ ಸಂಬಂಧಪಟ್ಟಿರುತ್ತವೆ. ಮೊದಲನೆಯದು, ಅರಣ್ಯದಲ್ಲಿ ಮೋಶೆ ಮತ್ತು ಇಸ್ರಾಯೇಲ್ಯರನ್ನೊಳಗೊಂಡ ಘಟನೆಯಾಗಿರುತ್ತದೆ: **ಯಾವನ ಮೇಲೆ ನನ್ನ ಕರುಣೆ ಉಂಟೋ ಅವನನ್ನು ಕರುಣಿಸುವೆನು, ಯಾವನ ಮೇಲೆ ನನ್ನ ಕನಿಕರವದೆಯೋ ಅವನಿಗೆ ಕನಿಕರತೋರಿಸುವೆನು ಎಂದು [ದೇವರು] ಮೋಶೆಗೆ ಹೇಳಿರುತ್ತಾನಷ್ಟೆ.**[21] ಈ ಉಲ್ಲೇಖನವು ವಿಮೋಚನಕಾಂಡ 33:9ರಿಂದ ತೆಗೆದುಕೊಳ್ಳಲ್ಪಟ್ಟಿರುತ್ತದೆ. ಇದು ಚಿನ್ನದ ಬಸವನ ಕುರಿತ ಘಟನೆಯು ಸಂಭವಿಸಿದ ನಂತರದಲ್ಲಿ ದೇವರು ಮತ್ತು ಮೋಶೆಯ ನಡುವೆ ಮಾತುಕತೆಯ ಒಂದು ಭಾಗವಾಗಿರುತ್ತದೆ. ದೇವರ ಮಾತಿನ ಅರ್ಥವು, “ಯಾರು ನನ್ನ ಕರುಣೆ ಮತ್ತು ಕನಿಕರವನ್ನು ಪಡೆಯುವರೆಂಬುದನ್ನು ನಾನು ನಿರ್ಧರಿಸುತ್ತೇನೆ” ಎಂದಾಗಿರುತ್ತದೆ.

**ವಚನ 16.** ಆ ಹೇಳಿಕೆಯಿಂದ, ಪೌಲನು ಈ ಮುಕ್ತಾಯಕ್ಕೆ ತಲುಪಿದನು: **ಆದದರಿಂದ ದೇವರ ದಯವು ಮನುಷ್ಯರಿಗೆ ಇಚ್ಛೈಸುವದರಿಂದಾಗಲಿ ಪ್ರಯತ್ನಿಸುವದರಿಂದಾಗಲಿ ದೊರೆಯದೆ ದೇವರು ಕರುಣಿಸುವದರಿಂದಲೇ ದೊರೆಯುತ್ತದೆ.** “ಪ್ರಯತ್ನಿಸುವದ ರಿಂದಾಗಲಿ” ಎಂಬುದು ಗ್ರೀಕ್ ವಾಕ್ಯದ “ಓಡುವವನಿಂದಾಗಲಿ” ಎಂಬುದರ ಅಕ್ಷರಶಃ ಅನುವಾದವಾಗಿದೆ. ಪೌಲನು ಇಲ್ಲಿ ಓಟವನ್ನು ಗೆಲ್ಲುವದಕ್ಕೆ ಸಾಧ್ಯವಾದ ಎಲ್ಲಾ ಪ್ರಯತ್ನವನ್ನು ಮಾಡುವ ವ್ಯಕ್ತಿಯ ಸಾದೃಶ್ಯವನ್ನು ಉಪಯೋಗಿಸುತ್ತಿದ್ದಾನೆ. AB ತರ್ಜುಮೆಯಲ್ಲಿ “ಓಟ ಪಂದ್ಯದಲ್ಲಿ ಎಂಬಂತೆ ಪಟ್ಟುಬಿಡದೆ ಪರಿಶ್ರಮ ಪಡುವದು” ಎಂದು ಹೇಳಲಾಗಿರುತ್ತದೆ. ನಾವು 16ನೇ ವಚನವನ್ನು ಹೀಗೆ ಸರಳಾನುವಾದ ಮಾಡಬಹುದು: “ಹಾಗಾದರೆ ತೀವ್ರಾಸಕ್ತಿಯಿಂದ ಕರುಣೆಯನ್ನು ಬಯಸುವ (‘ಇಚ್ಛೈಸುವದರಿಂದಾಲಿ’) ವ್ಯಕ್ತಿಯ ಮೇಲೆ ಅಥವಾ ಕರುಣೆಯನ್ನು ಗಳಿಸಿಕೊಳ್ಳಲು ದೊಡ್ಡ ಯತ್ನಗಳನ್ನು ಪಡುವಂತಹ (‘ಪ್ರಯತ್ನಿಸುವದರಿಂದಾಗಲಿ’) ವ್ಯಕ್ತಿಯ ಮೇಲೆ ಅದು ಅವಲಂಬಿತವಾಗಿರುವದಿಲ್ಲ.” ಬದಲಾಗಿ, ಅದು ದೇವರ ಮೇಲೆ ಅವಲಂಬಿತವಾಗಿರುತ್ತದೆ, ಆತನೇ ಕರುಣೆಯನ್ನು ವಿತರಣೆಮಾಡುವವನಾಗಿದ್ದಾನೆ.

ಪೌಲನ ಹೇಳಿಕೆಯು ಈ ವಿಧವಾದ ಪ್ರತ್ಯುತ್ತರವನ್ನು ಎಬ್ಬಿಸಬಹುದಾಗಿದೆ: “ಆದರೆ ಖಂಡಿತವಾಗಿಯೂ ನಾವು ಕರುಣೆಯನ್ನು ಇಚ್ಛೈಸಬೇಕು, ಮತ್ತು ಖಂಡಿತವಾಗಿಯೂ ಕರುಣೆಯನ್ನು ಪಡೆದುಕೊಳ್ಳುವದಕ್ಕೆ ನಮಗೆ ಸಾಧ್ಯವಾದದ್ದನ್ನು ಮಾಡತಕ್ಕದ್ದು.” ಅದು ಸತ್ಯವೇ, ಆದರೆ ಇಚ್ಛೆ ಮತ್ತು ಯತ್ನಗಳಿಂದ ಕರುಣೆ ಸಿಕ್ಕುತ್ತದೆಂಬ ಖಾತರಿ ಇರುವದಿಲ್ಲ ಎಂಬುದನ್ನು ಪೌಲನು ಸ್ಥಾಪಿಸುತ್ತಿದ್ದಾನೆ. ಹಾರೈಕೆ ಮತ್ತು ಶ್ರಮಿಸುವದರಿಂದ ದೇವರನ್ನು ನಮಗೆ ಸಾಲಗಾರನನ್ನಾಗಿ ಮಾಡುವದಿಲ್ಲ. ಯಾರ ಮೇಲೆ ಕರುಣೆ ತೋರಬೇಕೆಂದು ನಿರ್ಧರಿಸುವ ಅಧಿಕಾರ ದೇವರಿಗಿರುತ್ತದೆ.

ಅರಣ್ಯದಲ್ಲಿನ ಇಸ್ರಾಯೇಲ್ಯರು ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದ್ದಾರೆ. ವಿಮೋಚನಕಾಂಡದ ಉಲ್ಲೇಖನದ ಸನ್ನಿವೇಶದಲ್ಲಿ, ಮೋಶೆಯು ಇಸ್ರಾಯೇಲ್ಯರ ಪರವಾಗಿ ಬೇಡಿಕೊಳ್ಳುತ್ತಿದ್ದನು, ಅವರನ್ನು ಕ್ಷಮಿಸುವಂತೆ ಮೊರೆಯಿಟ್ಟನು (ವಿಮೋಚನಕಾಂಡ 32:31, 32) ಮತ್ತು ಅವರ ಸಂಗಡ ಇರುವದನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತಿದ್ದನು (ವಿಮೋಚನಕಾಂಡ 33:15). ಇಸ್ರಾಯೇಲ್ಯರು ಈ ವಿಧವಾದ ಕರುಣೆ ತೋರುವಿಕೆಗಳಿಗೆ *ಯೋಗ್ಯರಾಗಿದ್ದರೋ?* ಇಲ್ಲ, ಆದರೆ ಆ ಸಂದರ್ಭದಲ್ಲಿ ಅವರಿಗೆ ಕರುಣೆ ತೋರಿಸುವದಕ್ಕೆ ದೇವರು ನಿರ್ಧರಿಸಿದನು. ಅವರ ಮೂಲಪಿತೃಗಳಿಗೆ ಕರುಣೆಯನ್ನು ತೋರಿಸುವದರಲ್ಲಿ

ದೇವರು *ನ್ಯಾಯ*ವಾಗಿದ್ದನೆಂಬುದಾಗಿ ಪೌಲನ ಯೆಹೂದಿ ವಾಚಕರು ನಂಬುವರೋ? ಖಂಡಿತವಾಗಿ ನಂಬುವರು. ದೇವರಿಗೆ ಆರಿಸಿಕೊಳ್ಳುವ ಸಾರ್ವಭೌಮ ಅಧಿಕಾರವಿತ್ತೋ? ಖಂಡಿತವಾಗಿಯೂ ಇತ್ತು.

**ವಚನ 17.** ಪೌಲನು ಐಗುಪ್ತ್ಯದಿಂದ ಕಾಲಘಟ್ಟದಲ್ಲಿ ಹಿಂದಕ್ಕೆ ಸಾಗಿ ವಿಮೋಚಿಸಲ್ಪಡುವ ಮುಂಚಿನ ಸಮಯಕ್ಕೆ ಹಿಂದಿರುಗುತ್ತಾನೆ: **ದೇವರು ಫರೋಹನನ್ನು ಕುರಿತು–ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಖ್ಯಾತ ಪಡಿಸಬೇಕೆಂಬ ಉದ್ದೇಶದಿಂದಲೇ ನಿನ್ನನ್ನು ಉನ್ನತಸ್ಥಾನಕ್ಕೆ ತಂದಿದ್ದೇನೆಂದು ಹೇಳಿದನೆಂಬದಾಗಿ ಶಾಸ್ತ್ರೋಕ್ತಿ ಉಂಟು.**[22] ಈ ಉಲ್ಲೇಖನವು ವಿಮೋಚನಕಾಂಡ 9ನೇ ಅಧ್ಯಾಯದಿಂದ ತೆಗೆದುಕೊಳ್ಳಲ್ಪಟ್ಟಿದೆ. ಆರನೆಯ ಉಪದ್ರವ (ಹುಣ್ಣುಬೊಕ್ಕೆಗಳು) ಮತ್ತು ಏಳನೆಯ ಉಪದ್ರವದ (ಆನೆಕಲ್ಲಿನ ಮಳೆ) ನಡುವೆ, ದೇವರು ಮೋಶೆಯ ಮೂಲಕ ಫರೋಹನಿಗೆ ಒಂದು ಸಂದೇಶವನ್ನು ಕಳುಹಿಸಿದ್ದನು. ಮೋಶೆಯ ಮೂಲಕ ಯೆಹೋವನು ಫರೋಹನಿಗೆ ನಾನು ನಿನ್ನನ್ನೂ ಎಲ್ಲಾ ಐಗುಪ್ತ್ಯರನ್ನೂ ನಾಶಮಾಡಿರಬಲ್ಲೆನೆಂದು ಹೇಳಿದನು. "ಆದರೆ ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಸಿದ್ಧಿಪಡಿಸಬೇಕೆಂಬ ಉದ್ದೇಶದಿಂದಲೇ ನಿನ್ನನ್ನು ಸಾಯಿಸದೆ ಉಳಿಸಿದೆನು" (ವಿಮೋಚನಕಾಂಡ 9:16).

NASB ಯ ಪ್ರಕಾರವಾಗಿ, ವಿಮೋಚನಕಾಂಡದ ವಾಕ್ಯಭಾಗ ಮತ್ತು ಪೌಲನ ಉಲ್ಲೇಖನಗಳ ನಡುವೆ ಒಂದು ಚಿಕ್ಕದಾದ ವ್ಯತ್ಯಾಸವಿರುತ್ತದೆ. ಪೌಲನು, "ಉದ್ದೇಶದಿಂದಲೇ ನಿನ್ನನ್ನು *ಉನ್ನತಸ್ಥಾನಕ್ಕೆ* [ಅರಸನಾಗಿರುವದಕ್ಕೆ] *ತಂದಿದ್ದೇನೆಂದು"* ಹೇಳಿದರೆ, ಹಳೆಯ ಒಡಂಬಡಿಕೆಯ ವಾಕ್ಯಭಾಗವು "ಉದ್ದೇಶದಿಂದಲೇ *ನಿನ್ನನ್ನು ಸಾಯಿಸದೆ* [ಅರಸನಾಗಿ] *ಉಳಿಸಿದೆನು"* ಎಂದು ಹೇಳುತ್ತದೆ.[23] ವಿಮೋಚನಕಾಂಡ 9:16ರಲ್ಲಿನ "ನಿನ್ನನ್ನು ಸಾಯಿಸದೆ ಉಳಿಸಿದೆನು" ಎಂಬ ಪದಗುಚ್ಛವು עָמַד (*ʿamad*) ಎಂಬ ಇಬ್ರಿಯ ಪದದಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದರ ಅಕ್ಷರಶಃ ಅರ್ಥವು "ನಿಲ್ಲು" ಎಂದಾಗಿರುತ್ತದೆ (ನೋಡಿರಿ ASV). ಇತರ ತರ್ಜುಮೆಗಳು ಆ ಪದವನ್ನು "ನಾನು ನಿನ್ನನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದೇನೆ" ಎಂದು ಅನುವಾದಿಸುತ್ತವೆ (NKJV; NIV; ESV), ಅದು 17ನೇ ವಚನದಲ್ಲಿನ ಪೌಲನ ಉಲ್ಲೇಖನದೊಂದಿಗೆ ಒಪ್ಪಿಗೆಯಾಗುತ್ತದೆ. ದೇವರು ಫರೋಹನನನ್ನು ಅರಸನಾಗಿರುವದಕ್ಕೆ ಉನ್ನತಕ್ಕೇರಿಸಿದನು (ಅಥವಾ ಆ ಅಧಿಕಾರದಲ್ಲಿ ಉಳಿಯುವಂತೆ ಅನುಮತಿಸಿದನು) ಎಂಬ ವಾಸ್ತವಾಂಶವು ಆತನೇ ದೇಶಗಳ ಅಂತ್ಯಸ್ಥಿತಿಯನ್ನು ನಿಯಂತ್ರಿಸುತ್ತಾನೆ ಎಂಬದನ್ನು ಒತ್ತಿಹೇಳುತ್ತದೆ.

"ನನ್ನ ಜನರನ್ನು ಹೋಗುವಂತೆ ಬಿಡುಗಡೆಗೊಳಿಸು" ಎಂಬ ದೈವಿಕ ಆದೇಶಕ್ಕೆ ಫರೋಹನು ಹೇಗೆ ಪ್ರತಿಸ್ಪಂದಿಸಿದ್ದರೂ ಸರಿಯೇ ದೇವರ ಸಂಕಲ್ಪವು ನೆರವೇರಿರುತ್ತಿತ್ತೆಂಬದನ್ನು ನಾವು ಗ್ರಹಿಸಿಕೊಳ್ಳತಕ್ಕದ್ದು (ವಿಮೋಚನಕಾಂಡ 5:1). ಫರೋಹನು ವಿಧೇಯನಾಗಿದ್ದರೆ, ಐಗುಪ್ತ್ಯದ ಬಲಿಷ್ಠ ಅರಸನು ಇಸ್ರಾಯೇಲ್ಯರ ದೇವರ ಬೇಡಿಕೆಗಳಿಗೆ ತನ್ನನ್ನು ಒಪ್ಪಿಸಿಕೊಟ್ಟನೆಂಬ ಸುದ್ಧಿಯು ಎಲ್ಲೆಡೆ ಹರಡಿರುತ್ತಿತ್ತು. ಅದರ ಫಲಿತವಾಗಿ, ದೇವರ ಶಕ್ತಿಯು ತೋರ್ಪಡಿಸಲ್ಪಡುತ್ತಿತ್ತು ಮತ್ತು ಆತನ ನಾಮವು ಭೂಮಿಯೆಲ್ಲೆಲ್ಲಾ ಪ್ರಚುರಗೊಳ್ಳುತ್ತಿತ್ತು. ಸಹಜವಾಗಿ, ಫರೋಹನು ನಿರಾಕರಿಸಿದನು, ಅದರ

ಫಲಿತವಾಗಿ ಹತ್ತು ಉಪದ್ರವಗಳು ಸಂಭವಿಸಿದವು, ನಂತರ ವಿಮೋಚನೆಯು ದೊರಕುತ್ತದೆ, ಕೆಂಪು ಸಮುದ್ರವನ್ನು ದಾಟುವಿಕೆ, ಮತ್ತು ಐಗುಪ್ತ್ಯದ ಸೈನ್ಯದ ನಾಶನ ಸಂಭವಿಸುತ್ತದೆ. ಆ ಪರಾಕ್ರಮದ ಕ್ರಿಯೆಗಳ ಸುದ್ಧಿಯು ಮೂಲೆಮೂಲೆಗೂ ವ್ಯಾಪಕವಾಗಿ ಹಬ್ಬಿತು (ನೋಡಿರಿ ಯೆಹೋಶುವ 2:10, 11; 9:9; 1 ಸಮುವೇಲ 4:8).

**ವಚನ 18.** ನಂತರ ಪೌಲನು ದೇವರ ಕ್ರಿಯೆಗಳ ವಿಷಯದಲ್ಲಿ ಈ ಸಂಕ್ಷೀಪ್ತ ಹೇಳಿಕೆಯನ್ನು ನೀಡುತ್ತಾನೆ: **ದೇವರು ಯಾರನ್ನು ಕರುಣಿಸಿದರೂ** [ನೋಡಿರಿ 9:15, 16] **ಯಾರನ್ನು ಕಠಿಣಪಡಿಸಿದರೂ ಅದೆಲ್ಲವು ಆತನ ಇಷ್ಟಾನುಸಾರವಾಗಿಯೇ ಇದೆ** [ನೋಡಿರಿ 9:17]. "ದೇವರು ನಿಮ್ಮ ಮೂಲಪಿತೃಗಳಿಗೆ ಕರುಣೆಯನ್ನು ತೋರಿಸಿದ್ದರಲ್ಲಿ ನ್ಯಾಯವಾಗಿದ್ದನೋ?" ಎಂದು ನೀವು ಒಬ್ಬ ಯೆಹೂದ್ಯನನ್ನು ಕೇಳಿದ್ದರೆ, ಆತನು ಈ ರೀತಿಯಲ್ಲಿ ಉತ್ತರಿಸಿರುತ್ತಿದ್ದನು, "ಖಂಡಿತವಾಗಿಯೂ ನ್ಯಾಯವಾಗಿದ್ದನು." ಒಂದು ವೇಳೆ ನೀವು ಆತನನ್ನು "ದೇವರು ಫರೋಹನನ್ನು ಕಠಿಣಪಡಿಸಿದ್ದರಲ್ಲಿ ನ್ಯಾಯವಾಗಿದ್ದನೋ?" ಎಂದು ಕೇಳಿದ್ದರೆ, ಆತನು "ನಿಶ್ಚಯವಾಗಿಯೂ ಹೌದು!" ಎಂದು ಉತ್ತರಿಸಿರುತ್ತಿದ್ದನು. ಈ ವಿಧದಲ್ಲಿ, ದೇವರು ಕೆಲವರನ್ನು ಅಂಗೀಕರಿಸಿಕೊಂಡು ಇನ್ನು ಕೆಲವರನ್ನು ತಿರಸ್ಕರಿಸುವದರಲ್ಲಿ ಸಾರ್ವಭೌಮನು ಯಾಕೆಂದರೆ ಆತನು ವರ್ಷಗಳಿಂದ ಮಾಡುತ್ತಾ ಬಂದಿರುವ ತನ್ನ ಆಚರಣೆಯೊಂದಿಗೆ ಸಾಮಂಜಸ್ಯದಿಂದಿರುತ್ತಾನೆ ಎಂಬುದನ್ನು ಪೌಲನು ಸ್ಥಾಪಿಸುತ್ತಿದ್ದಾನೆ. ಆತನು *ಯಾವಾಗಲೂ* ಕೆಲವರನ್ನು ಅಂಗೀಕರಿಸಿಕೊಂಡಿದ್ದಾನೆ ಮತ್ತು ಇತರರನ್ನು ತಿರಸ್ಕರಿಸಿದ್ದಾನಷ್ಟೆ.

ದೇವರು ಫರೋಹನ ವಿಷಯದಲ್ಲಿ ಹೇಗೆ ಕ್ರಮ ತೆಗೆದುಕೊಂಡನೆಂಬ ಬಗ್ಗೆ ಪೌಲನು ವಿವರಗಳನ್ನು ಕೊಡುವದಿಲ್ಲ, ಯಾಕೆಂದರೆ ಅದು ಪ್ರತಿಯೊಬ್ಬ ಯೆಹೂದಿ ಶಾಲಾ ಬಾಲಕನಿಗೆ ಗೊತ್ತಿದ್ದಂತಹ ಒಂದು ಕಥೆಯಾಗಿತ್ತು. ಪೌಲನು ತನ್ನ ವಾಚಕರು ಗಮನವನ್ನು ಮುಖ್ಯವಾಗಿ ಫರೋಹನ ಹೃದಯವು ಕಠಿಣಪಡಿಸಲ್ಪಡುವದರ ಮೇಲೆ ಹರಿಸಬೇಕೆಂದು ಇಚ್ಛಿಸಿದನು. ಒಂದು ಕಠಿಣ ಹೃದಯವು ವಿಶ್ವಾಸವಿಡದಂತಹ, ಮೊಂಡತನದ, ಮಣಿಯದಂತಹ ಒಂದು ಹೃದಯವಾಗಿರುತ್ತದೆ. Moo ಇದನ್ನು "ದೇವರಿಗೆ, ಆತನ ವಾಕ್ಯಕ್ಕೆ, ಮತ್ತು ಆತನ ಕ್ರಿಯೆದ ವಿಷಯದಲ್ಲಿ ಪ್ರತಿಕ್ರಿಯೆ ತೋರದ ಒಂದು ಸ್ಥಿತಿ" ಎಂಬದಾಗಿ ಕರೆದನು.[24]

ದೇವರು *ಹೇಗೆ* (ಯಾವ ಅರ್ಥದಲ್ಲಿ) ಫರೋಹನ ಹೃದಯವನ್ನು ಕಠಿಣಪಡಿಸಿದನು ಎಂಬುದನ್ನು ಚರ್ಚಿಸುವದಕ್ಕೆ ಅನೇಕ ತಾಸುಗಳನ್ನು ಕಳೆದಿರುತ್ತಾರೆ. ನಾವು ಹತ್ತು ಉಪದ್ರವಗಳ ಕುರಿತು ಓದುವಾಗ, ಕಾಲದ ಭಾಗವಾಗಿ ದೇವರು ಫರೋಹನ ಹೃದಯವನ್ನು ಕಠಿಣಪಡಿಸಿದನೆಂಬದಾಗಿ ಕಥನವು ತಿಳಿಸುತ್ತದೆ (ವಿಮೋಚನಕಾಂಡ 9:12; 10:1, 20, 27; 11:10; 14:8), ಮತ್ತು ಕಾಲದ ಒಂದು ಭಾಗವು ಫರೋಹನು ಸ್ವತಃ ತನ್ನ ಹೃದಯವನ್ನು ಕಠಿಣಪಡಿಸಿಕೊಂಡನೆಂದು ಹೇಳುತ್ತದೆ (ವಿಮೋಚನಕಾಂಡ 7:13, 14, 22; 8:15, 19, 32; 9:7, 34, 35). ದೇವರು ಮೋಶೆಯ ಮೂಲಕವಾಗಿ ಫರೋಹನನಿಗೆ ನನ್ನ ಜನರಿಗೆ ಹೊರಡಲು "ಅಪ್ಪಣೆ ಕೊಡಬೇಕೆಂದು" ಹೇಳುವ ಮೂಲಕ ಪರೋಕ್ಷವಾಗಿ ಆತನ ಹೃದಯವನ್ನು ಕಠಿಣಪಡಿಸಿದರೆ, ಫರೋಹನು ದೇವರ ಆದೇಶಕ್ಕೆ ಕಿವಿಗೊಡಲು ನಿರಾಕರಿಸುವ ಮೂಲಕ ಸ್ವತಃ ತಾನೇ ಹೃದಯವನ್ನು ಕಠಿಣಪಡಿಸಿಕೊಂಡನು ಎಂಬದಾಗಿ

ಅನೇಕ ಬರಹಗಾರರು ಮುಕ್ತಾಯಕ್ಕೆ ಬರುತ್ತಾರೆ. "ಇಲ್ಲಿ ಆಗಲಿ ಬೇರೆ ಎಲ್ಲಾದರೂ ಆಗಲಿ ಒಬ್ಬನು ಮೊದಲು ತನ್ನನ್ನು ಕಠಿಣಪಡಿಸಿಕೊಂಡ ಹೊರತು ದೇವರು ಯಾವನನ್ನೂ ಕಠಿಣಪಡಿಸಿದನೆಂದು ಹೇಳಲಾಗಿರುವದಿಲ್ಲ" ಎಂಬದಾಗಿ Morris ಅಭಿಪ್ರಾಯ ಪಡುತ್ತಾನೆ.[25]

ಈ ದಿನಗಳಲ್ಲಿ ಸಹ ದೇವರು ಫರೋಹನ ಹೃದಯವನ್ನು ಹೇಗೆ ಕಠಿಣಪಡಿಸಿದನೆಂಬದನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುತ್ತಾರಾದರೂ, ಪೌಲನು ತನ್ನ ಯೆಹೂದಿ ವಾಚಕರಿಗೆ ವಿವಾದವನ್ನುಂಟು ಮಾಡುವ ಸಮಸ್ಯಾತ್ಮಕ ವಿಷಯವನ್ನು ಎತ್ತುವವನಾಗಿರಲಿಲ್ಲ. ದೇವರು ಫರೋಹನ ಹೃದಯವನ್ನು ಕಠಿಣ ಪಡಿಸಿದನೆಂಬುದನ್ನು ಓದಿ, ನಂತರ ಆತನಿಗೋಸ್ಕರ ವಿಷಾದ ವ್ಯಕ್ತಪಡಿಸುವಂತಹ ಕೆಲವು ಜನರನ್ನು ನಾನು ಭೇಟಿಯಾಗಿದ್ದೇನೆ, ಆದರೆ ಯೆಹೂದ್ಯರ ಹೃದಯಗಳಲ್ಲಂತೂ ಫರೋಹನಿಗಾಗಿ ಯಾವದೇ ಸಹಾನುಭೂತಿ ಇರುವದಿಲ್ಲ. ಅವರ ಅಭಿಪ್ರಾಯದ ಪ್ರಕಾರವಾಗಿ ನೋಡುವದಾದರೆ, ಆ ದಬ್ಬಾಳಿಕೆ ಮಾಡುವ ಅರಸನ ವಿಷಯದಲ್ಲಿ ದೇವರಿಗೆ ತಾನು ಇಷ್ಟಪಟ್ಟ ಹಾಗೆ ಮಾಡುವ ಅಧಿಕಾರವಿತ್ತು ಎಂಬುದೆ.

## ಆತನ ವ್ಯಕ್ತಿತನದೊಂದಿಗೆ ಸಮಂಜಸವಾಗಿದ್ದನು (9:19-21)

**[19]ದೇವರ ಇಷ್ಟವನ್ನು ಎದುರಿಸುವವರು ಇಲ್ಲದಿರುವಲ್ಲಿ ಆತನು ತಪ್ಪುಹಿಡಿಯುವದು ಹೇಗೆ ಎಂದು ನನ್ನನ್ನು ಕೇಳುವಿ. [20]ಎಲೋ ಮನುಷ್ಯನೇ, ಹಾಗನ್ನಬೇಡ; ದೇವರಿಗೆ ಎದುರುಮಾತಾಡುವದಕ್ಕೆ ನೀನು ಎಷ್ಟರವನು? ರೂಪಿಸಲ್ಪಟ್ಟದ್ದು ರೂಪಿಸಿದವನಿಗೆ– ನನ್ನನ್ನು ಹೀಗೇಕೆ ಮಾಡಿದೆ ಎಂದು ಕೇಳುವದುಂಟೇ? [21]ಉತ್ತಮವಾದ ಬಳಕೆಗೆ ಒಂದು ಪಾತ್ರೆಯನ್ನೂ ಹೀನವಾದ ಬಳಕೆಗೆ ಮತ್ತೊಂದು ಪಾತ್ರೆಯನ್ನೂ ಒಂದೇ ಮುದ್ದೆಯಿಂದ ಮಾಡುವದಕ್ಕೆ ಕುಂಬಾರನಿಗೆ ಮಣ್ಣಿನ ಮೇಲೆ ಅಧಿಕಾರವಿಲ್ಲವೋ?**

ದೇವರ ಆಚರಣೆಯಲ್ಲಿನ ಸಾಮಂಜಸ್ಯತೆಯ ಬಗ್ಗೆ ಸ್ಥಾಪಿಸಿದ ಬಳಿಕ (9:14-18), ಪೌಲನು ಆಯ್ಕೆಗಳನ್ನು ಮಾಡುವದರಲ್ಲಿ ದೇವರ ನ್ಯಾಯೋಚಿತತೆಯು ಆತನ ವ್ಯಕ್ತಿತನದೊಂದಿಗೆ ಸಾಮಂಜಸ್ಯತೆಯಲ್ಲಿರುತ್ತದೆ ಎಂಬುದನ್ನು ಕಲಿಸಿದನು (9:19-21). ಇದರರ್ಥವೇನೆಂದರೆ ಆತನು ಮಾಡುವ ಆಯ್ಕೆಗಳು ಆತನ ಸ್ವಭಾವದೊಂದಿಗೆ, ಆತನು ಯಾರಾಗಿದ್ದಾನೆಂಬುದರೊಂದಿಗೆ ಸಾಮಂಜಸ್ಯತೆಯಿಂದಿರುತ್ತವೆ ಎಂಬುದೆ.

**ವಚನ 19.** ಪೌಲನು ಒಂದು ಆಕ್ಷೇಪಣೆಯನ್ನು ಎದುರುನೋಡುವವನಾಗಿ ತನ್ನ ವಿಚಾರವನ್ನು ಒಂದು ತೀವ್ರ ವಿಮರ್ಶೆಯ ಮೂಲಕ ಪರಿಯಿಸುತ್ತಾನೆ: **ದೇವರ ಇಷ್ಟವನ್ನು ಎದುರಿಸುವವರು ಇಲ್ಲದಿರುವಲ್ಲಿ ಆತನು ತಪ್ಪುಹಿಡಿಯುವದು ಹೇಗೆ ಎಂದು ನನ್ನನ್ನು ಕೇಳುವಿ.** ಈ ವಚನದಲ್ಲಿನ ಕಾಲ್ಪನಿಕ ಎದುರಾಳಿಯು ಬಹುಶಃ ಒಬ್ಬ ಯೆಹೂದ್ಯನಾಗಿರಲಿಕ್ಕಿಲ್ಲ. ಇದು ವರೆಗೆ (7ನೇ ವಚನದ ಮಧ್ಯದಿಂದ ಆರಂಭಗೊಂಡು), ಯೆಹೂದ್ಯನೊಬ್ಬನು ಒಮ್ಮತ ವ್ಯಕ್ತಪಡಿಸದೆ ಇರಬಹುದಾದ ಯಾವುದೊಂದೂ ಪೌಲನ ವಾದದಲ್ಲಿರಲಿಲ್ಲ. ಆದುದರಿಂದ, ನಾವು 19ನೇ ವಚನಕ್ಕೆ ಬರುವಾಗ, ಪೌಲನು ತನ್ನ ಸಹ ಯೆಹೂದ್ಯನ ಜೊತೆಯಲ್ಲಿ ನಿಂತುಕೊಂಡವನಾಗಿ, ಕಾಲ್ಪನಿಕ ಹೊರಗಿನವನ ಕಡೆಗೆ ಮುಖಮಾಡಿಕೊಂಡು ಆತನನ್ನು

ವಿರೋಧಿಸುತ್ತಿರುವ ರೀತಿಯಲ್ಲಿ ಊಹಿಸಿಕೊಳ್ಳತಕ್ಕದ್ದು. ಪೌಲನು ಆತನನ್ನು 20ನೇ ವಚನದಲ್ಲಿ "ಮನುಷ್ಯನೇ" ಎಂದು ಕರೆದನು. ಈ ವ್ಯಕ್ತಿಯ ದೂರು ಏನೆಂದು ಹೇಳಲಾಗಿದೆ: "ಆದರೆ ದೇವರು ತಾನು ಇಷ್ಟ ಪಡುವವರಿಗೆ ಕರುಣೆಯನ್ನು ತೋರುವವನು ಮತ್ತು ತಾನು ಇಚ್ಛಿಸುವಂತೆ ಒಬ್ಬನನ್ನು ಕಠಿಣಪಡಿಸುವವನು ಆಗಿರುವದಾದರೆ [ನೋಡಿರಿ 9:18], ಏಕೆ ಆತನು ತಪ್ಪು ಕಂಡುಹಿಡಿಯುತ್ತಾನೆ? ಅಂತೂ, ದೇವರ ಚಿತ್ತವನ್ನು ಯಾರು ವಿರೋಧಿಸುವದಕ್ಕೆ ಸಾಧ್ಯ?"

ಈ ರೀತಿಯ ಪ್ರಶ್ನೆಗಳು ದೇವರ ಪೂರ್ವಜ್ಞಾನದ ಕುರಿತ ಚರ್ಚೆಯಲ್ಲಿ ಅತ್ಯಂಥ ಮುಖ್ಯ ಭಾಗವಾಗಿರುತ್ತವೆ. ದೇವರಿಗೆ ಮುಂಚಿತವಾಗಿಯೇ ತಿಳಿದಿರುವದಾದರೆ ಮತ್ತು, ಕೆಲವು ಸಂದರ್ಭಗಳಲ್ಲಿ, ಇಂತಿಂಥ ವ್ಯಕ್ತಿಯು ಇಂತಿಂಥ ಕಾರ್ಯವನ್ನು ಮಾಡುವನೆಂಬದಾಗಿ ಮುಂದಾಗಿ ಸಹ ತಿಳಿಸಲ್ಪಟ್ಟಿದ್ದರೆ, ದೇವರು ಏಕೆ ಆ ವ್ಯಕ್ತಿಯನ್ನು ಆತನು ಮಾಡಿದ ಕಾರ್ಯಕ್ಕೆ ಜವಾಬ್ದಾರನನ್ನಾಗಿ ಪರಿಗಣಿಸುವದಿಲ್ಲ? ದೇವರ ಚಿತ್ತವನ್ನು ಯಾರು ವಿರೋಧಿಸಬಲ್ಲರು? ನಾವು 19ನೇ ವಚನದಲ್ಲಿ ಪ್ರಶ್ನೆಯನ್ನು ಓದುವಾಗ, ಪೌಲನು ಅದಕ್ಕೆ ಹೇಗೆ ಪ್ರತ್ಯುತ್ತರ ಕೊಡುತ್ತಾನೆಂಬುದನ್ನು ಕೇಳಿಸಿಕೊಳ್ಳುವದಕ್ಕೆ ನಾವು ಅತ್ಯಂತ ಅಧಿಕ ಉತ್ಸುಕರಾಗಿರುತ್ತೇವೆ.

**ವಚನಗಳು 20, 21.** ನಾವು ಹೇಗೆ ಉತ್ತರಿಸಬೇಕೆಂದು ಬಯಸಬಹುದೋ ಆ ರೀತಿಯಲ್ಲಿ ಪೌಲನು ಉತ್ತರಿಸುವದಿಲ್ಲ. ಆತನು ದೇವರ ಸಾರ್ವಭೌಮತೆ ಹಾಗೂ ಮನುಷ್ಯನ ಸ್ವೇಚ್ಛಾ–ಚಿತ್ತದ ನಡುವಿನ ಸಂಬಂಧದ ಬಗ್ಗೆ ಒಂದು ದೀರ್ಘವಾದ ಚರ್ಚೆಯನ್ನು ಆತನು ಆರಂಭಿಸಲಿಲ್ಲ. ಬದಲಾಗಿ, ಆತನ ಮೂಲಭೂತ ಉತ್ತರವು ಏನಾಗಿತ್ತೆಂದರೆ ದೇವರು ಮನುಷ್ಯನಿಗೆ ಉತ್ತರ ಹೇಳಬೇಕಾಗಿರುವದಿಲ್ಲ. ಅಂತೂ, ಆತನು ದೇವರಾಗಿದ್ದಾನಷ್ಟೇ!

ಪೌಲನು ಹೀಗೆ ಹೇಳುತ್ತಾನೆ, **ಎಲೋ ಮನುಷ್ಯನೇ, ಹಾಗನ್ನಬೇಡ; ದೇವರಿಗೆ ಎದುರುಮಾತಾಡುವದಕ್ಕೆ ನೀನು ಎಷ್ಟರವನು?** ಈ ಪ್ರಶ್ನೆಯಲ್ಲಿ ಎರಡು ಪದಗಳು ಒಂದಕ್ಕೊಂದು ವಿರುದ್ಧವಾಗಿ ಹೋಲಿಸಲ್ಪಟ್ಟಿವೆ: "ಮನುಷ್ಯನೇ" (ἄνθρωπος, *anthrōpos*[26]) ಮತ್ತು "ದೇವರು" (θεός, *theos*). ಒಂದು ಕಡೆಯಲ್ಲಿ, ಪರಿಮಿತನಾದ, ಮೀತಿಯುಳ್ಳ, ದುರ್ಬಲನಾದ, ಅಜ್ಞಾನಿಯಾದ ಮನುಷ್ಯನಿದ್ದಾನೆ; ಮತ್ತು ಇನ್ನೊಂಡೆಯಲ್ಲಿ, ಅಪರಿಮಿತನಾದ, ಮೀತಿಯಿಲ್ಲದವನಾದ, ಸರ್ವಶಕ್ತನಾದ, ಸರ್ವಜ್ಞಾನಿಯಾದ ದೇವರಿದ್ದಾನೆ. ಈ ತದ್ವಿರುದ್ಧತೆಯು CJBಯಲ್ಲಿ ಎತ್ತಿತೋರಿಸಲ್ಪಟ್ಟಿದೆ, ಅದು 20ನೇ ವಚನವನ್ನು ಹೀಗೆ ಅನುವಾದಿಸುತ್ತದೆ: "ದೇವರಿಗೆ ಎದುರು ಮಾತಾಡುವದಕ್ಕೆ ನೀನು ಯಾರು, ಒಬ್ಬ ಕೇವಲನಾದ ಮಾನವ ಜೀವಿ?"

ಮನುಷ್ಯನು ದೇವರಿಗೆ ಎದುರು ಮಾತಾಡುವದು ಹೇಗೆ ಹಾಸ್ಯಾಸ್ಪದವಾದದ್ದೆಂಬುದನ್ನು ತೋರಿಸುವದಕ್ಕೆ, ಪೌಲನು ಯೆಹೂದ್ಯರಿಗೆ ಪರಿಚಿತವಿದ್ದ ಒಂದು ಸಾದೃಶ್ಯವನ್ನು ಉಪಯೋಗಿಸುತ್ತಾನೆ: ಒಬ್ಬ ಕುಂಬಾರ ಹಾಗೂ ಆತನ ಜೇಡಿ ಮಣ್ಣು (ನೋಡಿರಿ ಯೆಶಾಯ 29:16; 45:9; 64:8; ಯೆರೆಮಿಯ 18:6). ಅಪೊಸ್ತಲನು ಹೀಗೆ ಹೇಳಿದನು, **ರೂಪಿಸಲ್ಪಟ್ಟದ್ದು ರೂಪಿಸಿದವನಿಗೆ–ನನ್ನನ್ನು ಹೀಗೇಕೆ ಮಾಡಿದೆ ಎಂದು ಕೇಳುವದುಂಟೇ? ಉತ್ತಮವಾದ ಬಳಕೆಗೆ ಒಂದು ಪಾತ್ರೆಯನ್ನೂ ಹೀನವಾದ ಬಳಕೆಗೆ**

**ಮತ್ತೊಂದು ಪಾತ್ರೆಯನ್ನೂ ಒಂದೇ ಮುದ್ದೆಯಿಂದ ಮಾಡುವದಕ್ಕೆ ಕುಂಬಾರನಿಗೆ ಮಣ್ಣಿನ ಮೇಲೆ ಅಧಿಕಾರವಿಲ್ಲವೋ?**

ಚಕ್ರವಿಟ್ಟುಕೊಂಡ ಕೆಲಸದಲ್ಲಿ ತೊಡಗಿರುತ್ತಿದ್ದ ಕುಂಬಾರನ ದೃಶ್ಯವು ಬೈಬಲ್ ಕಾಲದಲ್ಲಿ ಸರ್ವಸಾಧಾರಣವಾಗಿತ್ತು. ಕುಂಬಾರನು ಮಣ್ಣಿನ ಒಂದು ಮುದ್ದೆಯನ್ನು ಚಕ್ರದ ಮಧ್ಯಭಾಗದಲ್ಲಿಡುತ್ತಿದ್ದನು, ಚಕ್ರವನ್ನು ತಿರುಗಿಸಲಾರಂಭಿಸುತ್ತಿದ್ದನು, ಮತ್ತು ಮಣ್ಣಿನ ಮುದ್ದೆಯನ್ನು ಕುಶಲತೆಯಿಂದ ಒಂದು ಪಾತ್ರೆಯನ್ನಾಗಿ ರೂಪಿಸುತ್ತಿದ್ದನು. ಅದೊಂದು "ಸುಂದರವಾದ ಪುಷ್ಪದಾನಿ" ಯಂತಹ ಒಂದು "ಉತ್ತಮವಾದ ಬಳಕೆಗೆ" ರೂಪಿಸಲ್ಪಟ್ಟ ಪಾತ್ರೆಯಾಗಿರಬಹುದಿತ್ತು (Phillips), ಅಥವಾ ಅದು "ಕಸವನ್ನು ಎಸೆಯುದಕ್ಕೆ" ಇರುವ ಒಂದು "ಹೀನವಾದ ಬಳಕೆಗೆ" ರೂಪಿಸಲ್ಪಟ್ಟ ಪಾತ್ರೆಯಾಗಿರಬಹುದಾಗಿತ್ತು (NLT). "ಉತ್ತಮವಾದ ಬಳಕೆಗೆ" ಮತ್ತು "ಹೀನವಾದ ಬಳಕೆಗೆ" ಎಂಬುದರ ಬದಲಾಗಿ ಗ್ರೀಕ್ ವಾಕ್ಯದಲ್ಲಿ "ಗೌರವವಾದ" ಮತ್ತು "ಅಗೌರವವಾದ" ಎಂದಿರುತ್ತದೆ. ದೇವರು ತನ್ನ ವಿಶೇಷ ಜನವಾಗಿ ಗೌರವಿಸಿದ, ಇಸ್ರಾಯೇಲ್ಯರು (9:4, 5), "ಉತ್ತಮವಾದ ಬಳಕೆಗೆ" ಇರುವಂಥ ಪಾತ್ರೆಗೆ ಒಂದು ದೃಷ್ಟಾಂತವಾಗಿದ್ದಾರೆ. ಫರೋಹನು "ಹೀನವಾದ ಬಳಕೆಗೆ" ಇರುವಂಥ ಒಂದು ಪಾತ್ರೆಗೆ ಉದಾಹರಣೆಯಾಗಿರಬಲ್ಲನು. ಕುಂಬಾರನಿಗೆ ಮಣ್ಣಿನ ಮೇಲೆ ನಿಯಂತ್ರಣವಿರುತ್ತದೆ, ಮತ್ತು ಯಾವ ಕಸದ ಪಾತ್ರೆಯು ಸಹ ಎಂದೂ, "ನೀನು ನನ್ನನ್ನು ಏಕೆ ಒಂದು ಸುಂದರವಾದ ಪುಷ್ಪದಾನಿಯನ್ನಾಗಿ ರೂಪಿಸಲಿಲ್ಲ?" ಎಂದು ಗುಣಗುಟ್ಟಲಿಲ್ಲ ಎಂಬದಾಗಿ ಪೌಲನು ಹೇಳುತ್ತಿದ್ದಾನೆ.

ಎಲ್ಲಾ ಸಾದೃಶ್ಯಗಳ ಹಾಗೆಯೇ, ಇದನ್ನು ಸಹ ಅತಿಯಾದ ದೂರಕ್ಕೆ ಕೊಂಡೊಯ್ಯಬಾರದು. ಮೊದಲನೆಯದಾಗಿ, ಜನರು ಜಡಸ್ಥಿತಿಯ ಮಣ್ಣಿನಂತಿರುವದಿಲ್ಲ. ಅವರು ದೇವರನ್ನು ಎದುರಿಸಬಲ್ಲರು; ಅವರು ಅನೇಕ ಸಾರಿ ದೇವರು ತಮ್ಮನ್ನು ಹೇಗೆ ರೂಪಿಸಿದ್ದಾನೆ ನೋಡು ಎಂದು ಗುಣಗುಟ್ಟುತ್ತಿರುತ್ತಾರೆ. ("ನಾನೇಕೆ ಇಷ್ಟೊಂದು ಕುಳ್ಳನು . . . ಎತ್ತರ . . . ದಪ್ಪ . . . ಆಗಿದ್ದೇನೆ?") ಎರಡನೆಯದಾಗಿ, "ಮಣ್ಣಿನ" ಗುಣಮಟ್ಟವು ಅದು ಯಾವ ರೀತಿಯ ಪಾತ್ರೆಯಾಗಿ ರೂಪಿಸಲ್ಪಡುವದು ಮತ್ತು ಹೇಗೆ ಉಪಯೋಗಿಸಲ್ಪಡುವದು ಎಂಬುದರಲ್ಲಿ ಮುಖ್ಯ ಕಾರಣಾಂಶವಾಗಿರುತ್ತದೆ (ನೋಡಿರಿ ಯೆರೆಮಿಯ 18:1-10; 2 ತಿಮೊಥೆ 2:20, 21). ಫರೋಹನ ವಿಷಯದಲ್ಲಂತೂ ಖಂಡಿತವಾಗಿ ಅದು ಸತ್ಯವಾಗಿತ್ತು. ಹೇಗಿದ್ದರೂ, ಪೌಲನ ವಿಚಾರವು ಪ್ರಾಮಾಣೀಕೃತವಾಗಿ ನಿಲ್ಲುತ್ತದೆ: ದೇವರು ದೇವರೇ, ಮತ್ತು ಆತನಿಗೆ ತಾನಿಚ್ಛೆಸುವದನ್ನು ಮಾಡುವ ಅಧಿಕಾರವಿರುತ್ತದೆ.

ಪೌಲನು 19ನೇ ವಚನದಲ್ಲಿನ ಪ್ರಶ್ನೆಗೆ ಉತ್ತರಿಸುವದಕ್ಕೆ ಅಷ್ಟಾಗಿ ಯತ್ನಿಸಲಿಲ್ಲವೆಂದು ನಮ್ಮಲ್ಲಿ ಕೆಲವರು ನಿರಾಶಗೊಳ್ಳಬಹುದೆನೋ, ಆದರೆ ಆತನು ಯೆಹೂದ್ಯರಿಗೆ ಇಷ್ಟವಾಗುವಂತೆ ರೂಪಿಸಲ್ಪಟ್ಟ ದಾರಿಯನ್ನು ಅನುಸರಿಸುತ್ತಿದ್ದಾನೆ ಎಂಬದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಒಬ್ಬ ಯೆಹೂದ್ಯೇತರನು ಆಕ್ಷೇಪಣೆಯೆತ್ತಿ ದೇವರು ಇಸ್ಮಾಯೇಲನನ್ನು ಬಿಟ್ಟು ಇಸಾಕನನ್ನು ಆರಿಸಿಕೊಂಡಿದ್ದು ಅಥವಾ ಏಸಾವನಿಗೆ ಬದಲಾಗಿ ಯಾಕೋಬನನ್ನು ಆರಿಸಿಕೊಂಡಿದ್ದು ನ್ಯಾಯವಲ್ಲ, ಅಥವಾ ಕರ್ತನು ಫರೋಹನ ಹೃದಯವನ್ನು ಕಠಿಣ ಪಡಿಸಿದ ಬಳಿಕ ಅವಿಧೇಯರಾಗಿ ತಿರುಗಿ ಬಿದ್ದ ಇಸ್ರಾಯೇಲ್ಯರನ್ನು

ಉಳಿಸಿದ್ದು ನ್ಯಾಯವಾದದ್ದಲ್ಲ ಎಂದು ಹೇಳಿದರೆ ಹೇಗಿರುತ್ತದೆ? ಒಬ್ಬ ಯೆಹೂದ್ಯನು ಹೀಗೆ ಪ್ರತ್ಯುತ್ತರ ಕೊಡುವದನ್ನು ಊಹಿಸಿಕೊಳ್ಳುವದು ಕಷ್ಟವೇನಲ್ಲ, "ನಿನ್ನನ್ನು ಯಾರೆಂದು ಭಾವಿಸಿಕೊಂಡಿರುವಿ? ದೇವರನ್ನು ಪ್ರಶ್ನಿಸುವದಕ್ಕೆ ನಿನಗೇನು ಅಧಿಕಾರವಿದೆ?" ಎಂಬದೆ. ಖಂಡಿತವಾಗಿಯೂ, ಪೌಲನು ಈ ಮುಕ್ತಾಯಕ್ಕೆ ಬರುವದನ್ನು ನಿರೀಕ್ಷಿಸುತ್ತಿದ್ದನು ಏನೆಂದರೆ, ಒಬ್ಬ ಯೆಹೂದ್ಯೇತರನಿಗೆ ದೇವರನ್ನು ಆತನ ಆಯ್ಕೆಗಳ ವಿಷಯದಲ್ಲಿ ಪ್ರಶ್ನಿಸುವ ಹಕ್ಕು ಇಲ್ಲವೆಂದಾದರೆ, ಕರ್ತನು ವಿಶ್ವಾಸಿಗಳನ್ನು ಆರಿಸಿಕೊಂಡು ವಿಶ್ವಾಸಿಸದವರನ್ನು ತಿರಸ್ಕರಿಸಿದ್ದನ್ನು ಪ್ರಶ್ನಿಸುವ ಹಕ್ಕು ಒಬ್ಬ ಯೆಹೂದ್ಯನಿಗೂ ಇಲ್ಲ ಎಂಬುದೇ.

"ದೇವರು ನ್ಯಾಯವಾಗಿದ್ದಾನೋ?" ಎಂಬ ಪ್ರಶ್ನೆಯ ವಿಷಯಕ್ಕೆ ಬರುವದಾದರೆ, ನಾವು ಪೌಲನ ಎರಡನೆಯ ಅಂಶವನ್ನು ನಾವು ಹೀಗೆ ವ್ಯಕ್ತಪಡಿಸಬಹುದು: "ದೇವರು ನ್ಯಾಯವಾದವನು ಯಾಕೆಂದರೆ ಆತನು ದೇವರಾಗಿದ್ದಾನೆ—ಮತ್ತು ಆತನು ಏನೇ ಮಾಡಿದರೂ ಅದು ಆತನ ಸ್ವಭಾವಕ್ಕೆ, ಆತನು ಯಾರಾಗಿದ್ದಾನೆಂಬುದರೊಂದಿಗೆ ಸಾಮಂಜಸ್ಯತೆಯಲ್ಲಿರುತ್ತದೆ." ಕೆಲವು ಸಾರಿ ದೇವರು ಒಂದು ಕಾರ್ಯವನ್ನು ಮಾಡುವಾಗ ಆತನು ಏಕೆ ಹಾಗೆ ಮಾಡುತ್ತಾನೆ ಎಂಬುದನ್ನು ನಮಗೆ ಅರ್ಥಮಾಡಿಕೊಳ್ಳಲು ಆಗುವದಿಲ್ಲ (ಅಂತೂ, ನಾವು ಕೇವಲ ಮಾನವರು), ಆದರೆ ಆತನು ಸರಿಯಾದದ್ದನ್ನೇ ಮಾಡುವನೆಂಬ ಭರವಸೆಯನ್ನು ಆತನಲ್ಲಿ ಇಡಬಹುದಾಗಿದೆ. ಅಬ್ರಹಾಮನು ಹೇಳಿದ ಪ್ರಕಾರ, "ಸರ್ವಲೋಕಕ್ಕೆ ನ್ಯಾಯತೀರಿಸುವವನು ನ್ಯಾಯವನ್ನೇ ನಡಿಸುವನಲ್ಲವೇ?" (ಆದಿಕಾಂಡ 18:25).

## ಆತನ ಸಂಕಲ್ಪದೊಂದಿಗೆ ಸಮಂಜಸತೆ (9:22-29)

**22ಆದರೆ ದೇವರು ತನ್ನ ಕೋಪವನ್ನು ತೋರಿಸಿ ತನ್ನ ಶಕ್ತಿಯನ್ನು ಪ್ರಸಿದ್ಧಿಪಡಿಸಬೇಕೆಂದಿದ್ದರೂ ಹಾಗೆ ಮಾಡದೆ ತನ್ನ ಕೋಪಕ್ಕೆ ಗುರಿಯಾದ ನಾಶನಪಾತ್ರರನ್ನು ಬಹು ಸೈರಣೆಯಿಂದ ಸೈರಿಸಿಕೊಂಡಿದ್ದಾನೆ. 23ಮತ್ತು ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧಮಾಡಿದ ಕರುಣಾಪಾತ್ರರಲ್ಲಿ ತನ್ನ ಮಹಿಮಾತಿಶಯವನ್ನು ತೋರ್ಪಡಿಸಿದ್ದಾನೆ. 24ಆತನು ಕರುಣಿಸಿದ ನಮ್ಮನ್ನು ಯೆಹೂದ್ಯರೊಳಗಿಂದ ಮಾತ್ರ ಕರೆಯದೆ ಹೋಶೇಯನ ಗ್ರಂಥದ ವಚನದಲ್ಲಿ ತಾನು ಸೂಚಿಸಿದಂತೆ ಅನ್ಯಜನರೊಳಗಿಂದ ಸಹ ಕರೆದನು. 25ಆ ವಚನವೇನಂದರೆ—**

**ನನ್ನ ಜನವಲ್ಲದ್ದನ್ನು ನನ್ನ ಜನವೆಂದೂ ನನಗೆ ಅಪ್ರಿಯವಾದವಳನ್ನು ಪ್ರಿಯ ಳೆಂದೂ ಹೇಳುವೆನು.**

**26ಮತ್ತು ಯಾವ ಸ್ಥಳದಲ್ಲಿ—ನೀವು ನನ್ನ ಜನರಲ್ಲವೆಂದು ಅವರಿಗೆ ಹೇಳಲ್ಪಟ್ಟಿತೋ**
**ಆ ಸ್ಥಳದಲ್ಲಿಯೇ ಅವರು ಜೀವವುಳ್ಳ ದೇವರ ಪುತ್ರರು ಎನಿಸಿಕೊಳ್ಳುವರು ಎಂಬುದು.**

**27ಇದಲ್ಲದೆ ಯೆಶಾಯನು ಇಸ್ರಾಯೇಲ್ ಜನರ ವಿಷಯದಲ್ಲಿ—ಕರ್ತನು ಈ ದೇಶದವರ ವಿಷಯದ ಪೂರ್ಣವಾಗಿಯೂ ತೀವ್ರವಾಗಿಯೂ ಲೆಕ್ಕವನ್ನು ತೀರಿಸುವನಾದದರಿಂದ ಇಸ್ರಾಯೇಲ್ಯರ ಸಂಖ್ಯೆಯು ಸಮುದ್ರದ ಉಸುಬಿನಂತೆ ಅಸಂಖ್ಯವಾಗಿದ್ದರೂ ಅವರಲ್ಲಿ ಒಂದು ಅಂಶ ಮಾತ್ರ ರಕ್ಷಣೆಹೊಂದುವದೆಂದು ಕೂಗಿ ಹೇಳುತ್ತಾನೆ. 28ಅದೇ ಅಭಿಪ್ರಾಯದಿಂದ ಯೆಶಾಯನು ಮತ್ತೊಂದು ವಚನದಲ್ಲಿ—**

**29ಸೇನಾಧೀಶ್ವರನಾದ ಕರ್ತನು ನಮಗೆ ಸಂತಾನ ವನ್ನು ಉಳಿಸದೆ ಹೋಗಿದ್ದರೆ**
**ಸೊದೋಮಿನ ಗತಿಯೇ ನಮಗಾಗುತ್ತಿತ್ತು, ಗೊಮೋರಿನ ದುರ್ದೆಶೆಯೇ ಸಂಭವಿಸು**

**ತ್ತಿತ್ತು ಎಂದು ಹೇಳುತ್ತಾನೆ.**

ದೇವರು ಕೆಲವರನ್ನು ಆರಿಸಿಕೊಳ್ಳುವದಕ್ಕೂ ಮಿಕ್ಕವರನ್ನು ತಿರಸ್ಕರಿಸುವದಕ್ಕೂ ಅಧಿಕಾರ ಹೊಂದಿದ್ದಾನೆಂಬುದನ್ನು ಸಾಭಿತುಪಡಿಸಿದ ಬಳಿಕ, ದೇವರು ಅವಿಶ್ವಾಸಿಗಳನ್ನು ತಿರಸ್ಕರಿಸಿ ವಿಶ್ವಾಸಿಗಳನ್ನು (ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ) ಆರಿಸಿಕೊಳ್ಳುವ ನಿರ್ದಿಷ್ಟವಾದ ಪ್ರಶ್ನೆಯ ಕಡೆಗೆ ಪೌಲನು ತಿರುಗುತ್ತಾನೆ. 22ನೇ ವಚನದಿಂದ ಆರಂಭಗೊಂಡು 29ನೇ ವಚನದ ವರೆಗೂ, ಪೌಲನು ದೇವರ ನ್ಯಾಯವಂತಿಕೆಯ ಬಗ್ಗೆ ಪುರಾವೆಗಳನ್ನು ಒದಗಿಸುತ್ತಾನೆ. ನಿರ್ದಿಷ್ಟವಾಗಿ, ದೇವರ ಆಯ್ಕೆಗಳು ನ್ಯಾಯವಾಗಿದ್ದವು ಯಾಕೆಂದರೆ ಅವುಗಳು ಆತನ ಸಂಕಲ್ಪದೊಂದಿಗೆ—ಈ ಮುಂಚೆ ಹಳೇ ಒಡಂಬಡಿಕೆಯ ಪ್ರವಾದಿಗಳ ಮೂಲಕ ಸಾರಲ್ಪಟ್ಟ ಒಂದು ಸಂಕಲ್ಪ—ಸಾಮಂಜಸ್ಯತೆಯಿಂದ ಇದ್ದವು ಎಂಬುದನ್ನು ಪೌಲನು ಒತ್ತಿ ಹೇಳಿದನು.

**ವಚನ 22.** ಗ್ರೀಕ್ ವಾಕ್ಯದಲ್ಲಿ 22ರಿಂದ 24 ವಚನಗಳು ಒಂದೇ ವಾಕ್ಯವೃಂದವಾಗಿರುತ್ತದೆ (ನೋಡಿರಿ KJV). ಗ್ರೀಕ್‌ನಲ್ಲಿ ಪದಗಳ ಜೋಡಣೆಯು ಸಂಕೀರ್ಣವಾಗಿರುತ್ತದೆ, ಗೊಂದಲಕರ ಸಹ ಆಗಿರುತ್ತದೆ; ಆದರೆ ಪೌಲನ ಮೂಲಭೂತ ಸಂದೇಶವಂತೂ ಸ್ಪಷ್ಟವಾಗಿರುತ್ತದೆ.

22ನೇ ವಚನವನ್ನು ಅರ್ಥಮಾಡಿಕೊಳ್ಳಬೇಕೆಂದರೆ, ಪ್ರಶ್ನೆಯನ್ನು ಎರಡು ಭಾಗವಾಗಿ ವಿಂಗಡಿಸಿದರೆ ಸಹಾಯಕವಾಗಬಹುದು. ಮೊದಲ ಭಾಗವು ಸೂಚಿಸುವದೇನೆಂದರೆ **ಆದರೆ ದೇವರು ತನ್ನ ಕೋಪವನ್ನು ತೋರಿಸಿ ತನ್ನ ಶಕ್ತಿಯನ್ನು ಪ್ರಸಿದ್ಧಿಪಡಿಸಬೇಕೆಂದಿದ್ದರೂ.** ಸನ್ನಿವೇಶದಲ್ಲಿ, ಈ ಮಾತುಗಳು ದೇವರು ಫರೋಹನಿಗೆ ಹೇಳಿದ ಸಂಗತಿಯನ್ನು ಸೂಚಿಸಬಹುದಾಗಿದೆ (9:17), ಆದರೆ ಅವುಗಳು ಸಾಮಾನ್ಯ ಸತ್ಯವನ್ನು ಸಹ ತಿಳಿಸುತ್ತವೆ. ಅಂತ್ಯದಲ್ಲಿ, ದೇವರ ಕೋಪಾಗ್ನಿಯು ಭಕ್ತಿಹೀನರ ಮೇಲೆ ಬೀಳುವಾಗ ಆತನ ಶಕ್ತಿಯು ತೋರ್ಪಡಿಸಲ್ಪಡುವದು (ನೋಡಿರಿ 1:18).

ಎರಡನೆಯದಾಗಿ, ನ್ಯಾಯತೀರ್ಪು ಬರುತ್ತಲಿದೆಯಾದರೂ, ದೇವರು **ಹಾಗೆ ಮಾಡದೆ ತನ್ನ ಕೋಪಕ್ಕೆ ಗುರಿಯಾದ ನಾಶನಪಾತ್ರರನ್ನು ಬಹು ಸೈರಣೆಯಿಂದ ಸೈರಿಸಿಕೊಂಡಿದ್ದಾನೆ.**[27] ಪೌಲನು ಇಲ್ಲಿ ಕುಂಬಾರ ಹಾಗೂ ಮಣ್ಣಿನ ಸಾದೃಶ್ಯವನ್ನು ಮುಂದುವರೆಸುತ್ತಿದ್ದಾನೆ, ಆದರೆ ಒಂದು ಬೇರೆಯಾದ ಅನ್ವಯಿಸುವಿಕೆಯನ್ನು ಸೇರಿಸಿರುತ್ತಾನೆ. ದೇವರು "ಬಹು ಸೈರಣೆಯಿಂದ ಸೈರಿಸಿಕೊಂಡ" ಒಂದು "ನಾಶನಪಾತ್ರ"ಕ್ಕೆ ಉತ್ತಮ ಉದಾಹರಣೆಯೆಂದರೆ ಫರೋಹನು. ಫರೋಹನು ತನ್ನ ಮನಸ್ಸನ್ನು ಬದಲಾಯಿಸಿಕೊಂಡು ಇಸ್ರಾಯೇಲ್ಯರನ್ನು ಹೋಗಲು ಬಿಡುವಂತೆ ಕರ್ತನು ಆತನಿಗೆ ಅವಕಾಶದ ಮೇಲೆ ಅವಕಾಶವನ್ನು ಕೊಡುತ್ತಲೇ ಬಂದನು. ಇನ್ನೊಂದು ಉದಾಹರಣೆಯೆಂದರೆ ಅರಣ್ಯದಲ್ಲಿದ್ದ ವೇಳೆ ಇಸ್ರಾಯೇಲ್ಯರು. ದೇವರು "ಬಹು ಸೈರಣೆಯಿಂದ [ಅವರನ್ನು] ಸೈರಿಸಿ" ಕೊಂಡಿಲ್ಲವಾಗಿದ್ದರೆ, ಅವರು ಒಂದು ಜನಾಂಗವಾಗಿಯೇ ಸಂಪೂರ್ಣ ಅಳಿಸಿ ಹಾಕಲ್ಪಟ್ಟಿರುತ್ತಿದ್ದರು. ಈ ಸಾಮಾನ್ಯ ಸೂತ್ರವನ್ನು ಹಳೇ ಒಡಂಬಡಿಕೆಯ ಕಾಲದ ಅನ್ಯಜನರಿಗೆ ಸಹ ಅನ್ವಯಿಸಬಹುದು—ಮತ್ತು, ಹೌದು, ಅದು ನಮಗೆ ಸಹ ಅನ್ವಯಿಸಲ್ಪಡಬಹುದು. ದೇವರು ಈಗಲೂ *ನಿರಂತರವಾಗಿ* "ನಾಶನ ಪಾತ್ರರನ್ನು ಬಹು ಸೈರಣೆಯಿಂದ ಸೈರಿಸಿಕೊಂಡಿದ್ದಾನೆ." ಏಕೆ? ಏಕೆಂದರೆ ಆತನು ನಮಗೆ

ಪಶ್ಚಾತಾಪ ಪಡುವದಕ್ಕೆ ಅವಕಾಶವನ್ನು ಕೊಡುತ್ತಿದ್ದಾನೆ (ನೋಡಿರಿ 2:4). ಪೇತ್ರನು ಹೀಗೆ ಬರೆದನು, "ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9). ದೇವರು ತನ್ನ ಕೋಪಾಗ್ನಿಯನ್ನು ಸುರಿಸುವದಕ್ಕಿಂತಲೂ ಕರುಣೆಯನ್ನೇ ಅನುಗ್ರಹಿಸುವನು.

ಇದೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ, 22ನೇ ವಚನದ ಈ ಪ್ರಶ್ನೆಯನ್ನು ನಾವು ಆರಂಭಗೊಳಿಸಿದ ಪ್ರಶ್ನೆಯೊಂದಿಗೆ ಜೋಡಿಸೋಣ. 14ನೇ ವಚನದಲ್ಲಿ, ಪ್ರಶ್ನೆಯು "ದೇವರು ನ್ಯಾಯವಂತನೋ?" (ಅಥವಾ "ದೇವರು ಅನ್ಯಾಯಸ್ಥನೋ?"; NCV) ಎಂಬುದಾಗಿತ್ತು. 22ನೇ ವಚನದಲ್ಲಿ, ಪೌಲನು, ತತ್ಪರಿಣಾಮವಾಗಿ ಹೀಗೆ ಕೇಳುತ್ತಾನೆ, "ದೇವರು ಕಳೆದುಹೋದವರ ವಿಷಯದಲ್ಲಿ ದೀರ್ಘಶಾಂತಿಯಿಂದಿದ್ದು, ಅವರಿಗೆ ಪಶ್ಚಾತಾಪ ಪಡುವದಕ್ಕೆ ಅವಕಾಶವನ್ನು ಕೊಡುತ್ತಿರುವ ವಿಷಯವೇನು?" 22ನೇ ವಚನದ ಸೂಚ್ಯಾರ್ಥದ ಪ್ರಶ್ನೆ ಹಾಗೂ ಉತ್ತರಗಳೇನೆಂದರೆ "ದೇವರು ಎಷ್ಟು ನ್ಯಾಯವಾಗಿದ್ದಾನೆಂಬುದನ್ನು ಇದು ತೋರ್ಪಡಿಸುವದಿಲ್ಲವೋ?" ಮತ್ತು "ಖಂಡಿತವಾಗಿಯೂ ತೋರ್ಪಡಿಸುತ್ತದೆ!" ಎಂಬುವುಗಳೇ.

**ವಚನಗಳು 23, 24.** ಬಳಿಕ ಪೌಲನು ಮುಂದುವರೆಸಿ, **ಕರುಣಾಪಾತ್ರರಲ್ಲಿ ತನ್ನ ಮಹಿಮಾತಿಶಯವನ್ನು** [ಕಳೆದುಹೋದವರನ್ನು ಪಶ್ಚಾತಾಪಕ್ಕೆ ನಡಿಸುವಂತಾಗಲು ದೇವರು ಅವರ ವಿಷಯದಲ್ಲಿ ದೀರ್ಘಶಾಂತಿಯಿಂದಿದ್ದನು] **ತೋರ್ಪಡಿಸಿದ್ದಾನೆ.** ಈ ಬಣ್ಣನೆಯು ನಮಗೆ ಇಸ್ರಾಯೇಲ್ಯರು ಐಗುಪ್ತ್ಯದಿಂದ ಹೊರಡುವಿಕೆ ಮತ್ತು ಸಿನಾಯಿ ಪರ್ವತದಲ್ಲಿ ದೇವರು ಅವರನ್ನು ಕೃಪೆಯಿಂದಾಗಿ ನಾಶಗೊಳಿಸದೆ ಉಳಿಸಿದ್ದನ್ನು ನಮಗೆ ಜ್ಞಾಪಿಸುತ್ತದೆ (9:15, 18a). ಆ ಸಂದರ್ಭದಲ್ಲಿ ದೇವರು ಮಾಡಿದ್ದೆಲ್ಲವೂ ಆತನ ಕರುಣೆಯು ಎಷ್ಟು ಸಮೃದ್ಧ ("ಐಶ್ವರ್ಯಭರಿತ") ಆಗಿರಬಲ್ಲದೆಂಬುದನ್ನು ತೋರ್ಪಡಿಸಿತು.

ಹೇಗೂ, ಪೌಲನು ಈಗ ಫರೋಹ ಹಾಗೂ ಇಸ್ರಾಯೇಲ್ಯರ ದೃಷ್ಟಾಂತವನ್ನು ಬಿಟ್ಟು ಮುಂದಕ್ಕೆ ಸಾಗುವದಕ್ಕೆ ಮತ್ತು ಚರ್ಚೆಯಲ್ಲಿರುವ ವಿಷಯದಲ್ಲಿ ಅನ್ವಯಿಸುವಿಕೆಯನ್ನು ಮಾಡುವದಕ್ಕೆ ಸಿದ್ಧನಾಗಿದ್ದನು. "ಕರುಣಾಪಾತ್ರರನ್ನು" ಎಂದು ಸೂಚಿಸಿದ ಬಳಿಕ, ಅಪೊಸ್ತಲನು ಹೀಗೆ ಸೇರಿಸಿ ಹೇಳುತ್ತಾನೆ, **ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧಮಾಡಿದ ಕರುಣಾಪಾತ್ರರಲ್ಲಿ**. "ಮುಂದಾಗಿ ಸಿದ್ಧಮಾಡಿದ" ಮತ್ತು "ಕರೆದ" ಎಂಬವುಗಳು ದೇವರು ಮುಂದಾಗಿ ತಿಳಿದಿದ್ದ ಅಥವಾ ನೇಮಿಸಿದ್ದವರನ್ನು ಸೂಚಿಸಿ ಹೇಳುವ ವಿಧವಾಗಿರುತ್ತವೆ (8:29, 30ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ)—ಅಂದರೆ, ದೇವರ ಕೃಪೆಯಿಂದ ರಕ್ಷಿಸಲ್ಪಟ್ಟವರನ್ನು ಸೂಚಿಸುತ್ತವೆ.

"ನಮ್ಮನ್ನು . . . ಸಹ ಕರೆದನು" ಎಂದು ಹೇಳಿದ ಬಳಿಕ, ಪೌಲನು ವಿವಾದದ ಹೃದಯ ಭಾಗದೊಳಕ್ಕೆ ಪ್ರವೇಶಿಸಿ ಹೀಗೆ ಸೇರಿಸಿ ಹೇಳುತ್ತಾನೆ, **ಆತನು ಕರುಣಿಸಿದ ನಮ್ಮನ್ನು ಯೆಹೂದ್ಯರೊಳಗಿಂದ ಮಾತ್ರ ಕರೆಯದೆ . . . ಅನ್ಯಜನರೊಳಗಿಂದ ಸಹ ಕರೆದನು.** ಯೆಹೂದ್ಯರಿಗಾದರೋ, ದೇವರು ಅನೇಕ ಯೆಹೂದ್ಯರನ್ನು ತಿರಸ್ಕರಿಸಿದ್ದನೆಂಬುದು ಅವರನ್ನು ವ್ಯಾಕುಲಗೊಳಿಸುವದಕ್ಕೆ ಸಾಕಾಗಿತ್ತು. ಅದೇ ವೇಳೆಯಲ್ಲಿ, ಕರ್ತನು ಅನೇಕ ಅನ್ಯಜನರನ್ನು ಅಂಗೀಕರಿಸಿಕೊಂಡಿದ್ದನೆಂಬುದು ಅವರಿಗೆ ಮತ್ತಷ್ಟು ಚಿತ್ತಭ್ರಮಣೆಯುಂಟು

ಮಾಡಿತ್ತು. ವಾಸ್ತವಾಂಶವೆಂದರೆ, ಆತನು ಯೆಹೂದ್ಯರಿಗಿಂತಲೂ ಅನ್ಯಜನರನ್ನೇ ಅಧಿಕವಾಗಿ ಅಂಗೀಕರಿಸಿಕೊಂಡಿದ್ದನು.[28] ಶತಮಾನಗಳ ಹಿಂದೆ ದೇವರು ಯೆಹೂದಿ ಜನಾಂಗದೊಂದಿಗೆ ಮಾಡಿದ್ದ ಒಡಂಬಡಿಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವದಾದರೆ, ಇದು ನ್ಯಾಯವಾದದ್ದೋ?

**ವಚನಗಳ 25, 26.** ಸಂಗತಿಗಳು ಹೀಗೆಯೇ ಸಂಭವಿಸುವವೆಂಬುದನ್ನು ಮುಂಚಿತವಾಗಿಯೇ ಪ್ರವಾದಿಗಳು ತಿಳಿಸಿದ್ದ ರೆಂಬುದು ಪೌಲನ ಉತ್ತರವಾಗಿತ್ತು. ಪೌಲನು ಮೊದಲು ಅದು ಅನ್ಯಜನರರನ್ನು ದೇವರ ಯೋಜನೆಗಳಲ್ಲಿ ಮತ್ತು ಸಂಕಲ್ಪಗಳಲ್ಲಿ ಸೇರಿಸಿಕೊಳ್ಳಬೇಕೆಂಬದರೊಂದಿಗೆ ಸಾಮಂಜಸ್ಯತೆಯಲ್ಲಿತ್ತೆಂಬುದನ್ನು ಸಾಭಿತುಗೊಳಿಸಲು ಹೋಶೇಯನ ಪುಸ್ತಕದಿಂದ ಎರಡು ವಾಕ್ಯಭಾಗಗಳನ್ನು ಉಲ್ಲೇಖಿಸುತ್ತಾನೆ:

> **ಆ ವಚನವೇನಂದರೆ–**
> **ನನ್ನ ಜನವಲ್ಲದ್ದನ್ನು ನನ್ನ ಜನವೆಂದೂ**
> **ನನಗೆ ಅಪ್ರಿಯಳಾದವಳನ್ನು ಪ್ರಿಯ ಳೆಂದೂ ಹೇಳುವೆನು.**
> **ಮತ್ತು ಯಾವ ಸ್ಥಳದಲ್ಲಿ–ನೀವು ನನ್ನ ಜನರಲ್ಲವೆಂದು ಅವರಿಗೆ ಹೇಳಲ್ಪಟ್ಟಿತೋ**
> **ಆ ಸ್ಥಳದಲ್ಲಿಯೇ ಅವರು ಜೀವವುಳ್ಳ ದೇವರ ಪುತ್ರರು ಎನಿಸಿಕೊಳ್ಳುವರು ಎಂಬುದು.**
> (ನೋಡಿರಿ ಹೋಶೇಯ 2:23; 1:10).

ಮೂಲ ಸನ್ನಿವೇಶದಲ್ಲಿ, ಹೋಶೇಯನು ಅನ್ಯಜನರ ಬಗ್ಗೆ ಮಾತಾಡಲಿಲ್ಲ, ಆದರೆ ಹಿಂಜರಿದು ಹೋಗುತ್ತಿದ್ದ ಯೆಹೂದ್ಯರನ್ನು ಕುರಿತು ಮಾತಾಡಿದನು. ಪ್ರೇರಣೆಯ ಮೂಲಕ, ಪೌಲನು ಒಂದು *ಸಾಮಾನ್ಯ ಸೂತ್ರ*ವನ್ನು ಸ್ಥಾಪಿಸುವದಕ್ಕಾಗಿ ಈ ವಾಕ್ಯಭಾಗವನ್ನು ಉಪಯೋಗಿಸುತ್ತಿದ್ದಾನೆ: ದೇವರ ಜನ*ರಲ್ಲದವರು* ದೇವರ ಜನರು *ಆಗುವುದು* ಸಾಧ್ಯವಿದೆ ಎಂಬುದೆ. ಆದುದರಿಂದ ಅದು ದೇವರ ಸಂಕಲ್ಪದೊಂದಿಗೆ ಸಾಮಂಜಸ್ಯತೆಯಲ್ಲಿತ್ತು, ಏನೆಂದರೆ ದೇವಜನರಾಗಿದ್ದಿಲ್ಲದ, ಅನ್ಯಜನರು (ನೋಡಿರಿ ಎಫೆಸ 2:11, 12), ದೇವರ ಜನ*ರಾಗಬೇಕು* (ಕ್ರೈಸ್ತರು) ಎಂಬುದೇ.

**ವಚನಗಳು 27, 28.** ದೇವರು ಇಸ್ರಾಯೇಲ್ ಜನಾಂಗದ ಬಹುಪಾಲನ್ನು ತಿರಸ್ಕರಿಸಿ (ನೋಡಿರಿ 9:6) ಕೇವಲ ಬೆರಳಣಿಕೆಯಷ್ಟು ಇಸ್ರಾಯೇಲ್ಯರನ್ನು (ಯೇಸುವಿನಲ್ಲಿ ನಂಬಿಕೆಯಿಟ್ಟವರನ್ನು) ಮಾತ್ರವೇ ಅಂಗೀಕರಿಸಿಕೊಂಡಿದ್ದನೆಂಬ ವಾಸ್ತವಾಂಶದ ವಿಷಯವೇನು? ಇದು ಹೀಗೆಯೇ ಸಂಭವಿಸುವದೆಂದು ಪ್ರವಾದಿಗಳು ಮುಂತಿಳಿಸಿದ್ದರೆಂದು ಪೌಲನು ಹೇಳುತ್ತಾನೆ. ಈ ಸಾರಿ ಆತನು ಯೆಶಾಯನ ಗ್ರಂಥದಿಂದ ಉಲ್ಲೇಖಿಸುತ್ತಾನೆ:

> **ಇದಲ್ಲದೆ ಯೆಶಾಯನು ಇಸ್ರಾಯೇಲ್ ಜನರ ವಿಷಯದಲ್ಲಿ–ಕರ್ತನು ಈ ದೇಶದವರ ವಿಷಯ ಪೂರ್ಣವಾಗಿಯೂ ತೀವ್ರವಾಗಿಯೂ ಲೆಕ್ಕವನ್ನು ತೀರಿಸುವನಾದದರಿಂದ ಇಸ್ರಾಯೇಲ್ಯರ ಸಂಖ್ಯೆಯು ಸಮುದ್ರದ ಉಸುಬಿನಂತೆ ಅಸಂಖ್ಯವಾಗಿದ್ದರೂ ಅವರಲ್ಲಿ ಒಂದು ಅಂಶ ಮಾತ್ರ ರಕ್ಷಣೆಹೊಂದುವದೆಂದು ಕೂಗಿ ಹೇಳುತ್ತಾನೆ** (ನೋಡಿರಿ ಆದಿಕಾಂಡ 22:17; ಯೆಶಾಯ 10:22, 23[29]).

ಈ ವಾಕ್ಯಭಾಗದಲ್ಲಿ ಪ್ರಮುಖ ಪದವೆಂದರೆ "ಅವರಲ್ಲಿ ಒಂದು ಅಂಶ" (ὑπόλειμμα, *hupoleimma*) ಎಂಬುದು, ಅದು ಒಂದು "ಚಿಕ್ಕ ಸಂಖ್ಯೆ"[30] ಯನ್ನು ಸೂಚಿಸುತ್ತದೆ.

ಯೆಶಾಯ 10:22, 23ರ ಸನ್ನಿವೇಶವು ಸೂಚಿಸುವದೇನೆಂದರೆ ಪ್ರವಾದಿಯು ಸೆರೆವಾಸದಿಂದ ಇಸ್ರಾಯೇಲ್ಯರಲ್ಲಿ ಒಂದು ಅಂಶ ಜನರು ಮಾತ್ರವೇ ಕಾನಾನಿಗೆ ಹಿಂದಿರುಗುವರೆಂದು ಮಾತಾಡುತ್ತಿದ್ದಾನೆ ಎಂಬುದೆ. ಪುನಃ, ಪೌಲನು ಇಲ್ಲಿ ಪ್ರೇರಿತಗೊಂಡವನಾಗಿ ಅನ್ವಯಿಸುವಿಕೆಯನ್ನು ಮಾಡುತ್ತಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿ, ಯೆಹೂದದ ಒಂದು ಅಂಶ ಜನ ಮಾತ್ರವೇ ಸೆರೆವಾಸದಿಂದ ಕಾಪಾಡಲ್ಪಟ್ಟರು. ಆದ್ದರಿಂದ ಹೊಸ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರೊಳಗಿಂದ ಒಂದು ಅಂಶ ಜನ ರಕ್ಷಿಸಲ್ಪಡುವರೆಂಬುದು ಆಶ್ಚರ್ಯವೇನಿಸಕೂಡದು.

"ಅವರಲ್ಲಿ ಒಂದು ಅಂಶ" ಎಂಬ ಸಂದೇಶವು ಇಮ್ಮಡಿಯಾದದ್ದು: ಮೊದಲನೆಯದಾಗಿ ಒಂದು ಅಂಶ ಜನ *ಮಾತ್ರವೇ* ರಕ್ಷಿಸಲ್ಪಡುವರೆಂಬ *ಕೆಟ್ಟ* ವಾರ್ತೆ. ಎರಡನೆಯದಾಗಿ ಒಂದು ಅಂಶ ಜನರು ರಕ್ಷಿಸಲ್ಪಡು*ವರೆಂಬ ಸಂತೋಷ*ದ ವಾರ್ತೆ (ನೋಡಿರಿ 11:5). ಇಸ್ರಾಯೇಲ್ಯರಲ್ಲಿ ಎಲ್ಲರೂ ತಿರಸ್ಕರಿಸಲ್ಪಡುತ್ತಿರಲಿಲ್ಲ.

**ವಚನ 29.** ಪೌಲನು ಸಂದೇಶದ ನಂತರ ಅರ್ಧಭಾಗವನ್ನು ಪುನಃ ಯೆಶಾಯನ ಗ್ರಂಥದಿಂದ ಉಲ್ಲೇಖಿಸುವ ಮೂಲಕ ವ್ಯಕ್ತಪಡಿಸುತ್ತಾನೆ:

> **ಅದೇ ಅಭಿಪ್ರಾಯದಿಂದ ಯೆಶಾಯನು ಮತ್ತೊಂದು ವಚನದಲ್ಲಿ—**
> **ಸೇನಾಧೀಶ್ವರನಾದ ಕರ್ತನು ನಮಗೆ ಸಂತಾನ ವನ್ನು ಉಳಿಸದೆ ಹೋಗಿದ್ದರೆ**
> **ಸೊದೋಮಿನ ಗತಿಯೇ ನಮಗಾಗುತ್ತಿತ್ತು, ಗೊಮೋರದ ದುರ್ದಶೆಯೇ ಸಂಭವಿಸು ತ್ತಿತ್ತು ಎಂದು ಹೇಳುತ್ತಾನೆ** (ನೋಡಿರಿ ಯೆಶಾಯ 1:9).

ಯೆಶಾಯನ ವಾಕ್ಯಭಾಗವು ದೇಶದ ಮೇಲೆ ಅಶ್ಶೂರ್ಯರು ದಾಳಿ ಮಾಡಿದಾಗ ಸಂದರ್ಭದಲ್ಲಿ ಯೆಹೂದ ಹಾಗೂ ಯೆರೂಸಲೇಮಿಗೆ ಸಂಭವಿಸಿದ ವಿನಾಶಕರ ಸಮಯವನ್ನು ಸೂಚಿಸುತ್ತದೆ. ಇದಕ್ಕೆ ಮುಂಚಿನ ಕಾಲದಲ್ಲಿ, ದೇವರು ಸೊದೋಮ ಹಾಗೂ ಗೊಮೋರ ಪಟ್ಟಣಗಳನ್ನು ಭೂಮಿಯ ಮೇಲಿನಿಂದಲೇ ಯಾವ ರೀತಿಯಲ್ಲಿ ಸಂಪೂರ್ಣ ಅಳಿಸಿ ಹಾಕಿದ್ದನೆಂದರೆ (ಆದಿಕಾಂಡ 19:24, 25)—ಆ ಪಟ್ಟಣಗಳು ಯಾವ ಸ್ಥಳದಲ್ಲಿದ್ದವೆಂಬುದನ್ನು ಸಹ ನಮ್ಮಿಂದ ನಿಖರವಾಗಿ ಗುರುತಿಸುವದಕ್ಕೆ ಸಾಧ್ಯವಿಲ್ಲದ್ದಾಗಿದೆ. ಅಶ್ಶೂರ್ಯರು ದಾಳಿ ಮಾಡಿದ ವೇಳೆಯಲ್ಲಿ ಯೆಹೂದ್ಯರಿಗೆ ಆ ರೀತಿಯ ನಾಶನವು ಸಂಭವಿಸಿರಲಿಲ್ಲ. ಬದಲಾಗಿ, ಒಂದು ಸಂತಾನವು ಬೆಳೆಯುವಂತಾಗಲು ಅವರಲ್ಲಿ ಒಂದು ಅಂಶ ಉಳಿಸಲ್ಪಟ್ಟಿದ್ದರು. ಅದೇ ರೀತಿಯಲ್ಲಿಯೇ, ಪೌಲನ ದಿನದಲ್ಲಿ, ಇಸ್ರಾಯೇಲ್‌ನಲ್ಲಿ ದೇವರು ಆಗಲೂ ತನ್ನ ಒಂದು ಅಂಶ ಜನವನ್ನು ಹೊಂದಿದ್ದನು—ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಂಡಿದ್ದ ಪೌಲನಂತಹ ಜನರು (ನೋಡಿರಿ 11:1). ದೇವರು ಈ ಜನರ ಮೂಲಕ ತನ್ನ ಸಂಕಲ್ಪವನ್ನು ನೆರವೇರಿಸಬಲ್ಲನು ಮತ್ತು ನೆರವೇರಿಸುವನು.

ದೇವರು ಶತಮಾನಗಳಿಂದಲೂ ಇಸ್ರಾಯೇಲ್ಯರ ಸಂಗಡ ಕಾರ್ಯ ಮಾಡಿದ್ದನು. ಹಾಗಾದರೆ, ಏಕೆ, ದೇವರ ಸಂಕಲ್ಪದಲ್ಲಿ ಇಸ್ರಾಯೇಲ್ಯರೊಳಗಿಂದ ಕೇವಲ ಒಂದು ಅಂಶ ಜನ ಮಾತ್ರವೇ ಉಳಿದರು? ಪೌಲನು ಆ ಪ್ರಶ್ನೆಗೆ ತನ್ನ ಪತ್ರಿಕೆಯ ಮುಂದಿನ ವಿಭಾಗದಲ್ಲಿ ಉತ್ತರಿಸುತ್ತಾನೆ.

# ರಕ್ಷಣೆಯು ನಂಬಿಕೆಯ ಮೂಲಕವೇ, ಹೊರತು ಕ್ರಿಯೆಗಳಿಂದಲ್ಲ (9:30-33)

**[30]ಹಾಗಾದರೆ ಏನು ಹೇಳೋಣ? ನೀತಿಯನ್ನು ಹೊಂದುವದಕ್ಕೆ ಪ್ರಯತ್ನಮಾಡದ ಅನ್ಯಜನರಿಗೆ ನೀತಿಯು ಅಂದರೆ ನಂಬಿಕೆಯಿಂದುಂಟಾಗುವ ನೀತಿಯು ದೊರಕಿತು. [31]ಆದರೆ ಇಸ್ರಾಯೇಲ್ಯರು ನೀತಿಯನ್ನು ದೊರಕಿಸುವ ಧರ್ಮವನ್ನು ಹಿಡಿಯಬೇಕೆಂದು ಪ್ರಯತ್ನಿಸಿದರೂ ಆ ಧರ್ಮವನ್ನು ಹಿಡಿಯಲಾರದೆ ಹೋದರೆಂದು ಹೇಳಬೇಕು. [32]ಅದಕ್ಕೆ ಕಾರಣವೇನು? ಅವರು ನಂಬಿಕೆಯನ್ನು ಆಧಾರಮಾಡಿಕೊಳ್ಳದೆ ನೇಮನಿಷ್ಠೆಗಳನ್ನು ಆಧಾರಮಾಡಿಕೊಂಡದ್ದೇ ಕಾರಣ.**

**[33]ಇಗೋ, ಚೀಯೋನಿನಲ್ಲಿ ಎಡವುವ ಕಲ್ಲನ್ನೂ ಮುಗ್ಗರಿಸುವ ಬಂಡೆಯನ್ನೂ ಇಡುತ್ತೇನೆಂತಲೂ**
**ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದಿಲ್ಲವೆಂತಲೂ**
**ಶಾಸ್ತ್ರದಲ್ಲಿ ಬರೆದದೆಯಲ್ಲಾ. ಆ ಎಡುವುವ ಕಲ್ಲಿಗೆ ಅವರು ಎಡವಿಬಿದ್ದರು.**

ರೋಮಾ 9:30–33 ವಚನಗಳು ದೇವರು ಕೆಲವು ಅನ್ಯಜನರನ್ನು ಅಂಗೀಕರಿಸಿಕೊಂಡು ಬಹುಪಾಲು ಯೆಹೂದ್ಯರನ್ನು ತಿರಸ್ಕರಿಸಿದ್ದಕ್ಕೆ ಯಾರು ಕಾರಣರು ಎಂಬ ಪ್ರಶ್ನೆಗೆ ಉತ್ತರಿಸುತ್ತದೆ. 9:14–29ರಲ್ಲಿ, ದೇವರು ನ್ಯಾಯವಾಗಿಯೇ ಇದ್ದಾನೆ ಎಂಬುದನ್ನು ಪೌಲನು ಸಾಭಿತುಗೊಳಿಸಿದನು. ಅದು ಸತ್ಯವಾದ್ದರಿಂದ, ಯೆಹೂದ್ಯರ ಸಂದಿಗ್ಧತೆಗೆ ಕರ್ತನು ಜವಾಬ್ದಾರನಾಗಿರಲಿಲ್ಲ. ಹಾಗಾದರೆ, ಅದಕ್ಕೆ ಯಾರು ಹೊಣೆಗಾರರು? ಯೆಹೂದ್ಯರು ತಾವೆಂದು ಒಪ್ಪಿಕೊಳ್ಳುವದನ್ನು ಸ್ವಲ್ಪವೂ ಇಷ್ಟಪಟ್ಟಿರಲಾರರು, ಆದರೆ ಅವರು ತಮ್ಮನ್ನೇ ಹೊರತು ಬೇರೆ ಯಾರನ್ನೂ ಹೊಣೆಗಾರರನ್ನಾಗಿ ಮಾಡುವದಕ್ಕೆ ಸಾಧ್ಯವಿರಲಿಲ್ಲ.

30ನೇ ವಚನದಲ್ಲಿ, ಪೌಲನು ತನ್ನ ಗಮನವನ್ನು ದೇವರ ಸಾರ್ವಭೌಮತೆಯಿಂದ ತೊಲಗಿಸಿ ಮಾನವನ ಹೊಣೆಗಾರಿಕೆಯ ಕಡೆಗೆ ತಿರುಗಿಸಿದ್ದನು. ಈ ಮುಂಚೆ ಗಮನಿಸಿರುವ ಹಾಗೆಯೇ, ಪೌಲನು ಎರಡು ಸಿದ್ಧಾಂತಗಳ ನಡುವೆ ಸಂಧಾನಗೊಳಿಸುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ, ಆದರೆ ಎರಡನ್ನೂ ದೃಢವಾಗಿ ನಂಬಿದ್ದನು. 9:30–10:21ರಲ್ಲಿ, ಆತನ ಮುಖ್ಯ ಒತ್ತು ಮಾನವನ ಹೊಣೆಗಾರಿಕೆಯ ಮೇಲಾಗಿತ್ತು. ಆತನು *ಏಕೆ* ಬಹುಪಾಲು ಯೆಹೂದ್ಯರು ದೇವರಿಂದ ತಿರಸ್ಕರಿಸಲ್ಪಟ್ಟಿದ್ದಾರೆಂಬುದನ್ನು ಚರ್ಚಿಸುತ್ತಾನೆ.

**ವಚನ 30.** ಪೌಲನು ಹೀಗೆ ಆರಂಭಿಸುತ್ತಾನೆ, **ಹಾಗಾದರೆ ಏನು ಹೇಳೋಣ?** ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು "ಯೆಹೂದ್ಯರ ತಿರಸ್ಕಾರದ ವಿಷಯವಾಗಿ ನಾವು ಹೆಚ್ಚೇನನ್ನು ಹೇಳಬೇಕು?" ಎಂದು ಕೇಳುತ್ತಿದ್ದಾನೆ. ಪೌಲನು ಅದರ ಬಗ್ಗೆ ಏನು ಹೇಳಿ*ದನು*? ಅನ್ಯಜನರು ಯೇಸುವಿನಲ್ಲಿ ನಂಬಿಕೆಯಿಟ್ಟದ್ದರಿಂದ ಅಂಗೀಕರಿಸಲ್ಪಟ್ಟರು ಎಂಬುದನ್ನು ಆತನು ಒತ್ತಿ ಹೇಳಿದನು. ಆತನು ಹೇಳಿದ್ದೇನೆಂದರೆ **ನೀತಿಯನ್ನು ಹೊಂದುವದಕ್ಕೆ ಪ್ರಯತ್ನಮಾಡದ ಅನ್ಯಜನರಿಗೆ ನೀತಿಯು ಅಂದರೆ ನಂಬಿಕೆಯಿಂದುಂಟಾಗುವ ನೀತಿಯು ದೊರಕಿತು.**

ಈ ಸನ್ನಿವೇಶದಲ್ಲಿ, "ನೀತಿಯು" ಎಂಬುದು ದೇವರಿಂದ ನೀತಿವಂತರೆಂದು

ಎಣಿಸಲ್ಪಡುವಿಕೆಯನ್ನು ಸೂಚಿಸುತ್ತದೆ. ಅದು "ನಂಬಿಕೆಯಿಂದುಂಟಾಗುವ ನೀತಿಯು"—ನಂಬಿಕೆಯ ಆಧಾರದಲ್ಲಿ ದೇವರ ಸಂಗಡ ಸರಿಯಾದ ಸಂಬಂಧದಲ್ಲಿರುವದು—ಆಗಿದೆ. ಪೌಲನು ಇಲ್ಲಿ ರೋಮಾಪುರದವರಿಗೆ ಪತ್ರಿಕೆಯ ಪ್ರಮುಖ ಪ್ರಬಂಧ ವಿಷಯವನ್ನು ಮರುಮಂಡನೆ ಮಾಡುತ್ತಾನೆ: ದೇವರು ನಮ್ಮನ್ನು ನಮ್ಮ ನಂಬಿಕೆಯ ಕಾರಣದಿಂದ ನೀತಿವಂತರೆಂದು ಎಣಿಸುತ್ತಾನೆ, ಹೊರತು ನಮ್ಮ ಕ್ರಿಯೆಗಳ ಕಾರಣದಿಂದಲ್ಲ. 9:1–29ರಲ್ಲಿ, ದೇವರು ತಾನು ಇಷ್ಟಪಡುವ ಯಾವನನ್ನಾದರೂ ಆರಿಸಿಕೊಳ್ಳುವ ಅಧಿಕಾರ ಹೊಂದಿದ್ದಾನೆಂಬುದನ್ನು ಪೌಲನು ಸಾಬಿತುಪಡಿಸಿದ್ದನು. ಈಗ ಆತನು ತನ್ನ ವಾಚಕರಿಗೆ ದೇವರು ವಿಶ್ವಾಸಿಗಳನ್ನು—ಯೇಸು ಕ್ರಿಸ್ತನಲ್ಲಿ *ವಿಶ್ವಾಸಿಗಳನ್ನು*—ಅಂಗೀಕರಿಸಿಕೊಳ್ಳುವ ಆಯ್ಕೆಯನ್ನು ಮಾಡಿದ್ದರ ಬಗ್ಗೆ ಜ್ಞಾಪಿಸುತ್ತಾನೆ.

ಅನ್ಯಜನರು ದೇವರ ನೀತಿಯನ್ನು "ಹೊಂದುವದಕ್ಕೆ ಪ್ರಯತ್ನ" ವನ್ನು ಮಾಡಿರಲಿಲ್ಲ. "ಹೊಂದುವದಕ್ಕೆ ಪ್ರಯತ್ನ" ಎಂಬುದರ ಗ್ರೀಕ್‌ನ ಅನುವಾದಿತ (διώκω, *diōkō*) ಪದವು "ತೀವ್ರಾಸಕ್ತಿಯಿಂದ ಪ್ರಯತ್ನಿಸುವದು" ಎಂದು ಸೂಚಿಸುತ್ತದೆ.[32] ಅನ್ಯಜನರು ದೇವರ ಸಂಗಡ ಸರಿಯಾದ ಸಂಬಂಧದಲ್ಲಿರುವದಕ್ಕೆ "ತೀವ್ರಾಸಕ್ತಿಯಿಂದ ಪ್ರಯತ್ನ" ಮಾಡಲಿಲ್ಲ ಎಂದು ಹೇಳಿದರೆ ಅದೊಂದು ನ್ಯೂನೋಕ್ತಿ ಆಗುತ್ತದೆ. ಕೆಲವರನ್ನು ಹೊರತುಪಡಿಸಿದರೆ, ಒಟ್ಟಾರೆಯಾಗಿ ಅನ್ಯಜನರು ನೀತಿಗೆಟ್ಟವರು, ಸ್ವಾರ್ಥಚಿಂತೆಯುಳ್ಳ ವಿಗ್ರಹಾರಾಧಕರು ಆಗಿದ್ದರು (1:18-32). ಆತ್ಮೀಕ ಸಂಗತಿಗಳಲ್ಲಿ ಅತಿ ಕಡಿಮೆಯಾದ ಆಸಕ್ತಿ ಹೊಂದಿದ್ದ, ಅನ್ಯಜನರು ಹೇಗೆ ದೇವರ ಸಂಗಡ ಸರಿಯಾದ ಸಂಬಂಧವನ್ನು ಸಾಧಿಸಿದರು? ಸುವಾರ್ತೆಯನ್ನು ಆಲಿಸಿದಾಗ, ಆ ಅನ್ಯಜನರು ತಮ್ಮ ಪಾಪಗಳ ಬಗ್ಗೆ ಮನವರಿಕೆ ಹೊಂದಿ ನಂಬಿಕೆ ಹಾಗೂ ವಿಧೇಯತೆಯಲ್ಲಿ ಕರ್ತನ ಕಡೆಗೆ ತಿರುಗಿಕೊಂಡಿದ್ದರು.

**ವಚನ 31.** ಅನ್ಯಜನರಿಗೆ ತದ್ವಿರುದ್ಧವಾಗಿ, **ಆದರೆ ಇಸ್ರಾಯೇಲ್ಯರು ನೀತಿಯನ್ನು ದೊರಕಿಸುವ ಧರ್ಮವನ್ನು ಹಿಡಿಯಬೇಕೆಂದು ಪ್ರಯತ್ನಿಸಿದರೂ ಆ ಧರ್ಮವನ್ನು ಹೊಂದಲಾರದೆ ಹೋದರೆಂದು ಹೇಳಬೇಕು.** ಈ ವಚನದಲ್ಲಿ ಪೌಲನು ಮನಸ್ಸಿನಲ್ಲಿ ಯಾವ "ಧರ್ಮವನ್ನು" (ಧರ್ಮಶಾಸ್ತ್ರ) ಹೊಂದಿದ್ದನೆಂಬರ ಬಗ್ಗೆ ಒಮ್ಮತವಿರುವದಿಲ್ಲ. ಆತನು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದ್ದಾನೆಂದು ಕೆಲವರು ಅಭಿಪ್ರಾಯ ಪಡುತ್ತಾರೆ; ಇನ್ನು ಕೆಲವರು, ಸಾಮನ್ಯವಾದ ವಿಧಿ ಎಂದೂ; ಮತ್ತು ಇತರರು, ಒಂದು ಮೂಲಭೂತವಾದ ನಿಯಮ ಎಂದೂ ಭಾವಿಸುತ್ತಾರೆ.[33]

ಈ ಕ್ಷಣದಲ್ಲಿ, ನಾವು "ಧರ್ಮವನ್ನು" ಎಂಬ ಪದಗುಚ್ಛದ ಬಗ್ಗೆ ಚಿಂತಿಸದಿರೋಣ ಮತ್ತು ಅನ್ಯಜನರಂತಲ್ಲದೆ, ಯೆಹೂದ್ಯರು ನೀತಿಯನ್ನು ಹೊಂದುವದಕ್ಕೆ ತೀವ್ರಾಸಕ್ತಿಯಿಂದ ಪ್ರಯತ್ನಿಸುತ್ತಿದ್ದರೆಂಬ ವಾಸ್ತವಾಂಶದ ಮೇಲೆ ಗಮನವನ್ನು ಹರಿಸೋಣ. ಅವರು ತಮ್ಮ ಧಾರ್ಮಿಕ ವಿಧಿಗಳನ್ನು ಆಚರಿಸಿದರು. ಅವರು ತಮ್ಮ ಸಂಸ್ಕಾರಗಳನ್ನು ನೆರವೇರಿಸಿದರು. ಅವರು ತಮ್ಮ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಗಂಭೀರವಾಗಿದ್ದರು. ಅವರು ಸಬ್ಬತ್ ಹಾಗೂ ಹಬ್ಬದ ದಿನಗಳನ್ನು ಆಚರಿಸಿದರು. ಅವರು ಕಟ್ಟಳೆಯ ಪ್ರಕಾರ ಯೆರೂಸಲೇಮಿನಲ್ಲಿನ ದೇವಾಲಯಕ್ಕೆ ಯಾತ್ರೆಗಳನ್ನು ಮಾಡಿದರು. ಹೇಗಿದ್ದರೂ,—ಅವರು ತಾವು ಇಚ್ಛಿಸಿದ ಗಮ್ಯಸ್ಥಾನವನ್ನು "ಹಿಡಿಯಲಾರದೆ ಹೋದರೆಂದು ಹೇಳಬೇಕು."

**ವಚನ 32. ಅದಕ್ಕೆ ಕಾರಣವೇನು? ಅವರು ನಂಬಿಕೆಯನ್ನು ಆಧಾರಮಾಡಿಕೊಳ್ಳದೆ**

**ನೇಮನಿಷ್ಠೆಗಳನ್ನು ಆಧಾರಮಾಡಿಕೊಂಡದ್ದೇ ಕಾರಣ.** ಈಗ ನಾವು "ಧರ್ಮಶಾಸ್ತ್ರ" ಎಂಬ ಪದಕ್ಕೆ ಸಿದ್ಧವಾಗಿದ್ದೇವೆ. ತಾವು ಧರ್ಮಶಾಸ್ತ್ರವನ್ನು ಕೈಕೊಂಡು ನಡೆದರೆ, ಕೆಲವೊಂದು "ನೇಮನಿಷ್ಠೆಗಳನ್ನು" ಮಾಡುವ ಮೂಲಕ ನೀತಿಯನ್ನು ಗಳಿಸಿಕೊಳ್ಳಬಹುದೆಂದು ಯೆಹೂದ್ಯರು ಭಾವಿಸಿದ್ದರು. ಸುವಾರ್ತೆಯು ಸಾರಲ್ಪಟ್ಟಾಗ, ತಾವು ಪಾಪಿಗಳಾಗಿದ್ದು ರಕ್ಷಣೆಯ ಅಗತ್ಯತೆಯಲ್ಲಿದ್ದಾರೆಂಬ ಸೂಕ್ಷ್ಮಸೂಚನೆಯಿಂದಲೇ ಅವಮಾನಕ್ಕೊಳಗಾಗಿದ್ದರು. ಅವರು ನೀತಿಯನ್ನು ಹೊಂದುವದಕ್ಕೆ ಪ್ರಯತ್ನಿಸಿದ್ದರು, ಆದರೆ ತಪ್ಪಾದ ದಿಕ್ಕಿನಲ್ಲಿ ಪ್ರಯತ್ನಿಸಿದ್ದರು. ಅವರು ಯೇಸುವನ್ನು ತಿರಸ್ಕರಿಸಿದ್ದರು ಮತ್ತು ಶಿಲುಬೆಯ ಮೇಲೆ ಆತನು ಮರಣಿಸಿದ್ದು ಅವರನ್ನು ಮುಜುಗರಗೊಳಿಸಿತ್ತು. ಹಾಗಾದರೆ, ಆವರು ನೀತಿಯನ್ನು ಪಡೆಯಲು ವಿಫಲಗೊಂಡರೆಂಬುದರಲ್ಲಿ ಯಾವದೇ ಆಶ್ಚರ್ಯವಿಲ್ಲ. ನೀವು ಹೋಗಬೇಕೆಂದು ಇಚ್ಛಿಸುವ ಸ್ಥಳವು ಪೂರ್ವ ದಿಕ್ಕಿಗೆ ಆಗಿದ್ದು ನೀವು ಪಶ್ಚಿಮಕ್ಕೆ ಪ್ರಯಾಣಿಸಿದರೆ, ನೀವು ಪ್ರಯಾಣಿಸುವ ಪ್ರತಿಯೊಂದು ಮೈಲು ಸಹ ನಿಮ್ಮನ್ನು ಇಚ್ಛಿಸುವ ಗಮ್ಯಸ್ಥಾನದಿಂದ ದೂರಕ್ಕೆ ಕೊಂಡೊಯ್ಯುತ್ತದೆ ಹೊರತು ಹತ್ತಿರಕ್ಕಂತೂ ಅಲ್ಲ.

ಯೆಹೂದ್ಯರು ತಮಗೋಸ್ಕರ ದೇವರು ಹಾಕಿಕೊಟ್ಟಿದ್ದ ದಾರಿಯಲ್ಲಿ ನಡೆದಿದ್ದರೆ, ಅವರು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿರುತ್ತಿದ್ದರು. ಅವರು ಹಾಗೆ ಮಾಡಲಿಲ್ಲವಾದ್ದರಿಂದ, **ಎಡವುವ ಕಲ್ಲಿಗೆ ಅವರು ಎಡವಿಬಿದ್ದರು** (ನೋಡಿರಿ ಯೆಶಾಯ 8:13-15). "ಎಡವಿಬಿದ್ದರು" ಎಂಬುದರ ಅನುವಾದಿತ ಪದವು προσκόπτω (*proskoptō*) ಎಂದಾಗಿದ್ದು, ಅದರರ್ಥವು "ಎದುರಾಗಿ ಹೊಡೆ" ಮತ್ತು "ಎಡವುವದಕ್ಕೆ ಉಪಯೋಗಿಸಿದ್ದು" ಎಂದಾಗಿದೆ.[34]

"ಎಡವುವ ಕಲ್ಲನ್ನೂ" ಎಂಬುದು ಯೇಸುವಾಗಿದ್ದನು (1 ಪೇತ್ರ 2:8). ಕೀರ್ತನೆಗಾರನು ಹೀಗೆ ಬರೆದಿದ್ದನು, "ಮನೆಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು" (ಕೀರ್ತನೆ 118:22). ಯೆಹೂದ್ಯರು ದೇವರನ್ನು ತಮ್ಮ ಆಶ್ರಯಸ್ಥಾನವಾಗಿ ತಿರಸ್ಕರಿಸಿದ್ದರು ಎಂಬ ವಾಸ್ತವಾಂಶವನ್ನು ಹಳೇ ಒಡಂಬಡಿಕೆಯ ಈ ವಾಕ್ಯಭಾಗವು ಸೂಚಿಸುತ್ತದೆ. ಹೊಸ ಒಡಂಬಡಿಕೆಯ ಬೋಧಕರು ಹಾಗೂ ಬರಹಗಾರರು ಈ ವಾಕ್ಯಭಾಗವನ್ನು ಯೇಸುವಿಗೆ ಅನ್ವಯಿಸಿದರು (ಮತ್ತಾಯ 21:42; ಮಾರ್ಕ 12:10; ಲೂಕ 20:17; ಅಪೊಸ್ತಲರ ಕೃತ್ಯಗಳು 4:11; 1 ಪೇತ್ರ 2:7).

ಮನೆಕಟ್ಟುವವರು ಬೇಡವೆಂದು ಬಿಟ್ಟ ಕಲ್ಲು ಎಡವುವ ಕಲ್ಲಾಯಿತು ಎಂಬುದನ್ನು ನಾನು ಓದುವಾಗ, ನನ್ನ ನೆನಪಿಗೆ ಕೆಲಸಗಾರರು ಒಂದು ಕಟ್ಟಡವನ್ನು ಕಟ್ಟುತ್ತಿರುವ ಸಾದೃಶ್ಯವು ನೆನಪಿಗೆ ಬರುತ್ತದೆ. ವಾಸ್ತುಶಿಲ್ಪಿಯ ನೀಲಿನಕ್ಷೆಯನ್ನು ನಿರ್ಲಕ್ಷಿಸಿ, *ಅವರು* ತಾವು ಸರಿಯೆಂದು ಭಾವಿಸುವ ರೀತಿಯಲ್ಲಿ ಭವನವನ್ನು ನಿರ್ಮಿಸುತ್ತಾರೆ. ಅದರ ಫಲಿತವಾಗಿ, ಮೂಲೆಗಲ್ಲನ್ನು ನಿವೇಶನಕ್ಕೆ ತಂದು ಇಟ್ಟಾಗ, ಅದನ್ನು ಬೇಡವೆಂದು ಕೆಲಸದ ಸ್ಥಳದಲ್ಲಿಯೇ ಬಿಟ್ಟು ಬಿಡಲಾಗುತ್ತದೆ. ಕೆಲಸಗಾರರು ತಾವು ರೂಪಿಸಿರುವಂಥ ಯೋಜನೆಯಲ್ಲಿ ಸರಿಹೊಂದುವ ಕಲ್ಲುಗಳನ್ನು ಹೊತ್ತುಕೊಂಡು ಹೋಗಲು ಅತ್ತಿಂದಿತ್ತ ಓಡಾಡುತ್ತಿರುವಾಗ, ಅವರು ಮತ್ತೆ ಮತ್ತೆ ಆ ಬೇಡವೆಂದು ತಿರಸ್ಕರಿಸಿದ ಮೂಲೆಗಲ್ಲಿಗೆ ಎಡುವುತ್ತಲೇ ಇರುತ್ತಾರೆ. ಆದುದರಿಂದ, ಕಟ್ಟಡಕ್ಕೆ ಮುಖ್ಯವಾದ ಆಧಾರವಾಗುವ ಬದಲಿಗೆ, ಆ ಕಲ್ಲು ಒಂದು ಅನಿಷ್ಟವೆಂದು ಮತ್ತು ಒಂದು ಕಿರಿಕಿರಿಯ ಮೂಲವೆಂದು ಪರಿಗಣಿಸಲ್ಪಡುತ್ತದೆ.

ಯೇಸು ಬಂದಾಗ, ಆತನು ಮೆಸ್ಸೀಯನ ಕುರಿತಾಗಿ ಯೆಹೂದ್ಯರು ಮಾಡಿಕೊಂಡಿದ್ದ ಪೂರ್ವಕಲ್ಪಿತ ಕಲ್ಪನೆಗಳಿಗೆ "ಸರಿಹೊಂದಿಕೆ" ಆಗಲಿಲ್ಲ. ಆತನು ರಾಜವಂಶದ ಉಡುಪುಗಳನ್ನು ಧರಿಸಲಿಲ್ಲ. ಆತನು ಒಬ್ಬ ಭೂಲೋಕದ ಅರಸನಾಗಿ ಮಾಡಲ್ಪಡುವದಕ್ಕೆ ಒಪ್ಪಲಿಲ್ಲ (ಯೋಹಾನ 6:15). ಆತನು ರೋಮಾಯರನ್ನು ಪಿಲಿಷ್ಟಿಯ (Palestine) ದಿಂದ ಹೊರಕ್ಕೆ ಓಡಿಸುವದಕ್ಕಾಗಿ ಒಂದು ಬಲಿಷ್ಠ ಸೈನ್ಯವನ್ನು ಕೂಡಿಸುವದಕ್ಕೆ ಯಾವದೇ ಪ್ರಯತ್ನ ಮಾಡಲಿಲ್ಲ (ನೋಡಿರಿ ಯೋಹಾನ 18:36). ಯೆಹೂದ್ಯರು ಮೆಸ್ಸೀಯನಿಗಾಗಿ ಸ್ಥಾಪಿಸಿದ ಗೂಡಿನಲ್ಲಿ ಯೇಸು ಸರಿಹೊಂದಲಿಲ್ಲವಾದ್ದರಿಂದ, ಅವರು ಆತನನ್ನು ತಿರಸ್ಕರಿಸಿದರು. ಅದರ ಫಲಿತವಾಗಿ, ಯೇಸು ಅವರಿಗೆ ಒಂದು ದೊಡ್ಡ ಕಿರಿಕಿರಿಯಾದನು, ತಮಗೊಂದು ಪೀಡೆಯಾದ ಆತನನ್ನು ಕೊಲ್ಲುವ ಮೂಲಕ ತೊಲಗಿಸಿಕೊಂಡರು.

**ವಚನ 33.** ಯೇಸು *ನಿಜವಾಗಿಯೂ* ಮೆಸ್ಸೀಯನಾಗಿದ್ದಲ್ಲಿ, ಆತನು ಖಂಡಿತ ವಾಗಿಯೂ ಇಸ್ರಾಯೇಲ್ಯರಿಂದ ಅಂಗೀಕರಿಸಿಕೊಳ್ಳಲ್ಪಡುತ್ತಿದ್ದನು ಎಂದು ಯೆಹೂದ್ಯರು ಬಹುಶಃ ಆಕ್ಷೇಪಿಸಬಹುದು. ಅಲ್ಲದೆ ಆತನು ತಿರಸ್ಕರಿಸಲ್ಪಟ್ಟಿದ್ದು ಆತನನ್ನು ಮೆಸ್ಸೀಯನಲ್ಲವೆಂದು ಸಾಭಿತುಪಡಿಸುತ್ತದೆಂದು ಸಹ ಅವರು ಮುಕ್ತಾಯಕ್ಕೆ ಬರಬಹುದಾಗಿದೆ. ಹೇಗೂ, ಮೆಸ್ಸೀಯನು ಇಸ್ರಾಯೇಲ್ಯರಿಂದ ತಿರಸ್ಕರಿಸಲ್ಪಡುವನೆಂದು ಪ್ರವಾದಿಗಳು ಮುಂಚಿತವಾಗಿ ತಿಳಿಸಿದ್ದರು. ಪೌಲನು ಯೆಶಾಯನ ಪುಸ್ತಕದಿಂದ ಉಲ್ಲೇಖಿಸಿ 28:16ನ್ನು 8:14ರೊಂದಿಗೆ ಸಂಯೋಜಿಸುತ್ತಾನೆ. 33ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ಇಗೋ, ಚೀಯೋನಿನಲ್ಲಿ** [ಯೆರೂಸಲೇಮ] **ಎಡವುವ ಕಲ್ಲನ್ನೂ ಮುಗ್ಗರಿಸುವ ಬಂಡೆಯನ್ನೂ ಇಡುತ್ತೇನೆಂತಲೂ ಶಾಸ್ತ್ರದಲ್ಲಿ ಬರೆದದೆಯಲ್ಲಾ** [ನೋಡಿರಿ ಯೆಶಾಯ 28:16; 8:14]. "ಮುಗ್ಗರಿಸುವ" ಎಂಬುದು ಗ್ರೀಕ್‌ನ σκάνδαλον (*skandalon*) ಎಂಬ ಪದದ ಅನುವಾದವಾಗಿದೆ, ಆ ಪದದಿಂದ "ನಾಚಿಕೆಗೇಡು" ಮತ್ತು "ಲಜ್ಜಾಸ್ಪದವಾದ" ಎಂಬ ಪದಗಳು ಬಂದಿರುತ್ತವೆ.

> *Skandalon* ಎಂಬುದು ಮೂಲತಃ ಬಲೆಯಲ್ಲಿ ಗಾಳವನ್ನು ಅಳವಡಿಸಿರುತ್ತಿದ್ದ ಭಾಗದ ಹೆಸರಾಗಿತ್ತು. . . .
>
> . . . [ಹೊಸ ಒಡಂಬಡಿಕೆಯಲ್ಲಿ] *skandalon* ರೂಪಕಾರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ, ಮತ್ತು ಸಾಧಾರಣವಾಗಿ ಕೆಡುಕನ್ನು ಎಬ್ಬಿಸುವ, ಅಥವಾ ಇತತರಿಗೆ ವಿಘ್ನವಾಗುವ, ಅಥವಾ ಅವರನ್ನು ಬೀಳುವಂತೆ ಮಾಡುವ ಯಾವದೇ ಸಂಗತಿಯನ್ನು ಸೂಚಿಸುವದಾಗಿದೆ.[35]

NCV ತರ್ಜುಮೆಯಲ್ಲಿ "ಅವರನ್ನು ಬೀಳುವಂತೆ ಮಾಡುವ ಬಂಡೆ" ಎಂದು ಇರುತ್ತದೆ.

ಯೆಹೂದ್ಯರಿಗಾದರೋ, ಅವರಿಗೆ ಅತ್ಯಂಥ ಜುಗುಪ್ಸೆಯುಂಟು ಮಾಡುವ ಸಂಗತಿಯೆಂದರೆ ಯೇಸುವು ಒಬ್ಬ ಸಾಮಾನ್ಯ ಅಪರಾಧಿಯಂತೆ ಶಿಲುಬೆಗೆ ಹಾಕಲ್ಪಟ್ಟಿದ್ದು. ಪೌಲನು ಕೊರಿಂಥದವರಿಗೆ ಹೀಗೆ ಹೇಳಿದನು, "ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ. ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ . . . ಆಗಿದೆ" (1 ಕೊರಿಂಥ 1:23). ಗಲಾತ್ಯ 5:11ರಲ್ಲಿ, ಆತನು "ಶಿಲುಬೆಯ ದೆಸೆಯಿಂದ ಉಂಟಾದ ಆಕ್ಷೇಪ" ಎಂದು ಕರೆಯುತ್ತಾನೆ. ಯೆಹೂದ್ಯರಿಗೆ ಸಂಬಂಧಪಟ್ಟಂತೆ, ಶಿಲುಬೆಯ ಮೇಲೆ ಸಾಯುವದು ಅರಸುತನಕ್ಕೆ ಅತ್ಯಂಥ ಅಪವಾದಕರವಾದದ್ದಾಗಿತ್ತು.

ಇಸ್ರಾಯೇಲ್ಯರಲ್ಲಿ ಬಹುತೇಕರು ಯೇಸುವನ್ನು ತಿರಸ್ಕರಿಸುವರೆಂಬುದು ದೇವರಿಗೆ

ಗೊತ್ತಿತ್ತು, ಆದರೆ ಕೆಲವರು ಆತನನ್ನು ಸ್ವೀಕರಿಸಿಕೊಳ್ಳುವರೆಂಬುದನ್ನು ಸಹ ಆತನು ಎದುರುನೋಡಿದ್ದನು. ಈ ಕಾರಣಕ್ಕಾಗಿ, ಯೆಶಾಯನು 28:16ರಲ್ಲಿನ ತನ್ನ ಪ್ರವಾದನೆಗೆ ಇದನ್ನು ಸೇರ್ಪಡೆಗೊಳಿಸಿದ್ದನು: **ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದಿಲ್ಲವೆಂತಲೂ.** "ಆಶಾಭಂಗಪಡುವದಿಲ್ಲ" ಎಂಬುದು καταισχύνω (*kataischunō*) ಸಂಯುಕ್ತ ಪದದಿಂದ ಬಂದದ್ದು, ಅದು "ಅವಮಾನಕ್ಕೆ" αἰσχύνω (*aischunō*) ಎಂಬದಕ್ಕಾಗಿರುವ ಪದವನ್ನು κατά (*kata*) ಎಂಬ ಉಪಸರ್ಗದೊಂದಿಗೆ ತೀವ್ರಗೊಳಿಸುತ್ತದೆ. ಇಲ್ಲಿ ನ್ಯಾಯತೀರ್ಪಿನ ದಿನದಂದು ಕರ್ತನಿಂದ ತಿರಸ್ಕರಿಸಲ್ಪಟ್ಟಾಗ ನಾಚಿಕೆಗೆ ಗುರಿಪಡಿಸಲ್ಪಡುವದನ್ನು ಸೂಚಿಸಲಾಗಿರುತ್ತದೆ. ಯೇಸು ಹೀಗೆ ಹೇಳಿದನು, ". . . ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು, ತಾನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವನು" (ಮಾರ್ಕ 8:38). ಹೇಗೂ, ಯೇಸುವಿನಲ್ಲಿ ನಂಬಿಕೆಯನ್ನಿಡುವವನು—ಯೆಹೂದ್ಯನಾಗಲಿ ಅಥವಾ ಅನ್ಯಜನಾಂಗದವನಾಗಲಿ—ಈ ರೀತಿಯ ನಾಚಿಕೆಯನ್ನು ಅನುಭವಿಸುವದಿಲ್ಲ. ಇದರೊಂದಿಗೆ, ತನ್ನ ವಿಚಾರಧಾರೆಯನ್ನು ನಿರೀಕ್ಷೆಯ ಒಂದು ಟಿಪ್ಪಣಿಯೊಂದಿಗೆ ಮುಕ್ತಾಯಗೊಳಿಸುತ್ತಾನೆ.

# ಅನ್ವಯಿಸುವಿಕೆ

### ಪ್ರಾಮುಖ್ಯವಾದ ಸತ್ಯಗಳು (9:1-13)

ಮೊದಲ ಶತಮಾನದ ಸಮಸ್ಯೆಗಳ ಕುರಿತು ಪೌಲನು ನೀಡುವ ಉಪದೇಶಗಳು ಇಪ್ಪತ್ತೊಂದನೆಯ ಶತಮಾನಕ್ಕೆ ಕೆಲವೊಂದು ಪ್ರಾಮುಖ್ಯವಾದ ಸತ್ಯಗಳನ್ನು ಒದಗಿಸುತ್ತದೆ.

*ನಾವು ಕಳೆದುಹೋಗಿರುವವರ ಬಗ್ಗೆ ಚಿಂತೆಯುಳ್ಳವರಾಗಿರತಕ್ಕದ್ದು* (9:1-3). ಯೆಹೂದ್ಯರನ್ನು ದ್ವೇಷಿಸುವದಕ್ಕೆ ಪೌಲನಿಗೆ ಎಲ್ಲಾ ಕಾರಣಗಳಿದ್ದವು. ಆತನು ಭೇಟಿಕೊಟ್ಟ ಹೆಚ್ಚುಕಡಿಮೆ ಎಲ್ಲಾ ಪಟ್ಟಣಗಳಲ್ಲಿಯೂ ಅವರಿಂದ ನಿಂದಿಸಲ್ಪಟ್ಟಿದ್ದನು. ಹೇಗಿದ್ದರೂ, ಅವರು ಯೇಸುವನ್ನು ಅಂಗೀಕರಿಸಿಕೊಳ್ಳುವ ಹೊರತು, ರೋಮಾ 8ರಲ್ಲಿ ನಮೂದಿಸಲ್ಪಟ್ಟಿರುವ ಅದ್ಭುತಕರವಾದ ಆಶೀರ್ವಾದಗಳನ್ನು ಎಂದಿಗೂ ಆನಂದಿಸಲಾರರು ಎಂಬುದು ಆತನ ಹೃದಯವನ್ನು ವೇದನೆಗೊಳಿಸಿತು. ನಾವು ಊಹಿಸಿಕೊಳ್ಳಬಹುದಾದ ಅತ್ಯಂಥ ಭಯಂಕರವಾದ ಅನುಭವವಗಳನ್ನು ಪೌಲನು ಹೊಂದಿದ್ದಾಗ್ಯೂ, ಜನರು ಕಳೆದುಹೋಗುವ ಬಗ್ಗೆ ಆಲೋಚಿಸದಾಗ ಆತನು ಅನುಭವಿಸಿದ ವೇದನೆಯ ಆಳತೆಯನ್ನು ಆತನು ಇನ್ನೆಲ್ಲೂ ವ್ಯಕ್ತಪಡಿಸಲಿಲ್ಲ. ನಿಮ್ಮ ಮತ್ತು ನನ್ನ ಸುತ್ತಲು ಕರ್ತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗುವ ಹೊರತು ನಿತ್ಯವಾಗಿ ಕಳೆದುಹೋಗುವಂತಹ ಜನರಿರುತ್ತಾರೆ. ಅವರಲ್ಲಿ ಕೆಲವರು "ಶರೀರಸಂಬಂಧವಾಗಿ ಸ್ವಜನರಾಗಿರ" ಬಹುದಾಗಿದೆ. ನಮಗೆ, ಸಹ, ಅವರಿಗೋಸ್ಕರ "ಮಹಾದುಃಖವೂ ಹೃದಯದಲ್ಲಿ ಎಡಬಿಡದೆ ವೇದನೆಯೂ" ಇರತಕ್ಕದ್ದು.

*ನಾವು ಒಳ್ಳೆಯದೊಂದನ್ನು ಮಾತಾಡಬೇಕು* (9:4, 5). ಪೌಲನ ಪತ್ರಿಕೆಗಳ ಆರಂಭದಲ್ಲಿ ಗಮನಿಸಿ ನೋಡಿರಿ, ಆತನು ಸಾಮಾನ್ಯವಾಗಿ ಸಮಸ್ಯೆಗಳ ಬಗ್ಗೆ

ಮಾತಾಡುವದಕ್ಕೆ ಮುಂಚೆ ತನ್ನ ವಾಚಕರ ವಿಷಯವಾಗಿ ಒಳ್ಳೇ ಸಂಗತಿಯೊಂದನ್ನು ಮಾತಾಡುತ್ತಾನೆಂಬುದನ್ನು ಕಾಣುವಿರಿ. ಯುವ ಬೋಧಕರು (ಮತ್ತು ಹಿರಿಯರು) ಪೌಲನ ಉದಾಹರಣೆಯಿಂದ ಕಲಿತುಕೊಳ್ಳಬಹುದು. ನಾವೆಲ್ಲರೂ ಸಹ ಇತರರೊಂದಿಗಿನ ನಮ್ಮ ಸಂಬಂಧಗಳಲ್ಲಿ ಧನಾತ್ಮಕತೆಯನ್ನು ಹುಡುಕತಕ್ಕದ್ದು.

*ಅವಕಾಶಗಳನ್ನು ವ್ಯರ್ಥಮಡಿಕೊಳ್ಳಬಹುದಾಗಿದೆ* (9:4, 5). ಯೆಹೂದ್ಯರಿಗೆ ಕರ್ತನಿಂದ ಅನೇಕ ಸವಲತ್ತುಗಳು ಕೊಡಲ್ಪಟ್ಟಿದ್ದವು, ಆದರೆ ಅವರು ಅವುಗಳ ಲಾಭವನ್ನು ಪಡೆದುಕೊಂಡಿರಲಿಲ್ಲ. ಅವರು ತಮಗೆ ಸಿಕ್ಕ ಅವಕಾಶಗಳನ್ನು ವ್ಯರ್ಥಪಡಿಸಿಕೊಂಡಿದ್ದರು, ಮತ್ತು ವ್ಯರ್ಥಮಾಡಿಕೊಂಡ ಒಂದು ಅವಕಾಶವು ಶಾಶ್ವತವಾಗಿ ಕಳೆದುಹೋದಂತಯೇ. ಎಫೆಸ 5:16ರಲ್ಲಿ, ಪೌಲನು ಎಲ್ಲಾ ಕ್ರೈಸ್ತರಿಗೂ "ಈ ದಿನಗಳು ಕೆಟ್ಟವುಗಳಾಗಿವೆ; ಆದುದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು—ಪ್ರತಿ ಅವಕಾಶವನ್ನು ಕೊಂಡುಕೊಳ್ಳುವದು—ಉಪಯೋಗಿಸಿರಿ" ಎಂದು ಬೇಡಿಕೊಳ್ಳುತ್ತಾನೆ (AB). ದೇವರು ನಮಗೆ ಒದಗಿಸಿದ ಎಲ್ಲಾ ಅವಕಾಶಗಳ ಬಗ್ಗೆ ಯೋಚಿಸಿರಿ, ವಿಶೇಷವಾಗಿ ಆತ್ಮೀಕ ಅವಕಾಶಗಳ ಕುರಿತು ಯೋಚಿಸಿರಿ. ನಾವು ಅವುಗಳನ್ನು ವ್ಯರ್ಥಮಾಡಿಕೊಳ್ಳುವ ದಾದರೆ ಅದು ಎಷ್ಟು ದುರಂತಕರವಾಗಿರುತ್ತದೆ!

*ರಕ್ಷಣೆಯು ವೈಯಕ್ತಿಕವಾದದ್ದು* (9:6, 7). ಯೆಹೂದ್ಯರು ತಾವು ಶರೀರಸಂಬಂಧವಾಗಿ ಅಬ್ರಹಾಮನ ವಂಶದವರೆಂಬ ಮಾತ್ರದಿಂದ ರಕ್ಷಿಸಲ್ಪಡುವರೆಂದು ಆಲೋಚಿಸಿದ್ದರು, ಆದರೆ ಅದು ಹಾಗಿರಲಿಲ್ಲ. ಯೇಸು ಒಮ್ಮೆ ಯೆಹೂದ್ಯರಿಗೆ, "ಅಬ್ರಹಾಮನು ನಮಗೆ ಮೂಲಪುರುಷನಲ್ಲವೇ ಎಂದು ನಿಮ್ಮೊಳಗೆ ಅಂದುಕೊಳ್ಳುವವರಾಗಬೇಡಿರಿ. ದೇವರು ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು" ಹೇಳಿದನು (ಲೂಕ 3:8). ಇಂದು, ಕೆಲವರು ಭಕ್ತಿಯುಳ್ಳ ಕ್ರೈಸ್ತ ತಂದೆತಾಯಿಗಳಿದ್ದರೆ ತಮ್ಮನ್ನು ಕ್ರೈಸ್ತರನ್ನಾಗಿ ಮಾಡುತ್ತದೆಂದು ಯೋಚಿಸುತ್ತಾರೆ. ಅದು ಹಾಗಿರುವದಿಲ್ಲ. ನೀವು ತಂದೆತಾಯಿಗಳಿಂದಾಗಲಿ ಅಥವಾ ಅಜ್ಜಅಜ್ಜಿಯಿಂದಾಗಲಿ ರಕ್ಷಣೆಯನ್ನು ಬಾಧ್ಯವಾಗಿ ಪಡೆಯುವದಕ್ಕೆ ಸಾಧ್ಯವಿಲ್ಲ. ಅದೊಂದು ವೈಯಕ್ತಿಕವಾದ ಸಂಗತಿಯಾಗಿದೆ. ನೀವು *ವೈಯಕ್ತಿಕವಾಗಿ* ಕರ್ತನನ್ನು ಅಂಗೀಕರಿಸಿಕೊಳ್ಳಬೇಕು ಮತ್ತು ಆತನ ಚಿತ್ತವನ್ನು ಮಾಡಬೇಕು (ಯೋಹಾನ 8:24; ಲೂಕ 13:3; ಮಾರ್ಕ 16:16).

*ದೇವರು ದೇವರೇ* (9:11, 12). ಬಹುಶಃ ರೋಮಾ 9ರಲ್ಲಿ ಸಿಕ್ಕುವ ಅತ್ಯಂಥ ಪ್ರಾಮುಖ್ಯವಾದ ಸತ್ಯವೆಂದರೆ ದೇವರು ದೇವರೇ ಆಗಿದ್ದಾನೆ ಮತ್ತು ತನಗೆ ಇಷ್ಟವಾದದ್ದನ್ನು ಮಾಡಬಲ್ಲನು[36]—ಆತನು ದೇವರಾಗಿದ್ದಾನೆಂಬ ಕಾರಣಕ್ಕಾಗಿಯೇ ಎಂಬುದು. ದೇವರ ಈ ಗುಣಸ್ವಭಾವವನ್ನು ಸೂಚಿಸುವದಕ್ಕೆ ದೈವಶಾಸ್ತ್ರೀಕವಾದ ಪದವೆಂದರೆ "ಸಾರ್ವಭೌಮತೆ." ನಮ್ಮಲ್ಲಿ ಕೆಲವರು ಮಾನವನ ಸ್ವೇಚ್ಛಾ—ಚಿತ್ತದ ಬಗ್ಗೆ ಉಪದೇಶಿಸಲು ಹೆಚ್ಚು ಸಮಯವನ್ನು ಮತ್ತು ದೇವರ ಸಾರ್ವಭೌಮತೆಯ ಬಗ್ಗೆ ಉಪದೇಶಿಸಲು ಸ್ವಲ್ಪ ಸಮಯವನ್ನು ಕಳೆಯುತ್ತೇವೆ. ದೇವರು ಯಾಕೋಬ ಮತ್ತು ಏಸಾವ ಹುಟ್ಟುವ ಮುನ್ನವೇ ಏಸಾವನನ್ನು ತಿರಸ್ಕರಿಸಿ ಯಾಕೋಬನನ್ನು ಆರಿಸಿಕೊಂಡ ವಿಷಯದಲ್ಲಿ ನೋಡುವದಾದರೆ, ದೇವರು ಭವಿಷ್ಯವನ್ನು ದೃಷ್ಟಿಸಿ ತನ್ನ ಸಂಕಲ್ಪಗಳಿಗೆ ಯಾಕೋಬನು ಏಸಾವನಿಗಿಂತಲೂ ಉತ್ತಮವಾದ ಅಭ್ಯರ್ಥಿಯಾಗಬಲ್ಲನೆಂಬುದನ್ನು ಬಲ್ಲವನಾಗಿದ್ದನು ಎಂದು

ಹೇಳಬಹುದಾಗಿದೆ. ಅದು ಸತ್ಯವೇ ಆಗಿರಬಹುದು, ಆದರೆ ಹುಟ್ಟಿದ ಬಳಿಕ ಯಾಕೋಬನಾಗಲಿ ಅಥವಾ ಏಸಾವನಾಗಲಿ ಮಾಡುವಂತಹ ಯಾವದೇ ಕಾರ್ಯವಾಗಲಿ ಒಬ್ಬನನ್ನು ತಿರಸ್ಕರಿಸಿ ಮತ್ತೊಬ್ಬನನ್ನು ಆರಿಸಿಕೊಳ್ಳುವಂತೆ ದೇವರನ್ನು *ಕಡ್ಡಾಯ*ಗೊಳಿಸಲಿಲ್ಲ ಎಂಬುದು ಪೌಲನು ಹೇಳುವ ಅಂಶವಾಗಿತ್ತು. ದೇವರು ದೇವರೇ ಮತ್ತು, ಅಂಥವನು, ಯಾರ ಹಂಗಿನಲ್ಲಿಯೂ ಇರುವವನಲ್ಲ. ಆತನನ್ನು ದೇವರೆಂದು ಘನಪಡಿಸಲು ಕಲಿತುಕೊಳ್ಳೋಣ.

*ನಾವು ಎಂದಿಗೂ ತಿಳಿಯಲು ಸಾಧ್ಯವಿಲ್ಲದ್ದು ಬಹಳಷ್ಟಿರುತ್ತದೆ.* ಬೇರೆ ಏನಿಲ್ಲವಾದರೆ, ೯ರಿಂದ 11 ಅಧ್ಯಾಯಗಳಂತಹ, ರೋಮಾಪುರದವರಿಗೆ ಪತ್ರಿಕೆಯ ಕಠಿಣ ವಿಭಾಗಗಳು, ದೇವರ ಹಾಗೂ ಆತನ ಸಂಕಲ್ಪಗಳ ಬಗ್ಗೆ ನಾವವು ಎಂದಿಗೂ ತಿಳಿದುಕೊಳ್ಳಲು ಸಾಧ್ಯವಿಲ್ಲದ್ದು ಬಹಳಷ್ಟಿದೆ ಎಂಬುದನ್ನು ನಮಗೆ ಮನದಟ್ಟು ಮಾಡತಕ್ಕದ್ದು. ನಮ್ಮಲ್ಲಿ ಕೆಲವರು ದೇವರ ಬಗ್ಗೆ ತಿಳಿಯುವದಕ್ಕೆ ಇರಬಹುದಾದ ಎಲ್ಲವನ್ನೂ ತಿಳಿದುಕೊಳ್ಳುವದಕ್ಕೆ ಬಯಸುತ್ತೇವೆ. ನಾವು ಅದೆಲ್ಲವನ್ನೂ ಬರೆದು, ಅದನ್ನು ಒಂದು ಡಬ್ಬದಲ್ಲಿಡಲು, ಮತ್ತು ಅದರ ಮೇಲೊಂದು ರಿಬ್ಬನ್ ಕಟ್ಟುವದಕ್ಕೆ ಬಯಸುತ್ತೇವೆ—ಆದರೆ ದೇವರು ಒಂದು ಡಬ್ಬದಲ್ಲಿ ಸರಿಹೊಂದುವವನಲ್ಲ. ಮೋಶೆಯು ಹೀಗೆ ಬರೆದನು, "ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿಯವರ ಪಾಲಾಗಿರುವದರಿಂದ ನಾವು ಈ ಧರ್ಮಶಾಸ್ತ್ರನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ" (ಧರ್ಮೋಪದೇಶಕಾಂಡ 29:29). ದೇವರು ನಮಗೆ *ಕೆಲವು* ಸಂಗತಿಗಳನ್ನು ಪ್ರಕಟಗೊಳಿಸಿದ್ದಾನೆಂಬುದಕ್ಕೆ ಸಂತೋಷ ಪಡೋಣ. ಆತನು ಪ್ರಕಟಗೊಳಿಸಿರುವಂತವು ಗಳನ್ನು ಅಧ್ಯಯನ ಮಾಡೋಣ ಮತ್ತು ವಿಧೇಯರಾಗೋಣ—ಆದರೆ ಆತನು *ಎಲ್ಲವನ್ನೂ* ಪ್ರಕಟಗೊಳಿಸಿರುವದಿಲ್ಲ ಎಂಬುದನ್ನು ಸಹ ಅರ್ಥಮಾಡಿಕೊಳ್ಳೋಣ. ರೋಮಾಪುರದ ವರಿಗೆ ಪುಸ್ತಕವು ನಮ್ಮನ್ನು ದೀನತೆಯಲ್ಲಿರುವಂತೆ ಮಾಡತಕ್ಕದ್ದು.

*ದೇವರು ತನ್ನ ವಾಗ್ದಾನಗಳನ್ನು ಕಾಪಾಡಿಕೊಳ್ಳುವನು* (9:6). ರೋಮಾ 9-11ರಲ್ಲಿ, ಪೌಲನು ಮೊದಲ ಶತಮಾನದ ಸಮಸ್ಯೆಯೊಂದನ್ನು ಕುರಿತು ಮಾತಾಡುತ್ತಿದ್ದಾನೆ. ಆ ಸಮಸ್ಯೆಯನ್ನು ವ್ಯಕ್ತಪಡಿಸಬಹುದಾದ ಒಂದು ರೀತಿ ಇಲ್ಲಿರುತ್ತದೆ: "ದೇವರು ಯೆಹೂದ್ಯ ಜನಾಂಗಕ್ಕೆ ಮಾಡಿದ ವಾಗ್ದಾನಗಳನ್ನು ಕಾಪಾಡಿಕೊಳ್ಳುವನೋ?" ಆ ಪ್ರಶ್ನೆಯನ್ನು ಮೊದಲ ಶತಮಾನಕ್ಕೆ ಸಂಬಂಧಗೊಳಿಸಬಹುದು, ಆದರೆ ಅದು ಇಪ್ಪತ್ತೊಂದನೆಯ ಶತಮಾನಕ್ಕೆ ಗಂಭೀರವಾದ ಸೂಚ್ಯಾರ್ಥಗಳನ್ನು ಹೊಂದಿದೆ: ದೇವರು ನಮಗೆ ಮಾಡಿದ ವಾಗ್ದಾನಗಳನ್ನು ಕಾಪಾಡಿಕೊಳ್ಳುವನೋ? ಪೌಲನು ಈ ಪ್ರಶ್ನೆಯೊಂದಿಗೆ ಹೋರಾಟವನ್ನು ಮುಂದುವರೆಸಿದಾಗ್ಯೂ, ಆತನ ನಿರ್ಣಯವು ಈಗಾಗಲೇ ನಮ್ಮ ವಾಕ್ಯಭಾಗದ 6ನೇ ವಚನದಲ್ಲಿ ತಿಳಿಸಲ್ಪಟ್ಟಿರುತ್ತದೆ: "ದೇವರು ಹೇಳಿದ ಮಾತು ತಪ್ಪಿತೆಂದು ನಾವು ಭಾವಿಸಕೂಡದು." ಚೆನ್ನಾಗಿ ಕೇಳಿಸಿಕೊಳ್ಳಿರಿ: ನಮಗೆ ದೇವರು ನೀಡಿದ ಮಾತು ಎಂದಿಗೂ ತಪ್ಪುವ*ದಿಲ್ಲ*! ದೇವರು ತನ್ನ ವಾಗ್ದಾನಗಳನ್ನು ಕಾಪಾಡಿಕೊ*ಳ್ಳುವನು*. ನಿಮ್ಮ ಜೀವಿತವನ್ನು ಆಧಾರ ಮಾಡಿಕೊಳ್ಳಬಹುದಾದ ಒಂದು ಸತ್ಯ ಇದಾಗಿದೆ.

*ಮುಕ್ತಾಯ.* ನಾವು ಅಂತ್ಯಗೊಳಿಸುತ್ತಿರುವ ಹಾಗೆ, ಈಗಷ್ಟೆ ಹೇಳಲಾದ ಸತ್ಯಗಳಿಗೆ

ಸಂಬಂಧಿಸಿದಂತೆ ಕೆಲವು ಬುದ್ಧಿವಾದಗಳನ್ನು ಪರಿಗಣಿಸೋಣ. ಮೊದಲನೆಯದಾಗಿ, ನೀವು ಒಬ್ಬ ಕ್ರೈಸ್ತನಲ್ಲವಾದರೆ, ರಕ್ಷಣೆಯು ವೈಯಕ್ತಿಕವಾದದ್ದೆಂಬುದನ್ನು ಅರ್ಥಮಾಡಿಕೊಳ್ಳಿರಿ. ನಿಮಗೋಸ್ಕರವಾಗಿ ಬೇರೆ ಯಾರೊಬ್ಬರೂ ನಂಬುವದನ್ನು ಅಥವಾ ಪಶ್ಚಾತಾಪ ಪಡುವದನ್ನು ಅಥವಾ ದೀಕ್ಷಾಸ್ನಾನ ಮಾಡಿಸಿಕೊಳ್ಳುವದನ್ನು ಮಾಡಲಾರರು. ನೀವು ನಿಮ್ಮ ಜೀವಿತವನ್ನು ಕ್ರಿಸ್ತನಿಗೆ ಒಪ್ಪಿಸಿಕೊಟ್ಟಿಲ್ಲವಾದರೆ, ದಯವಿಟ್ಟು ಈ ದಿನವೇ ಅದನ್ನು ಮಾಡಿರಿ. ಎರಡನೆಯದಾಗಿ, ನೀವು ಒಬ್ಬ ಕ್ರೈಸ್ತನಾಗಿರುವಿರಿ ಆದರೆ ಕರ್ತನು ಒದಗಿಸಿರುವ ಆತ್ಮೀಕ ಅವಕಾಶಗಳ ಲಾಭವನ್ನು ಇನ್ನೂ ಪಡೆದುಕೊಂಡಿಲ್ಲವಾದರೆ, ಪಶ್ಚಾತಾಪ ಪಟ್ಟು ಇನ್ನಷ್ಟು ಉತ್ತಮ ಕಾರ್ಯ ಮಾಡುವ ತೀರ್ಮಾನ ಕೈಕೊಳ್ಳಬೇಕೆಂದು ನಿಮ್ಮನ್ನು ನಾನು ಬೇಡಿಕೊಳ್ಳುತ್ತೇನೆ (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9). ನೀವು ಗತಕಾಲದ ಬಗ್ಗೆ ಸರಿಪಡಿಸಿಕೊಳ್ಳಬೇಕಾದ ಅಗತ್ಯವಿದ್ದಲ್ಲಿ (ನೋಡಿರಿ ಯಾಕೋಬ 5:16), ಅದನ್ನು ಮಾಡುವದಕ್ಕೆ ಈಗಲೇ ಸುಪ್ರಸನ್ನತೆಯ ಕಾಲವಾಗಿರುತ್ತದೆ (2 ಕೊರಿಂಥ 6:2).

## ದೇವರ ನ್ಯಾಯವಂತಿಕೆ ಮತ್ತು ಕರುಣೆ (9:14-29)

ರೋಮಾ 9:14-29 ವಚನಗಳು ಕೆಲವರನ್ನು ಆರಿಸಿಕೊಂಡಿ ಇತರರನ್ನು ತಿರಸ್ಕರಿಸಿದ್ದರಲ್ಲಿ ದೇವರ ನ್ಯಾಯವಂತಿಕೆಯ ಬಗ್ಗೆ ಮಾತಾಡುತ್ತವೆ. ಪೌಲನಿಂದ ಚರ್ಚಿಸಲ್ಪಡುವ ನಿರ್ದಿಷ್ಟವಾದ ಸಮಸ್ಯೆಯು ಇಂದು ನಮಗೆ ಸಂಬಂಧಪಟ್ಟದ್ದಾಗಿ ಇರುವದಿಲ್ಲವಾದರೂ, ಈ ಸತ್ಯವು ನಮಗೆ ಮನದಟ್ಟಾಗುವದೆಂದು ನಾನು ನಿರೀಕ್ಷಿಸುತ್ತೇನೆ: ದೇವರು ನ್ಯಾಯವಾಗಿದ್ದಾನೆ; ಆತನು ನ್ಯಾಯಪೂರ್ಣನು; ಆತನು ನೀತಿಯುಳ್ಳವನು. ದೇವರು ನ್ಯಾಯವಾಗಿ ನಡೆದುಕೊಳ್ಳುವವನಲ್ಲ ಎಂದು ಯಾರಾದರೂ ಅಭಿಪ್ರಾಯ ಪಡುವದಾದರೆ, ಆತನು ದೇವರಿಗಿಂತಲೂ ತನ್ನ ಬಗ್ಗೆಯೇ ಅಧಿಕ ಹೇಳಿಕೊಳ್ಳುವವನಾಗಿರುತ್ತಾನೆ. ಆತನು ತನ್ನ ಸ್ವಂತ ಅಜ್ಞಾನ ಮತ್ತು ಅಪನಂಬಿಕೆಯನ್ನು ಬಯಲುಗೊಳಿಸಿಕೊಳ್ಳುತ್ತಿದ್ದಾನಷ್ಟೆ.

ಹೇಗೂ, ಈ ವಾಕ್ಯಭಾಗವು ದೇವರನ್ನು ನ್ಯಾಯವಾದವನು ಎಂದು ಘೋಷಿಸುವದು ಮಾತ್ರವಲ್ಲದೆ; ಅದು ಆತನನ್ನು ಕರುಣೆಯುಳ್ಳವನು ಎಂದು ಸಹ ಘೋಷಿಸುತ್ತದೆ. C. E. B. Cranfield ಅಭಿಪ್ರಾಯ ಪಟ್ಟದ್ದೇನೆಂದರೆ 9ರಿಂದ 11 ಅಧ್ಯಾಯಗಳಲ್ಲಿನ "ಪ್ರಮುಖ ಪದ"ವು "ಕರುಣೆ" ಎಂಬುದು.[37] ಆ ಪದದ ಕ್ರಿಯಾಪದ ಹಾಗೂ ನಾಮಪದವು—ἐλεέω (*eleeō*) and ἔλεος (*eleos*)—ಈ ಅಧ್ಯಾಯಗಳಲ್ಲಿ ಒಂಬತ್ತು ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ಪತ್ರಿಕೆಯ ಉಳಿದ ಭಾಗದಲ್ಲಿ ಒಂದೇ ಒಂದು ಸಾರಿ ಕಾಣಿಸಿಕೊಳ್ಳುತ್ತದೆ.[38] ದೇವರು ನ್ಯಾಯವಾದವನು ಎಂಬುದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ, ಆದರೆ ಆತನು ಕರುಣೆಯುಳ್ಳವನು ಸಹ ಆಗಿದ್ದಾನೆಂಬುದಕ್ಕಾಗಿ ನನ್ನ ಪೂರ್ಣ ಹೃದಯದಿಂದ ಹರ್ಷಿಸುತ್ತೇನೆ. ವಿಷಯವು ಹಾಗಿರುವದರಿಂದ, ನನಗೆ ನಿತ್ಯವಾಗಿ ರಕ್ಷಿಸಲ್ಪಡುತ್ತೇನೆಂಬ ನಿರೀಕ್ಷೆಯಿರುತ್ತದೆ!

## ಕಠಿಣಗೊಂಡ ಹೃದಯಗಳು (9:18)

ಕಠಿಣಗೊಂಡ ಹೃದಯಗಳಿಗೆ ಆಗಾಗ ಉಪಯೋಗಿಸಲ್ಪಡುವ ದೃಷ್ಟಾಂತವೆಂದರೆ ಬೆಣ್ಣೆ

ಮತ್ತು ಮಣ್ಣಿನ ಮೇಲೆ ಸೂರ್ಯನ ಕಿರಣಗಳಿಂದಾಗುವ ಪರಿಣಾಮದ ದೃಷ್ಟಾಂತ. ಬೆಣ್ಣೆಯನ್ನು ಕರಗುವಂತೆ ಮಾಡುವ ಅದೇ ಕಿರಣಗಳು ಮಣ್ಣನ್ನು ಗಟ್ಟಿಯಾಗುವಂತೆ ಮಾಡುತ್ತವೆ. ಅದೇ ರೀತಿಯಲ್ಲಿಯೇ, ದೇವರು ಮಾತಾಡುವಾಗ, ಕೆಲವರ ಹೃದಯಗಳು ಮೃದುಗೊಂಡರೆ ಇನ್ನು ಕೆಲವರ ಹೃದಯಗಳು ಕಠಿಣಗೊಳ್ಳುತ್ತವೆ. ದೇವರ ಮಾತುಗಳು ಫರೋಹನ ಹೃದಯವನ್ನು ಕಠಿಣಗೊಳಿಸಿದವು ಯಾಕೆಂದರೆ ಆತನ ಹೃದಯವು (ನಾನು ಒಂದು ವೇಳೆ ಈ ವಿಧದಲ್ಲಿ ಹೇಳುವದಾದರೆ) "ಮಣ್ಣಿನಿಂದ ಮಾಡಲ್ಪಟ್ಟಿತ್ತು."

## "ಮುಂದಾಗಿ ಸಿದ್ಧಮಾಡಿದ" (9:23)

ಕೆಲವರು 9:23ರಲ್ಲಿನ "ಮುಂದಾಗಿ ಸಿದ್ಧಮಾಡಿದ" ಎಂಬ ಪದಗುಚ್ಛವನ್ನು ಇಂಥಿಂಥ ವ್ಯಕ್ತಿಗಳು ತನ್ನ ಕರುಣೆಯನ್ನು ಹೊಂದುವವರೆಂದು ದೇವರು ಮುಂಚಿತವಾಗಿಯೇ ತೀರ್ಮಾನಿಸಿರುತ್ತಾನೆಂದೂ, ಆ ವ್ಯಕ್ತಿಗಳು ಏನೇ ಮಾಡಿದಾಗ್ಯೂ ಈ ತೀರ್ಮಾನವನ್ನು ಬದಲಾಯಿಸುವದಕ್ಕೆ ಸಾಧ್ಯವಿಲ್ಲವೆಂದೂ ಅರ್ಥಬರುವಂತೆ ತಿಳಿದುಕೊಂಡಿರುತ್ತಾರೆ. ಹೇಗೂ, ಗಮನಿಸಿರಿ, ಏನೆಂದರೆ 9:22ನೇ ವಚನವು "ಕೋಪಕ್ಕೆ ಗುರಿಯಾದ ನಾಶನಪಾತ್ರರನ್ನು ಬಹು ಸೈರಣೆಯಿಂದ ಸೈರಿಸಿಕೊಂಡಿದ್ದಾನೆ" ಎಂಬ ಬಗ್ಗೆ ಮಾತಾಡುತ್ತದೆ. ಇಲ್ಲಿ ಕಾಣುವ ಸೂಚ್ಯಾರ್ಥವೇನೆಂದರೆ ದೇವರ ಸೈರಣೆಯ ಉದ್ದೇಶವು ಇವರಿಗೆ ಬದಲಾಗುವದಕ್ಕೆ—ನಾಶನಕ್ಕಾಗಿ ಅಲ್ಲ, ಪ್ರಭಾವ ಹೊಂದುವದಕ್ಕೆ ಸಿದ್ಧಮಾಡಿದ ಪಾತ್ರೆಗಳಾಗಲು—ಒಂದು ಅವಕಾಶವನ್ನು ಕೊಡುವದೇ ಆಗಿತ್ತು ಎಂಬುದೆ. ನಾಶನಕ್ಕೆ ಸಿದ್ಧಮಾಡಿದ್ದ ಒಂದು ಪಾತ್ರೆಯು ಪ್ರಭಾವಕ್ಕಾಗಿ ಸಿದ್ಧಮಾಡಿದ ಪಾತ್ರೆಯಾಗಿ ಮಾರ್ಪಡಬಲ್ಲದ್ದಾದರೆ, ಪ್ರಭಾವಕ್ಕೆ ಸಿದ್ಧಪಡಿಸಿದ ಪಾತ್ರೆಯು ನಾಶನಕ್ಕೆ ಸಿದ್ಧಮಾಡಿದ ಪಾತ್ರೆಯಾಗಿಯೂ ಮಾರ್ಪಡಬಲ್ಲದು. ದೇವರ ಸಾರ್ವಭೌಮ ಕ್ರಿಯೆಗಳು ಮಾನವನಿಗಿರುವ ಸ್ವೇಚ್ಛಾ—ಚಿತ್ತವನ್ನು ರದ್ದುಗೊಳಿಸಿ ಬಿಡುವದಿಲ್ಲ. ಅಂತಿಮವಾಗಿ, ನಮ್ಮಲ್ಲಿ ಪ್ರತಿಯೊಬ್ಬರೂ ಒಂದಿಲ್ಲಾ ಒಂದು ಗುಂಪಿನೊಂದಿಗೆ ಸರಿಹೊಂದಿಕೆ ಮಾಡಿಕೊಳ್ಳುತ್ತೇವೆ: ಪ್ರಭಾವಕ್ಕೆ ಸಿದ್ಧಮಾಡಿದ ಪಾತ್ರೆಗಳೊಂದಿಗೆ ಅಥವಾ ನಾಶನಕ್ಕೆ ಸಿದ್ಧಮಾಡಿದ ಪಾತ್ರೆಗಳೊಂದಿಗೆ.

## ಯಾರ ಮೇಲೆ ತಪ್ಪು ಹೊರಿಸಬೇಕು? (9:30-33)

ಜನರು ತಮ್ಮ ವಿಫಲತೆಗಳಿಗೆ ಮತ್ತೊಬ್ಬರ ಮೇಲೆ ತಪ್ಪು ಹೊರಿಸುವ ಪ್ರವೃತ್ತಿಯುಳ್ಳವರಾಗಿರುತ್ತಾರೆ. ಆದಾಮ ಮತ್ತು ಹವ್ವಳು ದೇವರಿಗೆ ಅವಿಧೇಯರಾದಾಗ, ಆದಾಮನು ತನ್ನ ಹೆಂಡತಿಯ ಮೇಲೆ ತಪ್ಪು ಹೊರಿಸಿದನು ಮತ್ತು ಹವ್ವಳು ಸರ್ಪದ ಮೇಲೆ ತಪ್ಪು ಹೊರಿಸಿದಳು (ಆದಿಕಾಂಡ 3:12, 13). "ಹೊಣೆಗಾರಿಕೆ" ಎಂಬುದು "ಒಬ್ಬನ ನೆರೆಯವನ . . . ಭುಜಗಳ ಮೇಲೆ ಸುಲಭವಾಗಿ ಸ್ಥಳಾಂತರಿಸಬಹುದಾದ ಒಂದು ಬೇರ್ಪಡಿಸಬಲ್ಲ ಭಾರ" ಎಂಬುದಾಗಿ ಅರ್ಥನಿರೂಪಿಸಲ್ಪಟ್ಟಿದೆ.[39] ಅನೇಕರು ಸರಿಯಾದದ್ದನ್ನು ಮಾಡುವದಕ್ಕೆ ವಿಫಲರಾಗುವಾಗ ತಮ್ಮನ್ನು ಹೊರತುಪಡಿಸಿ ಬೇರೆ ಎಲ್ಲರ ಮೇಲೆಯೂ ಮತ್ತು ಎಲ್ಲದರ ಮೇಲೆಯೂ ತಪ್ಪು ಹೊರಿಸುವದಕ್ಕೆ ಬಯಸುತ್ತಾರೆ. "ಅದಕ್ಕೆ ನನ್ನ ತಂದೆತಾಯಿಗಳದ್ದೇ ತಪ್ಪು." "ಅದು ನನ್ನ ಸಂಗಾತಿಯ ತಪ್ಪು." "ಇದಕ್ಕೆಲ್ಲಾ ಸಮಾಜವೇ ಕಾರಣ." "ಬೇರೆ ಮಕ್ಕಳಿಗೆ ಇರುವಂತಹ ಸವಲತ್ತುಗಳು ನನಗೆ ಎಂದಿಗೂ ಇರಲಿಲ್ಲ."

ನಾನು ಬೇರೆಯವರ ಮೇಲೆ ತಪ್ಪು ಹೊರಿಸುವ ಬಗ್ಗೆ ಯೋಚಿಸುವಾಗ, ನನ್ನ ಮನಸ್ಸಿನಲ್ಲಿ ಪರಸ್ಪರ ಬೆರಳು ತೋರಿಸಿಕೊಳ್ಳುತ್ತಾ ಕಿರುಚುತ್ತಿದ್ದ ಇಬ್ಬರು ಹುಡುಗರನ್ನು ಕಾಣುತ್ತೇನೆ: “ಆತನು ಅದನ್ನು ಮಾಡಿದ್ದು”; “ಇಲ್ಲ, ಆತನೇ ಮಾಡಿದ್ದು.” ಒಬ್ಬ ತಾಯಿಯು ತನ್ನ ಮಗನಿಗೆ ಬುದ್ಧಿವಾದ ಹೇಳುವ ಬಗ್ಗೆ ಓದಿದೆನು, “ಬೆಕ್ಕಿನ ಬಾಲ ಎಳೆಯುವದನ್ನು ನಿಲ್ಲಿಸು!” ಆ ಬಾಲಕನು ಹೀಗೆ ಉತ್ತರಿಸಿದನು, “ನಾನೇನು ಬೆಕ್ಕಿನ ಬಾಲವನ್ನು ಎಳೆಯುತ್ತಿಲ್ಲ. ನಾನು ಬರೀ ಅದನ್ನು ಹಿಡಿದಿದ್ದೇನಷ್ಟೆ. ಎಳೆದಾಟವನ್ನೆಲ್ಲಾ ಅದೇ ಮಾಡುತ್ತಿದೆ.”[40]

ರೋಮಾ 9:30-33 ವಚನಗಳು ಬಹುಪಾಲು ಯೆಹೂದ್ಯರನ್ನು ದೇವರು ತಿರಸ್ಕರಿಸಿದ್ದಕ್ಕೆ ಯಾರು ಹೊಣೆಗಾರರು ಎಂಬ ಪ್ರಶ್ನೆಯ ಕುರಿತು ಮಾತಾಡುತ್ತವೆ. ಪೌಲನು ಹೊಣೆಗಾರಿಕೆಯನ್ನು ನೇರವಾಗಿ “ನಂಬಿಕೆ”ಯ ಬದಲಾಗಿ “ನೇಮನಿಷ್ಠೆಗಳ” ಆಧಾರದಲ್ಲಿ ನೀತಿಯನ್ನು ಹೊಂದುವದಕ್ಕೆ ಪ್ರಯತ್ನಿಸಿದ, ಅಪನಂಬಿಕೆಯುಳ್ಳ ಯೆಹೂದ್ಯರ ಮೇಲೆ ಹೊರಿಸುತ್ತಾನೆ. ಅವರ ಅಪನಂಬಿಕೆಯ ಕಾರಣದಿಂದ, ಯೇಸು ಅವರಿಗೆ “ಎಡವುವ ಕಲ್ಲೂ ಮುಗ್ಗರಿಸುವ ಬಂಡೆಯೂ” ಆದನು.

ಅಪನಂಬಿಕೆಯುಳ್ಳ ಯೆಹೂದ್ಯರು ಅವರ ಕಳೆದುಹೋದ ಸ್ಥಿತಿಯಲ್ಲಿಯೇ ಉಳಿಯಬೇಕಾಗಿರಲಿಲ್ಲ. ನನ್ನ ನೆನಪಿಗೆ ಬರುವ ಚಿತ್ರಣವೆಂದರೆ ಒಂದು ಮಗುವು ಮತ್ತೊಂದು ಮಗುವಿನೆಡೆಗೆ ಬೆರಳು ತೋರಿಸುತ್ತಾ “ಅವನ ಬಳಿಯಲ್ಲಿ ಬಿಸ್ಕತ್ತು ಇರುತ್ತದೆ, ನನ್ನ ಬಳಿಯಲ್ಲಿ ಅದು ಇರುವದಿಲ್ಲ!” ಎಂದು ದೂರುತ್ತಿರುವನು. ಎಷ್ಟೋ ಹೊತ್ತಿನಿಂದಲೂ, ಮೊದಲ ಮಗುವಿನ ತಾಯಿಯು ಒಂದು ಬಿಸ್ಕತ್ತನ್ನು ಹಿಡಿದುಕೊಂಡು “ಆದರೆ ನಿನಗೆ ಬಿಸ್ಕತ್ತು ಇಲ್ಲಿದೆಯಲ್ಲಾ! ನೀನು ಕೈ ಚಾಚಿ ಅದನ್ನು ತೆಗೆದುಕೊಳ್ಳಬೇಕಷ್ಟೇ!” ಎಂದು ಹೇಳುತ್ತಲೇ ಇದ್ದಾಳೆ.

ನಾವು ಯೆಹೂದ್ಯರನ್ನು ನೋಡಿ, “ಅವರು ಏಕೆ ಯೇಸುವನ್ನು ಅಂಗೀಕರಿಸಿಕೊಂಡು ರಕ್ಷಣೆ ಹೊಂದಲಿಲ್ಲ?” ಎಂದು ಚಕಿತಗೊಳ್ಳಬಹುದು. ಅಲ್ಲದೆ ಅವರು ಯೇಸುವನ್ನು ತಿರಸ್ಕಿರಿಸುತ್ತಾರೆ ಮತ್ತು ನಂತರ ದೇವರು ಅವರನ್ನು ತಿರಸ್ಕರಿಸಿದ್ದಕ್ಕಾಗಿ ಗುಣಗುಟ್ಟುತ್ತಾರೆಂಬುದಕ್ಕಾಗಿ ನಾವು ಅವರನ್ನು ಹಾಸ್ಯಾಸ್ಪದವಾಗಿ ಸಹ ಪರಿಗಣಿಸಬಹುದು. ಯೆಹೂದ್ಯರನ್ನು ಟೀಕಿಸುವದರಲ್ಲಿ ನಾವು ನಮ್ಮನ್ನೇ ಖಂಡಿಸಿಕೊಳ್ಳುವ ಸಾಧ್ಯತೆಯಿರುತ್ತದೋ? ನಾವು ಯೇಸುವನ್ನು ನಮ್ಮ ಮೆಸ್ಸೀಯನಾಗಿಯೂ ನಮ್ಮ ರಕ್ಷಕನಾಗಿಯೂ ಅಂಗೀಕರಿಸಿಕೊಂಡಿದ್ದೇವೋ? ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನೆಂದು ನಂಬುತ್ತೇವೋ, ಮತ್ತು ಆತನನ್ನು ಕರ್ತನೆಂದು ಅರಿಕೆ ಮಾಡಿದ್ದೇವೋ? ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ಆತನನ್ನು ಕೂಗಿದ್ದೇವೋ? ಆತನೊಂದಿಗೆ ಕ್ರೈಸ್ತಜೀವಿತದಲ್ಲಿ ನಡೆಯುತ್ತಿರುವಾಗ ನಿರಂತರವಾಗಿ ಆತನನ್ನು ಕರೆಯುತ್ತೇವೋ? ಕರ್ತನೊಂದಿಗಿನ ನಮ್ಮ ಸಂಬಂಧದಲ್ಲಿ ಏನಾದರೂ ಕೊರತೆಯಿರುತ್ತದೋ? ಏನಾದರೂ ಇರುವದಾದರೆ, ನಮ್ಮ ಅಗತ್ಯತೆಯನ್ನು ಒಪ್ಪಿಕೊಳ್ಳೋಣ ಮತ್ತು ಕರ್ತನನ್ನು ಹಾಗೂ ಆತನ ಮಾರ್ಗವನ್ನು ಅಂಗೀಕರಿಸಿಕೊಳ್ಳಲು ತ್ವರೆಪಡೋಣ. ನಾನು ಕಠೋರ ಮಾತುಗಳನ್ನಾಡಲು ಬಯಸುವದಿಲ್ಲ, ಆದರೆ ಸರಳವಾಗಿ ಹೇಳುವದಕ್ಕೆ ಇಷ್ಟಪಡುತ್ತೇನೆ: ನೀವು ಕಳೆದುಹೋಗುವದೇ ಆದಲ್ಲಿ, ನೀವು ನಿಮ್ಮ

ಮೇಲೆಯೇ ಹೊರತು ಬೇರೆ ಯಾರ ಮೇಲೆಯೂ ತಪ್ಪು ಹೊರಿಸುವದಕ್ಕೆ ಸಾಧ್ಯವಿಲ್ಲ!

## ದೇವರ ಸಾರ್ವಭೌಮತೆ ಮತ್ತು ಮಾನವನ ಹೊಣೆಗಾರಿಕೆ (9:30-33)

ಒಂದಕ್ಕೊಂದು ತದ್ವಿರುದ್ಧವಾಗಿರುವಂತೆ ತೋರುವ ದೇವರ ಸಾರ್ವಭೌಮತೆ ಹಾಗೂ ಮಾನವನ ಹೊಣೆಗಾರಿಕೆ ಸಿದ್ಧಾಂತಗಳ ವಿಷಯವಾಗಿ, R. B. Kuiper ಹೀಗೆ ಹೇಳುತ್ತಾನೆ,

> ನಾನು ಅವುಗಳನ್ನು ಒಳಮಾಳಿಗೆಯಲ್ಲಿನ ಎರಡು ರಂಧ್ರಗಳ ಮೂಲಕ ಮೇಲ್ಗಡೆಯಿರುವ ಒಂದು ರಾಟೆಯ ಮೇಲೆ ಸಾಗುವ ಎರಡು ಹಗ್ಗಗಳಿಗೆ ಹೋಲಿಸುತ್ತೇನೆ. ಅವುಗಳಿಂದ ನಾನು ಆಸರೆ ಬಯಸುವದಾದರೆ, ನಾನು ಅವೆರಡನ್ನೂ ಹಿಡಿದುಕೊಳ್ಳಬೇಕು. ನಾನು ಒಂದನ್ನು ಮಾತ್ರವೇ ಹಿಡಿದುಕೊಂಡರೆ ಕೆಳಕ್ಕೆ ಜಾರಿ ಬಿಡುವೆನು.
>
> . . . ಮಗುವಿನಂಥ ನಂಬಿಕೆಯೊಂದಿಗೆ, ನಾನು ಎರಡೂ ಹಗ್ಗಗಳನ್ನು ಹಿಡಿದುಕೊಳ್ಳುತ್ತೇನೆ, ಅಂತೂ, ಸತ್ಯದ ಹಗ್ಗದ ಎರಡೂ ಎಳೆಗಳು ಒಂದೇ ತುಂಡಿನದೆಂಬುದನ್ನು ನಾನು ನಿತ್ಯತ್ವದಲ್ಲಿ ಕಾಣುವೆನೆಂಬ ಪೂರ್ಣ ಭರವಸೆಯಿಂದಿರುವೆನು.[41]

---

### ಅಡಿ ಟಿಪ್ಪಣಿಗಳು

[1]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 5. [2]N. T. Wright, *The Climax of the Covenant: Christ and the Law in Pauline Theology* (Minneapolis: Fortress Press, 1993), 231. [3]Ibid. [4]ಇದನ್ನು 2:15ರಲ್ಲಿನ ಹೇಳಿಕೆಯೊಂದಿಗೆ ಹೋಲಿಸಿ ನೋಡಿರಿ. [5]"ಪವಿತ್ರಾತ್ಮನಲ್ಲಿ" ಎಂಬುದು ಪೌಲನು ಪವಿತ್ರಾತ್ಮನಿಂದ ಪ್ರೇರಿಸಲ್ಪಟ್ಟಿದ್ದನೆಂಬ ವಾಸ್ತವಾಂಶವನ್ನು ದೃಢೀಕರಣ ಮಾಡುವದಾಗಿರುತ್ತದೆ. [6]J. Behm, "*anáthema*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 57. [7]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 292. ಕೆಲವು ವೇದಪಂಡಿತರು ರೋಮಾ 9:3ರಲ್ಲಿನ *anathema ಎಂಬುದಕ್ಕೆ ಕಡಿಮೆ ಕಠೋರವಾದ ಅರ್ಥನಿರೂಪಣೆಯನ್ನು ನೀಡುತ್ತಾರೆ, ಆದರೆ ಆ ವಚನದಲ್ಲಿರುವ ಪದವು ನಿತ್ಯವಾಗಿ ಕಳೆದುಹೋಗುವದನ್ನು ಸಹ ಒಳಗೊಂಡಿರುತ್ತದೆಂದು ಬಹುತೇಕರು ನಂಬುತ್ತಾರೆ.* [8]ದೇವರು ಮೋಶೆಗೆ "ಯಾರಾರು ನನ್ನ ಮಾತನ್ನು ಮೀರಿ ಪಾಪ ಮಾಡಿದ್ದಾರೋ" ಅವರನ್ನೇ ಹೊಣೆಗಾರರನ್ನಾಗಿಸತಕ್ಕದ್ದು ಎಂದು ಹೇಳಿದನು (ವಿಮೋಚನಕಾಂಡ 32:33). [9]ನಾನೊಬ್ಬ ಕ್ರೈಸ್ತನ, ಆದರೆ ಅದು ನಾನು ರೋಪರ ಕುಟುಂಬದ ಒಂದು ಭಾಗ ಹಾಗೂ ಅಮೆರಿಕದ ನಾಗರಿಕನು ಸಹ ಆಗಿದ್ದೇನೆ ಎಂಬ ವಾಸ್ತವಾಂಶವನ್ನು ಬದಲಾಯಿಸುವದಿಲ್ಲ. [10]Walter W. Wessel, Notes on Romans, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 1719.

[11]"ಪುತ್ರಪದವಿ" (υἱοθεσία, *huiothesia*) ಎಂಬ ಪದವು ಹಳೆಯ ಒಡಂಬಡಿಕೆಯಡಿಯಲ್ಲಿದ್ದ ಇಸ್ರಾಯೇಲ್ಯರು ಹಾಗೂ ಹೊಸ ಒಡಂಬಡಿಕೆಯಡಿಯಲ್ಲಿನ ಕ್ರೈಸ್ತರು ಇಬ್ಬರಿಗೂ ಅನ್ವಯವಾಗುತ್ತದೆ (8:15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). [12]ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ ಕೇವಲ "ಒಡಂಬಡಿಕೆ" (ಏಕವಚನ) ಎಂದು ಮಾತ್ರವೇ ಇರುತ್ತದೆ. ಪೌಲನ ಮನಸ್ಸಿನಲ್ಲಿ ಕೇವಲ ಒಂದೇ ಒಡಂಬಡಿಕೆ ಇದ್ದದ್ದಾಗಿದ್ದರೆ, ಅದು ಸಿನಾಯಿ ಪರ್ವತದಲ್ಲಿ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಯೆ ಆಗಿತ್ತು (ವಿಮೋಚನಕಾಂಡ 24:8). [13]W. E. Vine, Merrill F. Unger, and William White, Jr., *Vine's Complete Expository*

*Dictionary of Old and New Testament Words* (Nashville: Thomas Nelson Publishers, 1985), 563. (For more information on *latreia,* see comments on 12:1.) [14]Gerald R. Cragg, "The Epistle to the Romans," in *The Interpreter's Bible*, vol. 9, *Acts, Romans*, ed. George Arthur Buttrick (Nashville: Abingdon Press, 1954), 540. [15]Wessel, 1719. [16]Moo, 294. [17]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 147. [18]*Eklektos* ಎಂಬ ಪದದಿಂದಲೇ ನಮಗೆ "ಆರಿಸಿಕೊಳ್ಳುತ್ತಾನೆಂಬ" ಪದವು ಸಿಕ್ಕುತ್ತದೆ (ನೋಡಿರಿ KJV). ಕ್ಯಾಲ್ವಿನ್‌ವಾದಿಗಳು "ಆರಿಸಿಕೊಳ್ಳುತ್ತಾನೆಂಬ" ಪದವನ್ನು ಅಳವಡಿಸಿಕೊಂಡು ಅದನ್ನು ತಮ್ಮ ದೈವಶಾಸ್ತ್ರದ ಒಂದು ಪ್ರಮುಖ ಭಾಗವಾಗಿ ಮಾಡಿಕೊಂಡರು (8:29, 30ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ಆರಿಸಿಕೊಳ್ಳುತ್ತಾನೆಂಬ" ಪದವನ್ನು ಅರ್ಥಮಾಡಿಕೊಳ್ಳುವದಕ್ಕೆ ಅತ್ಯಂಥ ಸರಳವಾದ ದಾರಿಯೆಂದರೆ "election" ("ಆರಿಸಿಕೊಳ್ಳುತ್ತಾನೆಂಬ") ಎಂಬದರ ಮುಂದೆ "s" ನ್ನು ಸೇರ್ಪಡೆಗೊಳಿಸಿರಿ ಮತ್ತು "selection" (ಆಯ್ಕೆ ಮಾಡಿಕೊಳ್ಳುವದು) ಬಗ್ಗೆ ಆಲೋಚಿಸಿರಿ. [19]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 352. [20]Ibid., 356.

[21]ಈ ವಾಕ್ಯಭಾಗದಲ್ಲಿ, "ಕರುಣೆ ಉಂಟೋ" (ἐλεέω, *eleeō*) ಮತ್ತು "ಕನಿಕರವದೆಯೋ" (οἰκτίρω, *oiktirō ದಿಂದ*) ಎಂಬ ಪದಗಳು ಹೆಚ್ಚುಕಡಿಮೆ ವಿನಿಮೇಯವಾಗಿ ಉಪಯೋಗಿಸಲ್ಪಟ್ಟಿವೆ. [22]ಈ ಮಾತುಗಳು ಮೂಲತಃ ಫರೋಹನಿಗೆ ಹೇಳಲ್ಪಟ್ಟವುಗಳು (ವಿಮೋಚನಕಾಂಡ 9:13, 16), ಆದರೆ ಅನಂತರದಲ್ಲಿ ಭವಿಷ್ಯದ ಸಂತತಿಗಳ ಪ್ರಯೋಜನಾರ್ಥವಾಗಿ ಬರೆದಿಡಲ್ಪಟ್ಟಿರುತ್ತವೆ ("ಶಾಸ್ತ್ರಗಳು" ಅಂದರೆ "ಬರಹಗಳು" ಎಂದರ್ಥವಾಗಿದೆ). [23]ವಿಮೋಚನಕಾಂಡ 9:16ರಲ್ಲಿ, NASBಯು ನೀಡುವ ನಿರೂಪಣೆಯು LXXದೊಂದಿಗೆ ಒಮ್ಮತದಲ್ಲಿರುತ್ತದೆ. [24]Moo, 311. [25]Morris, 361. [26]*Anthrōpos ಎಂಬುದು "ಮನುಷ್ಯ" ಎಂಬುದಕ್ಕಾಗಿರುವ ಜಾತಿವಿಶಿಷ್ಟವಾದ ಪದವಾಗಿದ್ದು ಅದರಲ್ಲಿ ಪುರುಷ ಹಾಗೂ ಸ್ತ್ರೀ ಇಬ್ಬರೂ ಸೇರಿರಬಹುದಾಗಿದೆ.* [27]ವೇದಪಂಡಿತರು ಈ ಪಾತ್ರೆಗಳನ್ನು "ನಾಶನ"ಕ್ಕಾಗಿ "ಸಿದ್ಧಮಾಡಿದ"ವರು ಯಾರು ಎಂಬದನ್ನು ಚರ್ಚಿಸುತ್ತಾರೆ:ಸ್ವತಃ ಆ ವ್ಯಕ್ತಿಗಳೋ, ದೇವರೋ, ಸೈತಾನನೋ< ಅಥವಾ ಯಾರು? 23ನೇ ವಚನವು ದೇವರು ಪ್ರಭಾವ ಹೊಂದುವದಕ್ಕೆ ಪಾತ್ರರನ್ನು ಸಿದ್ಧಮಾಡುವ ಬಗ್ಗೆ ಮಾತಾಡುತ್ತಾದ್ದರಿಂದ, 22ನೇ ವಚನದಲ್ಲಿ ಬಹುಶಃ ಪೌಲನು ಮನಸ್ಸಿನಲ್ಲಿ ದೇವರ ಕಾರ್ಯವನ್ನು ಹೊಂದಿದ್ದನು. ಹೇಗೂ, ಅನೇಕ ಕಾರಣಾಂಸಗಳ ಸಂಯೋಜನೆಯಿರುತ್ತದೆಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ನಿಜವಾದ ಅರ್ಥದಲ್ಲಿ, ವ್ಯಕ್ತಿಪರರು ತಮ್ಮ ಜೀವಿತಗಳ ಮೂಲಕ ಪರಲೋಕ ಅಥವಾ ನರಕಕ್ಕಾಗಿ ತಮ್ಮನ್ನು ಸಿದ್ಧಪಡಿಸಿಕೊಳ್ಳುತ್ತಾರೆ. [28]ಪೌಲನು ರೋಮಾಪುರದವರಿಗೆ ಬರೆಯುವ ಕಾಲದಲ್ಲಿ, ಸಭೆಯಲ್ಲಿ ಯೆಹೂದ್ಯರಿಗಿಂತಲೈ ಅನ್ಯಜನರೇ ಅಧಿಕವಾಗಿದ್ದರು. ಆ ಅನ್ಯಜನರು ಯೇಸುವನ್ನು ಅಂಗೀಕರಿಸಿದ್ದರೆ, ಬಹುತೇಕ ಯೆಹೂದ್ಯರು ಯೇಸುವನ್ನು ಅಂಗೀಕರಿಸಿಕೊಂಡಿರಲಿಲ್ಲ. [29]ಯೆಶಾಯ 10:23ರ ಅರ್ಥವು ಇಷ್ಟೆ, ಏನೆಂದರೆ ದೇವರು ಏನು ಮಾಡುತ್ತೇನೆಂದು ಹೇಳುತ್ತಾನೋ ಅದನ್ನೇ ಮಾಡುವನು—ಮತ್ತು ಅದರ ವಿಷಯದಲ್ಲಿ ಆತನು ವಿಳಂಬ ಮಾಡುವದಿಲ್ಲ ಎಂಬುದೆ. [30]Vine, 522-23. ಇಂದು "ಒಂದು ಅಂಶ" ಎಂಬುದು ಒಂದು ಉಡುಪನ್ನು ಸಿದ್ಧಪಡಿಸಿದ ಮೇಲೆ ಮಿಕ್ಕುವ ಒಂದು ತುಂಡು ಬಟ್ಟೆಯನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಡುತ್ತದೆ.

[31]"Sabaoth" ಎಂಬುದನ್ನು "Sabbath" ಎಂಬುದರೊಂದಿಗೆ ಗಲಿಬಿಲಿಪಡಿಸಿಕೊಳ್ಳಬಾರದು. "Sabaoth" ಎಂದರೆ "ಸೇನೆಗಳು," "ಸೈನ್ಯಗಳು" ಎಂಬುದನ್ನು ಸೂಚಿಸುತ್ತದೆ (McCord). NIV ಯು ಈ ಪದಗುಚ್ಛವನ್ನು "ಸರ್ವಶಕ್ತನಾದ ದೇವರು" ಎಂದು ಅನುವಾದಿಸುತ್ತದೆ. [32]Morris, 374, n. 135. [33]ಲೇಖಕರು ತಮ್ಮನ್ನು ಈ ರೀತಿಯ ಪ್ರಶ್ನೆಗಳಿಂದ ಚಿಂತಿತಗೊಳಿಸಿಕೊಳ್ಳುತ್ತಾರೆ: ಪೌಲನು "ನೀತಿಯನ್ನು ಉಂಟುಮಾಡುವ ಒಂದು ಧರ್ಮಶಾಸ್ತ್ರ," "ನೀತಿಯನ್ನು ವಾಗ್ದಾನ ಮಾಡಿದ ಒಂದುಯ ಧರ್ಮಶಾಸ್ತ್ರ," ಅಥವಾ "(ಕ್ರಿಯೆಗಳ ಮೂಲಕ) ನೀತಿಯನ್ನು ಸಾಧಿಸಿಕೊಳ್ಳುವ ಒಂದು ಧರ್ಮಶಾಸ್ತ್ರ (ನಿಯಮ)" ಎಂಬ ಅರ್ಥದಲ್ಲಿ ಹೇಳಿದನೋ? ಪೌಲನು ಯೆಹೂದ್ಯರನ್ನು ನೀತಿಗೆ (ಕ್ರಿಸ್ತನೆಡೆಗೆ) ನಡಿಸುವಂತೆ ವಿನ್ಯಾಶಿಸಲ್ಪಟ್ಟಿದ್ದ, ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸಿ ಹೇಳಿದನೆಂದು ಕೆಲವರು ಭಾವಿಸುತ್ತಾರೆ (ಗಲಾತ್ಯ 3:24). [34]Vine, 606. [35]Ibid., 441. [36]ಬಹಳಷ್ಟು ಸಾಮಾನ್ಯ ಹೇಳಿಕೆಗಳ ಹಾಗೆಯೇ, ಇದು ಅರ್ಹಗೊಳಿಸಲ್ಪಡುವ ಅಗತ್ಯವಿರುತ್ತದೆ: *ಎಲ್ಲಿಯ ವರೆಗೆ ಅದು ಆತನ ಚಿತ್ತ ಮತ್ತು ಗುಣಸ್ವಭಾವದೊಂದಿಗೆ ಸಾಮಂಜಸ್ಯತೆಯಲ್ಲಿರುತ್ತದೋ ಅಲ್ಲಿಯ ತನಕ* ದೇವರು ತನಗೆ ಇಷ್ಟವಾಗುವ ಪ್ರಕಾರ ಮಾಡಬಲ್ಲನು. [37]C. E. B. Cranfield, *Romans: A Shorter Commentary* (Grand Rapids, Mich.: Wm. B. Eerdmans Publishing Co., 1985), 215. For other references to God's mercy, see 11:30-32. [38]Morris, 345. [39]Ambrose Bierce, quoted in Leonard Louis Levinson, *Webster's*

*Unafraid Dictionary* (New York: Collier Books, 1967), 206. [40]ಮತ್ತೊಬ್ಬರ ಮೇಲೆ ತಪ್ಪನ್ನು ಹೊರಿಸುವದಕ್ಕೆ ಪ್ರಯತ್ನಿಸುವ ಜನರ ಕುರಿತ ಬಹಳಷ್ಟು ಕಥೆಗಳನ್ನು ಹೇಳಬಹುದಾಗಿದೆ. ಒಮ್ಮೆ ನಾನು ತನ್ನ ಕೋಪವನ್ನು ನಿಯಂತ್ರಿಸಿಕೊಳ್ಳಲಾಗದಿರುತ್ತಿದ್ದ ಗಂಡನೊಬ್ಬನ ಪತ್ನಿಗೆ ಸಮಾಲೋಚನೆಯನ್ನು ಹೇಳಿದೆನು. ಗಂಡನು ತನ್ನ ಮುಷ್ಠಿಯಿಂದ ಕಿಟಕಿಯನ್ನು ಗುದ್ದಿ, ಗ್ಲಾಸ್‌ನ್ನು ಪುಡಿಪುಡಿ ಮಾಡಿದ್ದನು ಮತ್ತು ಆತನ ಕೈಗಳಿಗೆ ಆಳವಾಗಿ ಗಾಯಗಳಾಗಿದ್ದವು. ಆತನು ಅಷ್ಟೆಲ್ಲಾ ಮಾಡಿದ ಬಳಿಕ, ತನ್ನ ರಕ್ತ ಸುರಿಯುವ ಕೈಯನ್ನೆತ್ತಿ ತನ್ನ ಹೆಂಡತಿಗೆ, "ನೋಡು ನಿನ್ನಿಂದ ನಾನು ಏನು ಮಾಡಬೇಕಾಗಿ ಬಂತು!" ಎಂದು ಹೇಳಿದನು.

[41]Craig Brian Larson, ed., *Illustrations for Preaching and Teaching* (Grand Rapids, Mich.: Baker Books, 1993), 234 ರಲ್ಲಿ ಉಲ್ಲೇಖಿಸಲ್ಪಟ್ಟಿದೆ.